ಜನಶಕ್ತಿ

ದುಡಿವ ಜನರ ಪ್ರಾಣಮಿತ್ರ

ಸಂಪುಟ 2 ಸಂಚಿಕೆ 4

ಜನವರಿ 27, 2008

ಕನ್ನಡ ವಾರಪತ್ರಿಕೆ

ರೂ. 5/-

ಅಧಿಕಾರ ಹಿಡಿಯಲು ಕೋಮುವಾದಿಗಳ ಸಂಚು



ಕಾಂಗ್ರೆಸ್‌ಗೆ ಬಿಜೆಪಿ ಪರ್ಯಾಯವೇ?



'ಡೋಲಾ'ಯಮಾನದ ನಾಯಕರು




ಅಪೌಷ್ಟಿಕತೆ ನಿವಾರಿಸುವ ಅಂಗನವಾಡಿ ಮೇಲೆ ಧಾಳಿ



ಬದುಕುವ ಕಲೆಯೋ ? ಸುಲಿಗೆಯ ಬಲೆಯೋ ?

ಕೈಗಾರಿಕೆ ಹಾಗೂ ಕಾರ್ಮಿಕ ವರ್ಗ



ಡಾ. ಶಾಂತರಸ ಹೆಂಬೇರಾಳು ನವೋದಯದಿಂದ ಮೊದಲು ಮಾಡಿ ಬಂಡಾಯದವರೆಗೆ ಕನ್ನಡ ಸಾಹಿತ್ಯ ಭೂಮಿಯಲ್ಲಿ ಗುಪ್ತವಾಹಿನಿಯಂತೆ ಹರಿಯುತ್ತಿರುವ ಹೆಸರು. ಮಾನವೀಯ ಮೌಲ್ಯಗಳ ಹುಡುಕಾಟದಲ್ಲಿ ಸದಾ ನಿರತರಾಗಿರುವ ಈ ಹಿರಿಯ ಸಾಹಿತಿ 2006ರ ಜನವರಿಯಲ್ಲಿ ನಡೆದ 72 ನೇಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆಯ ಗೌರವಕ್ಕೆ ಪಾತ್ರರಾದವರು. ಶಾಂತರಸರ ಹೋರಾಟದ ಬದುಕಿಗೆ, ಬಹುಮುಖಿ ವ್ಯಕ್ತಿತ್ವಕ್ಕೆ 2007ನೇ ಸಾಲಿನ ನಾಡೋಜ ಪ್ರಶಸ್ತಿ ಸಂದ ಸಂದರ್ಭದಲ್ಲಿ ಈ ಒಂದು ಸಂದರ್ಶನ.

"ಪ್ರಜಾಪ್ರಭುತ್ವದ ಮುಖವಾಡ ಧರಿಸಿ ಹಿಂದುತ್ವ, ಜಾತೀಯತೆ ಬೆಳೆಯುತ್ತಿದೆ"

ನಾಡೋಜ ಪ್ರಶಸ್ತಿ ಪುರಸ್ಕೃತ ಡಾ. ಶಾಂತರಸ ಹೆಂಬೇರಾಳು

ಜನಶಕ್ತಿ: ಅತ್ಯಂತ ಹಿಂದುಳಿದ ಪ್ರದೇಶದಲ್ಲಿ ಆಗ ಶಿಕ್ಷಣ ಮರೀಚಿಕೆಯಾಗಿತ್ತು, ಅಂತಹ ಪರಿಸ್ಥಿತಿಯಲ್ಲಿ ಶಿಕ್ಷಣ ಪಡೆದ ನೀವು ಎದುರಿಸಿದ್ದು ಹೇಗೆ?

ಶಾಂತರಸ: ದಿ:07.04.1924 ರಂದು ಜನಿಸಿದ ನಾನು ಹೆಂಬೆರಾಳುವಿನಲ್ಲಿ ಖಾಸಗಿ ಶಾಲೆಯಲ್ಲಿ 3 ವರ್ಷ ಕನ್ನಡ ಕಲಿತೆ, ನಂತರ ಶಾಲೆ ಮುಚ್ಚಿದ್ದರಿಂದ 10ನೇ ವಯಸ್ಸಿಗೆ ತಿಮ್ಮಾಪುರದಲ್ಲಿ ತಡವಾಗಿ ಉರ್ದುಶಾಲೆಗೆ ಸೇರಿದೆ. 20ನೇ ವಯಸ್ಸಿಗೆ ಮೆಟ್ರಿಕ್ ಪಾಸು ಮಾಡಿಕೊಂಡೆ. ಕಿತ್ತು ತಿನ್ನುವ ಬಡತನದಿಂದಾಗಿ ರಾಯಚೂರು, ಗುಲ್ಬರ್ಗಾ ಮತ್ತು ಲಾತೂರ ಜಿಲ್ಲೆಗಳಲ್ಲಿ ಎಲ್ಲೆಲ್ಲಿ ಊಟ ಸಿಕ್ಕತ್ತೋ ಅಲ್ಲಲ್ಲಿ ನನ್ನ ವಿದ್ಯಾಭ್ಯಾಸವನ್ನು ಮಾಡಿದೆ. ಮೆಟ್ರಿಕ್ ಮುಗಿದ ಮರು ವರ್ಷ ಶಿಕ್ಷಕನಾಗಿ ಹಮದರ್ದ್ ಶಾಲೆಗೆ ಸೇರಿದ ಮೇಲೆ ಎಂ.ಎ. ಬಿ.ಎಡ್. ಮುಗಿಸಿದೆ.

ಜ.ಶ.: ನೀವು ಸಾಮಾಜಿಕವಾಗಿ ತೊಡಗಿಸಿಕೊಳ್ಳಲು ಕಾರಣಗಳೇನು?

ಶಾ: ನನ್ನ ಸುತ್ತಮುತ್ತಲಿನ ಜನರಲ್ಲಿ ಮನೆ ಮಾಡಿದ್ದ ಮೂಢನಂಬಿಕೆ, ಅಜ್ಞಾನ, ಮೌಢ್ಯತೆ ಬಡತನ ಇತ್ಯಾದಿ ಹೊಡೆದೋಡಿಸುವ ಆಸೆಯಿಂದ ಸಾಮಾಜಿಕವಾಗಿ ತೊಡಗಿಕೊಂಡೆ. ಜನರ ಭಾವನೆಗಳನ್ನು ಬದಲಾಯಿಸುವುದು ನನ್ನಿಂದ ಮಾತ್ರ ಸಾಧ್ಯವಿಲ್ಲವೆಂದು ನನ್ನೊಂದಿಗೆ ಸಿದ್ರಾಮ ಜಂಬಲದಿನ್ನಿ, ವೀರನಗೌಡ್ರ ನೀರಮಾನ್ವಿ ಮತ್ತು ಚೆನ್ನಬಸಪ್ಪ ಬೆಟ್ಟದೂರ ಮುಂತಾದವರೆಲ್ಲ ಸೇರಿ ವಚನ ಸಾಹಿತ್ಯವನ್ನು ಚೆನ್ನಾಗಿ ಅಭ್ಯಾಸ ಮಾಡಿ, ವಚನಗಳನ್ನು ಅರ್ಥೈಸಿಕೊಂಡು ಊರೂರು ಪ್ರಯಾಣಿಸಿ ವಿಚಾರಗಳನ್ನು ಜನರಿಗೆ ತಿಳಿಸುತ್ತಿದ್ದೆವು. ಜನಪರ ವಚನಗಳನ್ನು ಆಯ್ಕೆ ಮಾಡಿ ಜನರ ಮಧ್ಯೆ ಹಾಡುವುದರೊಂದಿಗೆ ವೈಚಾರಿಕತೆ ಬೆಳೆಸುತ್ತಿದ್ದವು.

ಜ.ಶ.: ನೀವು ಸಾಮಾಜಿಕವಾಗಿ ತೊಡಗಿಸಿಕೊಂಡ ಪ್ರಾರಂಭದ ಕಾಲದಲ್ಲಿ ಸಾಹಿತ್ಯ ಕ್ಷೇತ್ರ ಹೇಗಿತ್ತು?

ಶಾ: ಹೈದರಬಾದ್ ಕರ್ನಾಟಕ ಭಾಗದಲ್ಲಿ ಬರೆಯುವವರೇ ಕಡಿಮೆ ಇದ್ದರು. ಆ ಕಾಲದಲ್ಲಿ ಬರೆದದ್ದನ್ನು ಪ್ರಕಟ ಮಾಡುವವರು ಯಾರೂ

> 'ಜೀವವಿರೋಧಿ ಜಾಗತೀಕರಣದಿಂದ ಭಾಷೆ - ಸಂಸ□ತಿ ನಾಶ. ಭಾಷೆ ಕ್ಷೀಣವಾದರೆ ಸಂಸ□ತಿಯೂ ಕ್ಷೀಣ'

ಇರಲಿಲ್ಲವಾದ್ದರಿಂದ ಲೇಖಕರ ಕೊರತೆ ಎದ್ದು ಕಾಣುತ್ತಿತ್ತು. ನಮ್ಮ ಬಳಗದವರ ಬರವಣಿಗೆಗಳನ್ನು ಪ್ರಾರಂಭದಲ್ಲಿ ಧಾರವಾಡದವರೇ ಪ್ರಕಟಿಸುತ್ತಿದ್ದರು. ನಂತರ ಪ್ರಯತ್ನಪಟ್ಟು 1948ರಲ್ಲಿ 'ಮುಸುಕುತೆರೆ' ಪುಸ್ತಕ ಹೊರತಂದಿದ್ದು ಹೊಸ ಅನುಭವ ನೀಡಿತು. ಇದು ಹೈದ್ರಾಬಾದ್



ಡಾ. ಪ್ರಭು ಖಾನಾಪುರೆ, ಶಾಂತರಸ, ಕೆ.ನೀಲಾ

**ಸಂದರ್ಶಕರು:
ಎಸ್.ವೈ. ಗುರು ಶಾಂತ್,
ಕೆ.ಎಸ್.ವಸ್ತ್ರದ್, ಕೆ.ನೀಲಾ**

ಕರ್ನಾಟಕದ ಕನ್ನಡ ಸಾಹಿತ್ಯದಲ್ಲಿ ಒಂದು ಮೈಲಿಗಲ್ಲು. 'ಅನುಭವ ಮಂಟಪ' ಸ್ಥಾಪಿ... ಶರಣರ ತತ್ವಗಳ ಹಿನ್ನೆಲೆಯಿಟ್ಟುಕೊಂ... ಪುಸ್ತಕಗಳನ್ನು ಪ್ರಕಟಿಸಿದೆವು. ಬಸವಣ್ಣನ ಆ ಕಾಲ... ತತ್ವಗಳು ಮತ್ತು ಚಳುವಳಿ ಸಮತಾವಾದ... ಹತ್ತಿರವಾಗಿತ್ತು. ಕಮ್ಯುನಿಸ್ಟ್ ತತ್ವವೂ ಕಾಯ... ಜೀವಿಗಳ ಚಳುವಳಿಯಾಗಿ ಬೆಳೆದು ಬಂತ... ಎಂಬುದನ್ನು ಗಮನಿಸಬೇಕು.

ಜ.ಶ: ಬದ್ಧತೆಯಿಂದ ತೊಡಗಿದ ನಿಮಗೆ ಸಾಮಾಜಿಕ ಒತ್ತಾಸೆ, ಪ್ರೇರಣೆಗಳೇನಿದ್ದವು?

ಶಾ: ನಮ್ಮದು ಸಂಪ್ರದಾಯಸ್ಥ ಕುಟುಂಬ, ನಮ... ತಂದೆ ಪಂಚಾಂಗ, ಜೋತಿಷ್ಯಶಾಸ್ತ್ರ ಹೇಳುತ್ತಿದ್ದರು... ಪಂಚಾಂಗ ಹೇಳುವ ಬಗ್ಗೆ ನಾನು ವಿರೋಧಿಸಿದ... ಅಂದಿನ ಸಾಮಾಜಿಕ ಪರಿಸ್ಥಿತಿ ಒತ್ತಡಗಳೇ ನ... ಬದ್ಧತೆಗೆ ಕಾರಣಗಳಾದವು. ಅಲ್ಲದೇ ನಮ್ಮ ತಂ... ಹಾಡುತ್ತಿದ್ದ ಮಾನವತಾವಾದದ ತತ್ವಪದಗಳ... ನಮ್ಮ ಮೇಲೆ ಗಾಢ ಪರಿಣಾಮ ಬೀರಿದ್ದ... ಮಾನವೀಯ ಸಾಮಾಜಿಕ ಪರಿಸ್ಥಿತಿಗನುಗುಣವಾ... ಬರೆದ ತತ್ವಪದಕಾರರ ಹಾಡುಗಳು ನಮ... ಪ್ರೇರಣೆಯಾಗಿದ್ದವು.

ಜ.ಶ: ಬ್ರಿಟಿಷರ ಕಾಲದಲ್ಲಿ ಹೈದ್ರಾಬಾದ್ ಕರ್ನಾಟಕದ ಪರಿಸ್ಥಿತಿ ಹೇಗಿತ್ತು?

ಶಾ: ಹೈದ್ರಾಬಾದ್ ಕರ್ನಾಟಕದ ಪರಿಸ್ಥಿತಿ ಎ... ಉರ್ದುಮಯವಾಗಿತ್ತು. ಕನ್ನಡ ಭಾ... ಸಾಯೋ ಸ್ಥಿತಿಯಲ್ಲಿತ್ತು. ಉದು... ಕಲಿಯದಿದ್ದರೆ ಯಾವುದೇ ಉದ್ಯೋ... ದೊರೆಯುತ್ತಿರಲಿಲ್ಲ. ಮನೆಯಲ್ಲಿ ಕನ್ನ... ಕಲಿಯುತ್ತಿದ್ದೆವು. ಭಾಷೆ ಬಗ್ಗೆ ಇಂದು... ಸಮಾಜದಲ್ಲಿ ಕಾಡುವ ಗೊಂದ... ಅಂದೂ ಇತ್ತು. ಆದರೆ ಕಡಿಮೆ ಇತ್ತು... ನವಾಬರ ಆಡಳಿತದಲ್ಲಿ ಭ್ರಷ್ಟಾಚಾ... ಇರಲಿಲ್ಲ. ರಜಾಕಾರರ ಸಂದರ್ಭ... ಬಿಟ್ಟರೆ ಮತೀಯ ಗುಂಪ... ಗಲಭೆಗಳಿರಲಿಲ್ಲ.

ಜ.ಶ.: 12ನೇ ಶತಮಾನದ ಶರಣ... ಚಳುವಳಿಯನ್ನು ಇಂದು ಹೇಗೆ ಅರ್ಥೈಸಿಕೊಳ್ಳಬೇಕಿದೆ? ಹಾಗೂ ಅದರ ಪ್ರಸ್ತುತತೆ ಹೇಗೆ?

ಶಾ: ಶರಣರು ಸಾಮಾಜಿಕವಾಗಿ ಜನ... ಪರಿವರ್ತನೆ ಮಾಡಿದರು. 12ನೇ ಶತಮಾನ... ಶರಣರು ಸಾಮಾನ್ಯ, ಸರಳ ಭಾಷೆಯಲ್ಲಿ ವಚ... ಸಾಹಿತ್ಯ ನೀಡಿದ್ದರಿಂದ ಜನ ಆಕರ್ಷಿತರಾದರು... ಬಸವಣ್ಣ ಮತ್ತು ಅವರ ಸಮಕಾಲೀನ ಶರಣ... ಅಪ್ಪಟ ವೈದಿಕ ವಿರೋಧಿಗಳಾಗಿದ್ದರು. ಬಸವ... ಬ್ರಾಹ್ಮಣ ಜಾತಿಯಲ್ಲಿ ಹುಟ್ಟಿ ಬ್ರಾಹ್ಮಣ್ಯವ... ತೊರೆದು ಬಂದ ಎಂದರೆ ಲಿಂಗಾಯುತ ಧರ್ಮ... ಮೆಚ್ಚಿಬಂದ ಎಂದರ್ಥವಲ್ಲ. ಆಗ ಲಿಂಗಾಯು... ಧರ್ಮ ಸಂಪೂರ್ಣ ಬೆಳೆದಿರಲಿಲ್ಲ ನಾಂದಿಯಾಗಿತ್ತು... ಬಸವಣ್ಣ ಮೂಲತಃ ವಿಚಾರವಾದಿ ಹಾಗ... ಸ್ವತಂತ್ರ ಆಲೋಚನಾ ಶಕ್ತಿ ಹೊಂದಿದ್ದ. ವೈದಿ... ಧರ್ಮದ ಅವಗಡಗಳನ್ನು ಶರಣದೊಂದಿಗೆ ಕೂ... ಸಾಮಾಜಿಕ ಬದಲಾವಣೆಗಾಗಿ ಹೋರಾಡಿದ. ... ಹೊತ್ತು ಕಾರ್ಲ್‌ಮಾರ್ಕ್ಸ್ ಮತ್ತು ಬಸವಣ್ಣ... ಜೊತೆಗಿಟ್ಟುಕೊಂಡು ಜನತೆಯ ಮಧ್ಯೆ ಹೋದ... ಸಮಾಜ ಬದಲಾವಣೆಗೆ ಸಹಾಯಕವಾದೀತು... ಧಾರ್ಮಿಕ, ಆರ್ಥಿಕ, ಸಾಮಾಜಿಕವಾಗಿ 'ಯಾ... ದೃಷ್ಟಿಯಿಂದಲೂ ಅಂದಿನ ಶರಣರ ಚಿಂತನೆ ಕಡಿ... ಇರಲಿಲ್ಲ. ಸಾಮಾಜಿಕ ಬದಲಾವಣೆಗಾಗಿ ಎ...

ಪುಟ 15

ಜ.ಶ.: ಕೋಮು ಸಾಮರಸ್ಯಕ್ಕೆ ಧಕ್ಕೆ ಉಂಟಾಗುತ್ತಿರುವ ಇಂತಹ ಪರಿಸ್ಥಿತಿಯಲ್ಲಿ ಕೋಮುವಾದವನ್ನು ಎದುರಿಸುವುದು ಹೇಗೆ?

ಶಾ: ಪ್ರಜಾಪ್ರಭುತ್ವದ ಮುಖವಾಡ ಧರಿಸಿ 'ಹಿಂದುತ್ವ' ಜಾತೀಯತೆ ಬೆಳೆಯುತ್ತಿದೆ. ವೈದಿಕರೇ ಹಿಂದುತ್ವವನ್ನು ಅಪ್ಪಿಕೊಂಡು ಬೆಳೆಸುತ್ತಿರುವರಲ್ಲದೇ ಬಾಬ್ರಿ ಮಸೀದಿ ಒಡೆದ ಮೇಲೆಯೇ ಕೋಮುದಂಗೆ, ಭಯೋತ್ಪಾದನೆ ಹೆಚ್ಚಾಗಿರುವುದನ್ನು ಕಾಣುತ್ತೇವೆ. ಹಿಂದೂ ಕೋಮುವಾದಿಗಳಿಗೆ ಮನುವಾದವನ್ನು ಪ್ರತಿಷ್ಠಾಪಿಸುವುದೇ ಅವರ ಉದ್ದೇಶವಾಗಿದೆ. ವಿಶ್ವ ಮಟ್ಟದಲ್ಲಿರುವ ಭಯೋತ್ಪಾದನೆ, ರಾಷ್ಟಮಟ್ಟದಲ್ಲಿ ಹುಟ್ಟಿಕೊಂಡ ಮೂಲಭೂತವಾದ, ಸ್ಥಳೀಯ ಮಟ್ಟದಲ್ಲಿ ಪಸರಿಸಿಕೊಂಡ ಕೋಮುವಾದ ಇವುಗಳಿಗೆ ಪರಸ್ಪರ ಅಂತರ್ ಸಂಬಂಧವಿದೆ. ಕರ್ನಾಟಕದಲ್ಲಿ ಇತ್ತೀಚೆಗೆ ಮಠಾಧೀಶರೂ ಹಣಕ್ಕಾಗಿ, ಅಧಿಕಾರಕ್ಕಾಗಿ ಹಿಂದುತ್ವದ ಜೊತೆ ಕೈಗೂಡಿಸಿ ತತ್ವಗಳನ್ನು ಗಾಳಿಗೆ ತೂರಿ ತಪ್ಪು ಮಾಡುತ್ತಿರುವುದು ವಿಪರ್ಯಾಸದ ಸಂಗತಿ. ಪ್ರಚೋದನಕಾರಿ ಹೇಳಿಕೆ ನೀಡುವ ಮತ್ತು ಕೋಮುವಾದ ಹಬ್ಬಿಸಲು ಕಾರಣವಾಗುವ ಸಂಘಟನೆಗಳಿಗೆ ಕುಮ್ಮಕ್ಕು ಕೊಡಲಾಗುತ್ತಿದೆ. ಧರ್ಮಾಂಧತೆ ಹುಟ್ಟಿಸುವ ಕೋಮುವಾದಿ, ಮೂಲಭೂತವಾದಿ ಸಂಘ-ಸಂಸ್ಥೆಗಳ ಚಟುವಟಿಕೆಗಳನ್ನು ಸರ್ಕಾರ ಮುಲಾಜಿಲ್ಲದೇ ನಿಗ್ರಹಿಸಬೇಕು. ಕೋಮುವಾದ ಬಿಂಬಿಸುವ ಹುಸಿ ದೇಶಭಕ್ತಿಯ ಅಮಲಿಗೆ ಪ್ರಜ್ಞಾವಂತ ಜನತೆಯು ಬಲಿಯಾಗಬಾರದು. ಕೋಮು ಸಾಮರಸ್ಯ ಮತ್ತು ದಾರ್ಶನಿಕ ಸಮನ್ವಯತೆಯ ಸೌಹಾರ್ದ ನೆಲೆಯನ್ನು ಉಳಿಸಿ ಬೆಳೆಸಬೇಕಾಗಿದೆ. ಶರಣ, ಸಂತ, ಮಹಾಂತ, ಸೂಫಿ, ಅವಧೂತ ಪರಂಪರೆಯ ತಾಯಿಬೇರಿಗಂಟಿಕೊಂಡು ಅಪರೂಪದ ಮಾನವೀಯತೆಯ ಅರಿವಿನೊಂದಿಗೆ ಸಂಘರ್ಷಕ್ಕಿಳಿದರೆ ಕೋಮುವಾದವನ್ನು ಹಿಮ್ಮೆಟ್ಟಿಸಬಹುದು.

ಜ.ಶ.: ಭಾರತದಲ್ಲಿ ಪ್ರಗತಿಯ ಹೆಸರಿನಲ್ಲಿ ಬಂದಂತಹ ಜಾಗತೀಕರಣವು ಯಾವ ರೀತಿ ಪರಿಣಾಮ ಬೀರುತ್ತಿದೆ?

ಶಾ: ಬಹುರಾಷ್ಟ್ರೀಯ ಕಂಪನಿಗಳು ಶಿಕ್ಷಣ, ಉದ್ಯೋಗ, ಒಕ್ಕಲುತನ, ಚಿಲ್ಲರೆ ವ್ಯಾಪಾರ, ಬ್ಯಾಂಕು, ಮಾಧ್ಯಮ, ಸಂಸತಿ ಹೀಗೆ ಎಲ್ಲೆಂದರಲ್ಲಿ ತನ್ನ ಕಬಂಧಬಾಹುಗಳನ್ನು ವಿಸ್ತರಿಸಿದೆ. ಇದರಿಂದ ದೇಶದ ಆಂತರಿಕ ವ್ಯವಸ್ಥೆಗೆ ದೊಡ್ಡ ಪೆಟ್ಟು ಬಿದ್ದಿದೆಯಲ್ಲದೇ ದೇಶದ ಸ್ವಾತಂತ್ರ್ಯಕ್ಕೇ ಧಕ್ಕೆ ಬಂದೊದಗಿದೆ. ಅಮೇರಿಕಾವು ಅಭಿವೃದ್ಧಿಶೀಲ ಎಲ್ಲ ದೇಶಗಳನ್ನು ತನ್ನ ಅಧೀನದಲ್ಲಿಟ್ಟುಕೊಳ್ಳಲು ಪ್ರಯತ್ನಿಸುತ್ತಿದೆ. ನಮ್ಮ ಸರ್ಕಾರ ಅದಕ್ಕೆ ಆಡಿಯಾಳಾದರೆ ಸಾಮಾನ್ಯ ಜನರ ಗೋಳು ಹೇಳತೀರದಂತಾಗುತ್ತದೆ. ಅಣು ಒಪ್ಪಂದದ ಬಗ್ಗೆ ಗೊತ್ತಿದ್ದರೂ ಸ್ವಾರ್ಥ ರಾಜಕೀಯ ಲಾಭಕ್ಕಾಗಿ ದೇಶವನ್ನು ಬಲಿ ಕೊಡಲಾಗುತ್ತಿದೆ. ಅಣು ಒಪ್ಪಂದದಲ್ಲಿ ಬಹುರಾಷ್ಟ್ರೀಯ ಕಂಪನಿಗಳು ಮತ್ತು ಭಾರತದ ದೊಡ್ಡ ಬಂಡವಾಳಗಾರರ ನಡುವೆ ಅವರ ಅಗ್ರಿಮೆಂಟ್‌ಗಳೂ ಸೇರಿವೆ. ಕೇಂದ್ರ ಸರ್ಕಾರ ಅಣು ಒಪ್ಪಂದದ ಹೆಸರಿನಲ್ಲಿ ದೊಡ್ಡ ಕಂಪನಿಗಳ ಹಿತಾಸಕ್ತಿಗೆ ಮಣೆ ಹಾಕುತ್ತಿದೆಯೇ ವಿನಃ ಜನಸಾಮಾನ್ಯರ ಕಷ್ಟ ಪರಿಹರಿಸುವುದು ಬೇಕಾಗಿಲ್ಲ. ಚೀನಾ ತನ್ನ ದೇಶದ ಹಿತ ಕಾಪಾಡಿಕೊಂಡೇ ಬಹುರಾಷ್ಟ್ರೀಯ ಕಂಪನಿಗಳಿಗೆ ಸ್ವಾಗತಿಸಿದೆ. ಆದರೆ ಭಾರತದಲ್ಲಿ ಆ ರೀತಿ ಜಾರಿಗೊಳಿಸುವುದು ಸರ್ಕಾರಕ್ಕೆ ಬೇಕಾಗಿಲ್ಲ. ತನ್ನ ದೇಶದಲ್ಲಿ ಸಬ್ಸಿಡಿ ನೀಡುತ್ತಾ ಭಾರತದಲ್ಲಿನ ಅನ್ನದಾತನಿಗೆ ಸಬ್ಸಿಡಿ ಬೇಡವೆನ್ನುವ ಅಮೇರಿಕಾದ ನೀತಿಯನ್ನು ಒಪ್ಪಿಕೊಳ್ಳುತ್ತಿರುವುದು ಈ ದೇಶದ ದುರಂತ. ಇದರಿಂದಾಗಿ ಜನತೆಯಲ್ಲಿ ಅಸಮಾನತೆ ಹೆಚ್ಚಾಗುತ್ತದೆ. ಮೇಲ್ವರ್ಗ ಕೆಳವರ್ಗದ ಅಂತರ ತೀವ್ರಗೊಳ್ಳುತ್ತದೆ. ಹೀಗೆ ಮುಂದುವರಿದರೆ ಸಾಮಾನ್ಯಜನರ ಸಾಯೋಕಾಲ ಸಮೀಪಿಸುತ್ತದೆ.

ಸಂಪಾದಕೀಯ

ಡೋಲಾಯಮಾನದ ಡೋಲು

ಕರ್ನಾಟಕದಲ್ಲಿ ಕೆಲವು ರಾಜಕೀಯ ನಾಯಕರ ಅಕ್ರಮ ವಲಸೆ ಈಗಲೂ ನಡದೇ ಇದೆ. ಇನ್ನೂ ಕೆಲವು 'ಮುತ್ಸದ್ದಿ'ಗಳು ಸೂಕ್ತ ಕಾಲದಲ್ಲಿ ಸೂಕ್ತ ಸ್ಥಾನಮಾನ ಖಾತ್ರಿ ಮಾಡಿಕೊಂಡು ಜಾಗ ಖಾಲಿ ಮಾಡಲಿದ್ದಾರೆ. ಅದಕ್ಕಾಗಿಯೇ ಎರಡು ದೋಣಿಗಳಲ್ಲಿ ಕಾಲು ಇಟ್ಟು ಹಾಗಲು ಸಿದ್ದರಾಗಿದ್ದಾರೆ.

ಇಂತಹ ನಾಯಕರನ್ನು ತಮ್ಮ ಬುಟ್ಟಿಗೆ ಹಾಕಿಕೊಳ್ಳುವುದರಲ್ಲೇ ತಮ್ಮ ಹಣೆಬರಹ ನಿರ್ಧಾರವಾಗಲಿದೆ ಎಂಬಂತೆ ಇಂದು ಪ್ರಧಾನವಾಗಿ ಬಿಜೆಪಿ ಮತ್ತು ಕಾಂಗ್ರೆಸ್ ಪಕ್ಷಗಳು ವರ್ತಿಸುವುದನ್ನು ನೋಡಿದರೆ ಇವರು ಜನತೆಯ ವಿಶ್ವಾಸವನ್ನು ಕಳೆದುಕೊಂಡು ಕೊರಗುತ್ತಾ, ಆತಂಕದಲ್ಲಿದ್ದಾರೆ ಎಂಬುದು ಗೊತ್ತಾಗುತ್ತದೆ. ಇಲ್ಲವಾದರೆ ಅವರು ಅಪಾರ ಪ್ರಮಾಣದ ಅಕ್ರಮ ಗಳಿಕೆಯ ಹಣ, ಆಮಿಷ, ಜಾತಿಗಳ ಬಳಕೆ ಮಾಡಿ ಜನರ ಮತಗಳನ್ನು ಭ್ರಷ್ಟ ಮಾರ್ಗಗಳಿಂದ ಅಪಹರಿಸಬಹುದೆಂಬ ಲೆಕ್ಕಚಾರದತ್ತ ಯಾಕೆ ಮರಳುತ್ತಿದ್ದರು. ಕಳೆದ 20 ತಿಂಗಳಿನಲ್ಲಿ ಕರ್ನಾಟಕವನ್ನು ಕಡಿದು ಕಟ್ಟೆ ಹಾಕಿಟ್ಟಿದ್ದೇವೆಂದು 'ಅಭಿವೃದ್ಧಿ'ಯ ಶಣ ಊದುವ ಬಿಜೆಪಿ ಹೀಗೇಕೆ ಕಂಡವರ ಕಾಲು ಹಿಡಿಯಲು, ಜನರನ್ನು ವಂಚಿಸಲು ಪರಾಡುತ್ತಿದೆ. ಕೇಂದ್ರದಲ್ಲಿ ಈಗ ಹಿಂದೆ ರಾಜ್ಯದಲ್ಲಿ ಅಪಾರ ಸಾಧನೆ ಮಾಡಿ ಸುಸ್ತಾಗಿರುವ ಕಾಂಗ್ರೆಸ್‌ನ 'ನಾಯಕ'ರೇ ತಮ್ಮನ್ನು ಅಧಿಕಾರಕ್ಕೆ ಏರಿಸುತ್ತಾರೆ ಎಂಬ ಸರ್ಕಸ್‌ನಲ್ಲಿ ಮುಳುಗಿದ್ದಾರೆ. ದೆಹಲಿಯ ಹೈಕಮಾಂಡ್‌ಗೆ ಎಡ ತಾಕುತ್ತ ಕಾಯುತ್ತಿದೆ.


ಎಂ.ಪಿ.ಪ್ರಕಾಶ್‌ರಂಥಹ 'ಮಹಾ ಮುತ್ಸದ್ದಿಗಳು' (?) ತಮ್ಮ ಪಕ್ಷಕ್ಕೆ ಬರಲಿ ಎಂದು ಬಿಜೆಪಿ-ಕಾಂಗ್ರೆಸ್ ಪಕ್ಷಗಳು ಕಾಯುತ್ತಿರುವುದು ಅವರಿಗೆ ಹೇಸಿಗೆ ಹುಟ್ಟಿಸದೇ ಹೋಗಿದ್ದರೂ ಜನರಿಗಂತೂ ಹುಟ್ಟಿಸಿದೆ. ಈ 'ಮುತ್ಸದ್ದಿಗಳೂ' ತಮಗೆ ಸೃಷ್ಟಿಗೊಂಡಿರುವ 'ಡಿಮಾಂಡ್' ನೋಡಿ ಬೆರಗುಗೊಂಡು ತಮ್ಮ 'ಅಂತರಂಗದ' ಒಂದೊಂದೇ ಬೇಡಿಕೆಗಳನ್ನು ಹೊರಚೆಲ್ಲಿ ಆಶೆಯ ದೇಶಾವರಿ ನಗೆ ಬೀರುತ್ತಿದ್ದಾರೆ. ಇದಕ್ಕಾಗಿ ಎಂತಹದ್ದೂ ನಾಟಕ-ನೃತ್ಯಗಳನ್ನು ಅವರು ಆಡಬಲ್ಲರು.

ಇಷ್ಟಾದರೂ ಖಚಿತವಾಗಿ ತಾವು ಯಾವ ಪಕ್ಷಕ್ಕೆ ಸೇರುವರೆಂದು ಅವರಾಗಲೀ ಇವರನ್ನು 'ನಂಬಿ' ಹಿಂದೆ ನಿಂತಿರುವವರಾಗಲೀ ಸ್ಪಷ್ಟಪಡಿಸಿಲ್ಲ. ಮುಖ್ಯವಾಗಿ ಈಗಲೂ 'ಸಮಾಜವಾದಿ' ಪ್ರಕಾಶರಿಗೆ ಕಾಂಗ್ರೆಸ್ಸೂ ಆಗಬಹುದು, ಬಿಜೆಪಿಯೂ ಆಗಬಹುದು! ಅಂದರೆ ಕಾಂಗ್ರೆಸ್-ಬಿಜೆಪಿಗಳ ವ್ಯತ್ಯಾಸವೇ ಅವರಿಗೆ ಬೇಕಿಲ್ಲ. 'ಆರು ಕೊಟ್ಟರೆ ಅತ್ತೇ ಕಡೆ ಮೂರು ಕೊಟ್ಟರೆ ಸೊಸೆ ಕಡೆ' ಎಂಬ ಸಿದ್ದಾಂತ ಅವರದ್ದಾಗಿದೆ. ಇನ್ನೂ ರಾಜ್ಯದ-ದೇಶದ ಹಿತಾಸಕ್ತಿಗಳ ಬಗ್ಗೆ ಇವರಿಗೆಂಥ ಕಾಳಜಿ ಇದೆಯೆಂದು ಕೊಳ್ಳಲಾದೀತು ಸ್ವಾರ್ಥದ, ಅಧಿಕಾರ ದಾಹವೇ? ಸಂದರ್ಭಸಾಧಕತೆಯೇ ಸಿದ್ಧಾಂತವಾಗಿರುವಾಗ ಇವರು ಪ್ರಾಮಾಣಿಕ ನಿಲುವು ತಾಳುವುದಾದರೂ ಹೇಗೆ?

ಹಾಗೆ ನೋಡಿದರೆ ಬಿಜೆಪಿಯು ಸ್ಪಷ್ಟವಾದ ಕಾರ್ಯತಂತ್ರ ರೂಪಿಸಿಕೊಂಡು ತೀವ್ರವಾಗಿ ಹೊರಟಿದೆ. ಒಕ್ಕಲಿಗರ ಪ್ರಾಬಲ್ಯವಿರುವ ದಕ್ಷಿಣ ಕರ್ನಾಟಕದಲ್ಲಿ ನೆಲೆಗೊಳ್ಳುವ ಎಲ್ಲಾ ಪ್ರಯತ್ನಕ್ಕೂ ಇಳಿದಿದೆ. ಹಾಗಾಗಿಯೇ ಜೆಡಿ(ಎಸ್)ನಿಂದ ಜಿ.ಟಿ.ದೇವೇಗೌಡ, ಈಗ ಬಿ.ಎನ್.ಬಚ್ಚೇಗೌಡರನ್ನು ಪಕ್ಷಕ್ಕೆ ಸೇರಿಸಿಕೊಂಡಿದೆ. ಹಾಗೆಯೇ ಉತ್ತರ ಕರ್ನಾಟಕದಲ್ಲಿ ಲಿಂಗಾಯತರ ನಡುವೆ ತನ್ನದೇ ದೊಡ್ಡ ಶಕ್ತಿ ಎಂದು ಪ್ರದರ್ಶನ ನಡೆಸಲು ಬಯಸಿದೆ. ಹೀಗಾಗಿ ಜಾತಿಯಬಲ ಅಷ್ಟಾಗಿ ಪ್ರಕಾಶರಿಗೆ ಇಲ್ಲವಾದರೂ ಅವರಿಗಾಗಿ ಹಂಬಲಿಸುತ್ತಿದೆ. ಹೀಗೆ ಬಿಜೆಪಿ ಈ ನಾಯಕರನ್ನೂ ಸೆಳೆಯುವ ಯತ್ನ ನಡೆಸುತ್ತಲೇ ಹೊಯ್ದಾಟ, ಚೌಕಾಶಿಯಲ್ಲಿ ಇಂತಹ ನಾಯಕರು ಇರುವಾಗಲೇ ಅದು ಕೆಳಹಂತದಲ್ಲಿ ಅವರ ಹಿಂದಿರುವ ಜನಸಮೂಹವನ್ನೂ, ಕಾರ್ಯಕರ್ತರನ್ನು ಪ್ರಭಾವಿಸಿ ಸೆಳೆವ ಸೆಳವು ಸೃಷ್ಟಿಸುತ್ತಿದೆ. ಕೊನೆಗೆ ಇಂತಹ ನಾಯಕರು ಇವರಿಗೆ ಶರಣಾಗಬೇಕು ಇಲ್ಲ ಸೊರಗಬೇಕು.

ಪ್ರಕಾಶರಂಥವರು ಡೋಲಾಯಮಾನದ ಡೋಲು ಹೊಡೆಯುತ್ತಾ ಕಾಲ ಕಳೆಯುವ ಮೊದಲು ಒಂದು ಸ್ಪಷ್ಟ ನಿಲುವಿಗೆ ಬರಬೇಕು. ಕ್ಷಣ ಕ್ಷಣದ ವಿಳಂಬವೂ ಕೋಮುವಾದಿಶಕ್ತಿಗಳನ್ನು ಕೊಬ್ಬಿಸು ವುದಾಗಿದೆ ಎಂಬುದನ್ನೂ ಅರಿಯಬೇಕು.

ಬದುಕುವ ಕಲೆಯೋ? ವಂಚನೆಯ ಬಲೆಯೋ?




ರವಿಶಂಕರ್ ಎಂಬ ಹೈಟೆಕ್ ಗುರು ನಿತ್ಯವೂ 'ಭಜಗೋವಿಂದಂ' ಎಂಬ ಮಂತ್ರದ ಬದಲು ಕಮ್ಯೂನಿಸ್ಟರ ಧ್ಯಾನ ಪಠಿಸುವಂತಿದೆ. ಹೋದಲ್ಲಿ ಬಂದಲ್ಲಿ ಕಮ್ಯೂನಿಸ್ಟರನ್ನು ತೆಗಳದಿದ್ದರೆ ಬಾಯಿ ಭಾಷಣವೇ ಮುಂದೆ ಸಾಗುವುದಿಲ್ಲ. ಸರ್ವಸಂಗ ಪರಿತ್ಯಾಗಿಗಳು, ನಿರ್ಮೋಹಿಗಳೂ, ಎಲ್ಲರನ್ನೂ ಒಂದೇ ಎಂದೇ ಕಾಣುವ ಸಮಭಾವಿಗಳು ಎಂದೆಲ್ಲಾ ಕರೆದುಕೊಳ್ಳುವ ಇವರ ಮಾತುಗಳು ಥೇಟ್ ನಾಗಪುರದ ಆರ್.ಎಸ್.ಎಸ್ ಕೇಂದ್ರ ಕಛೇರಿಯಿಂದ ದೀಕ್ಷೆ ಹೊಂದಿ ಬಂದಂತಿವೆ. ಯಾಕೆಂದರೆ ಮೊನ್ನೆ ಭಾರತ ವಿಕಾಸ ಪರಿಷತ್ ಎನ್ನುವ ಸಂಘ ಪರಿವಾರದ ಸಮಾರಂಭವೊಂದರಲ್ಲಿ 'ಗುರೂಜಿ' ಸಂಘ ಪರಿವಾರದ 'ಗೋಬೆಲ್ಸ್' ಪ್ರಯೋಗಾಲಯದ ಜೀವಿ ಎಂಬುದನ್ನು ತೋರಿಸಿದ್ದಾರೆ.

ಡಾಲರ್ ಐಡಿಯಾಗಳು!

'ಕಮ್ಯೂನಿಸ್ಟರು ಅಭಿವೃದ್ಧಿ ವಿರೋಧಿಗಳು, 'ಅಪಾಯಕಾರಿಗಳು', 'ಮೂರ್ಖರು'' ಎಂದು ಸಾರ್ವಜನಿಕ ಸಮಾರಂಭದಲ್ಲಿ ಬಡಬಡಿಸಿದ್ದಾರೆ. ಈ ಗುರುಗೆ ಕಮ್ಯೂನಿಸ್ಟರ ಬಗ್ಗೆ ಇಷ್ಟೇಕೆ ಕೋಪ! ನೆತ್ತಿ ಕಾಯಿಸಿಕೊಳ್ಳುವ ತಾಪ!

ಮೊದಲನೆಯದಾಗಿ ಶ್ವೇತವಸ್ತ್ರಧಾರಿಯಾಗಿ, ಯೋಗಧ್ಯಾನ, ಆಧ್ಯಾತ್ಮವೆಂದು ಬೋಧಿಸುವ ಇವರು ಅವೆಲ್ಲವನ್ನು ಬದಿಗಿಟ್ಟು ರಾಜಕೀಯದ ಬಗ್ಗೆ ಹೀಗೇಕೆ ಕೆಳಮಟ್ಟದಲ್ಲಿ ಆಡಿದರು. ಅವರೇ ಹೇಳುವ ಮೌಲ್ಯಗಳಿಗೆ ಅವರೆಷ್ಟು ಅರ್ಹರು ಎಂಬ ಪ್ರಶ್ನೆ ಏಳುತ್ತದೆ. ರವಿಶಂಕರ್‌ನನ್ನು ಆರೆಂಟು ವರುಷಗಳ ಹಿಂದೆ ಅಡ್ರಸ್ ಹೇಳುವವರು ಇರಲಿಲ್ಲ, ಅದೊಂದು ಹನ್ನೊಂದರಲ್ಲಿ ಇನ್ನೊಂದು ಎಂಬತ್ತಿದ್ದು, ಬೆಂಗಳೂರಿಗೆ ಬಂಡವಾಳ ಹರಿದು ಬರುತ್ತಿರುವಂತೆಯೇ, ಹೈಟೆಕ್ ಸಿಟಿಯೊಂದಿಗೆ ಪರಿವರ್ತಿತವಾಗುತ್ತಲೇ ಇಲ್ಲೊಂದು ಬೃಹತ್ ಹೈಟೆಕ್ ಆಶ್ರಮವೂ, ಯೋಗ, ಆಧ್ಯಾತ್ಮ ಭೋದನೆಯೂ ಹಬ್ಬಿಕೊಂಡವು. ಇವರದ್ದೇ ಯೋಗ ಎನ್ನಲಾಗುವ ಸುದರ್ಶನ ಯೋಗ ಅವರ ಆಶ್ರಮವಾಸಿಯಿಂದ ಹೇಳದೇ ಕೇಳದೇ ಎತ್ತಿಕೊಂಡದ್ದು ಎಂಬುದು ಹೊರಬಂತು. ಇಂತಹ ಯೋಗ, ಧ್ಯಾನಗಳು ಈ ಹೈಟೆಕ್ ಗುರೂಗೆ ಡಾಲರ್, ಪೌಂಡ್ಸ್ ಕರೆನ್ಸಿ ಕಾಂಚಾಣ ತರುವ ವ್ಯಾಪಾರ ಎಂಬುದು ಜಗಜ್ಜಾಹೀರು. ಇಂತಹ ಆಧ್ಯಾತ್ಮ ಹಿಡಿದು 'ಬದುಕುವ ಕಲೆ' (ಆರ್ಟ್ಸ್ ಆಫ್ ಲೀವಿಂಗ್) ಎಂಬ ಸಿದ್ಧಾಂತ ಸೂತ್ರವನ್ನು ಇವರೇ ಸೃಷ್ಟಿಸಿದ್ದಾರೆ. ಯೋಗ ಎಂಬುದು ಈಗ ಬಿಸಿ ದೋಸೆಯಂತೆ ಮಾರಾಟವಾಗುತ್ತಿರುವಾಗ ಬಹಿರಂಗ ಪ್ರದರ್ಶನ ಏರ್ಪಡಿಸುತ್ತಿದ್ದಾರೆ. ಆದರೆ ಬಹಳ ಮುಖ್ಯವಾಗಿ ಕೈಗಾರಿಕೆಗಳಲ್ಲಿ ಕಾರ್ಮಿಕ 'ಬದುಕುವ ಕಲೆ ತರಬೇತು ನೀಡಲು ಹೋಗುತ್ತಾರೆ. ಇವರ ಖ್ಯಾತ ಸಂಶೋಧನೆಗಳೆಂದರೆ ಸಂಬಳ ಹೆಚ್ಚದೇ ಇರುವುದರಲ್ಲೇ ಬದುಕುವ ಕಲೆ ಹೇಗೆ? ಕೆಲಸದ ಒತ್ತಡ, ಮಾಲೀಕರ ದೌರ್ಜನ್ಯಗಳು ಸಾಂಸರಿಕ ನಿರ್ವಹಣೆ ತರುವ ಒತ್ತಡಗಳನ್ನು ಯೋಗದಿಂದ ಹೇಗೆ ಕಡಿಮೆ ಮಾಡಿಕೊಳ್ಳಬಹುದು ಎಂಬುದು ಇವರ ಭೋಧೆ". ಹೀಗಾಗಿ ಮಾಲೀಕರು 'ಬದುಕುವ ಕಲೆ'ಯನ್ನು ತುಂಬಾ ಇಷ್ಟಪಡುವುದರಿಂದ ಇವರನ್ನು ಕರೆಸಿ 'ಕಸರತ್ತು' ಮಾಡಿಸುತ್ತಾರೆ. ಇದರಿಂದ ಜೀವನೋಪಾಯದ ಜೊತೆಗೆ ಕೀರ್ತಿಯೂ ಸಿಗುವುದರಿಂದ ಗುರೂಜಿ ವೃಂದ ಈ ಬದುಕುವ ಕಲೆ'ಯನ್ನೇ ನಂಬಿದ್ದಾರೆ. ಹಾಗಾಗಿ ಮಾಲೀಕರ ಬದುಕುನ ಕಲೆಯನ್ನು ಚೆನ್ನಾಗಿ ಅರ್ಥ ಮಾಡಿಕೊಂಡಿರುವ ಕಾಮ್ರೇಡ್‌ರು ಅಲ್ಲಲ್ಲೇ 'ಆರ್ಟ್ಸ್ ಆಫ್ ಲೀವಿಂಗ್' ಎಂಬುದು ಫುಲ್ ಆಫ್ ಚೀಟಿಂಗ್ ಎಂದೆಲ್ಲಾ ಮಂಗಳಾರತಿ ಎತ್ತಿದ್ದಾರೆ.



ಭೂಗಳ್ಳತನ, ಎಲ್ಲಿದೆ ನೈತಿಕತೆ?

ಆದರೆ ಹಣವಂತರೂ, ಉದ್ಯಮಿಗಳು, ಸಂಘಪರಿವಾರದ ಬೆಂಬಲವೂ, ಇದನ್ನು ಮುಗ್ಧವಾಗಿ ನಂಬುವ ಭಕ್ತರೂ ಇರುವಾಗ ಅವರ ದೋಣಿ ನಿಲ್ಲದೇ ಸಾಗಿತು. ದೇಶವಿದೇಶಗಳಲ್ಲಿ ಆಶ್ರಮ ಸ್ಥಾಪನೆಯಾಗಿ, ಸಾವಿರಾರು ಕೋಟಿಗಳ ಒಡೆಯರಾದರು ಈ ನಶ್ವರರು. ಇರಲಿ ಎಷ್ಟೆಲ್ಲಾ ಹೇಳಬಹುದಾದಷ್ಟು ಅಮೋಘ ದಾಖಲೆ ಅವರು ಸೃಷ್ಟಿಸಿಕೊಂಡಿದ್ದಾರೆ. ಆದರೆ ಹೇಳಬೇಕಾದ ಒಂದು ಸಂಗತಿಯೆಂದರೆ ಇತ್ತೀಚಿಗೆ ಬೆಂಗಳೂರು ವಲಯದಲ್ಲಿನ ಸಾರ್ವಜನಿಕ ಸರ್ಕಾರಿ ಜಮೀನಿನ ಕಬಳಿಕೆಯನ್ನು ಪತ್ತೆ ಮಾಡಿದ ಶಾಸಕಾಂಗ ಸಮಿತಿಯು 'ಗುರೂಜಿ'ಯವರನ್ನು ಮಾಲುಸಮೇತ ಪತ್ತೆಹಚ್ಚಿ ಎತ್ತಿ ತೋರಿಸಿತು. ಆದರೆ ಇದರಿಂದ ವಿಚಲಿತವಾಗದೇ ಭೂಮಿ ಹಿಂದಿರುಗಿಸದೆ ಅವರು ಶುದ್ಧ ಚಿತ್ತವಿರಿಸಿಕೊಂಡು ಯಾವುದೇ ನೈತಿಕ ಪ್ರಶ್ನೆ ಕಾಡದೇ ಅಕ್ರಮ ಭೂಮಿಯನ್ನು ಅನುಭವಿಸುತ್ತಲಿದ್ದಾರೆ. ಈ ಸಮಿತಿಯಲ್ಲಿ ಸಿಪಿಐ(ಎಂ) ಶಾಸಕರು ಇದ್ದರು ಎಂಬುದು ಉಲ್ಲೇಖಾರ್ಹ.

'ಈ ಗುರೂಜಿ'ಯವರು ಈ ಕೆಲವು ವರುಷಗಳ ಹಿಂದೆ ಪಾಲೆಸ್ತೀನಿಯನ್ ಜನರ ತಾಯ್ನಾಡು ಕಬಳಿಸಿ, ಜನಾಂಗೀಯ ಬರ್ಬರ ಹತ್ಯೆಗಳನ್ನು ನಡೆಸುತ್ತಿರುವ, ವಿಶ್ವದಾದ್ಯಂತ ಖಂಡನೆಗೊಳಗಾದ 'ಇಸ್ರೇಲ್'ನ್ನು ಹಾಡಿಹೊಗಳುವಂತಹ ಒಂದು ಚಿತ್ರಪ್ರದರ್ಶನವನ್ನು ಬೆಂಗಳೂರಿನಲ್ಲಿ ಏರ್ಪಡಿಸಿದ್ದರು. ಹಾಗೆಯೇ ಈ ಗುರೂಜಿ ಅಮೇರಿಕಾದ ಭಕ್ತರು, ಅಲ್ಲಿಂದ ಡಾಲರ್‌ಗಳು ಕುಣಿ ಕುಣಿದು ಸೀದಾ ಆಶ್ರಮಕ್ಕೆ ಹರಿದುಬರುವುದು ಯಾಕೆಂದು ಕೇಳಿದರೆ ಕಾರಣ ಬೇರೆ ಹೇಳಿಯಾರು....

ಅಜ್ಞಾನ

ಹೀಗಾಗಿ ಇಂತಹ ನರಪೀಡಕರ, ಜಾಗತಿಕ ಸಾಮ್ರಾಜ್ಯಶಾಹಿಗಳ, ಬಹುರಾಷ್ಟ್ರೀಯ ಕಂಪನಿ ಬಂಡವಾಳಗಾರರ ನೆಂಟಸ್ತಿಕೆ ಹಾಗೂ ಪ್ರಾಯೋಜಕತ್ವವಿರುವ ಗುರೂಜಿ ಅಮೇರಿಕಾ ಹಾಗೂ ಬಹುರಾಷ್ಟ್ರೀಯ ಕಂಪನಿಗಳ ಸುಲಿಗೆಯ ವಿರುದ್ಧ ಕಾರ್ಮಿಕ ವರ್ಗ ಹಾಗೂ ಶೋಷಿತ ಜನ ಸಮೂಹದ ಹಿತರಕ್ಷಣೆ, ವಿಮೋಚನೆಗೆ ಹೋರಾಡುತ್ತಿರುವ ಕಮ್ಯೂನಿಸ್ಟರನ್ನು ಹೇಗೆ ಸಹಿಸಿಕೊಂಡಾರು? ಅಮೇರಿಕಾದ ಅಡಿಯಾಳಾಗಲು ಸಿದ್ಧವಾಗಿರುವ ಭಾರತದ ಆಳುವ ವರ್ಗಗಳು ಹಾಗೂ ಕೇಂದ್ರದ ಯುಪಿಎ ಸರ್ಕಾರಕ್ಕೆ ಪ್ರತಿರೋಧ ಒಡ್ಡಿ ನಿಂತಿರುವ ಕಮ್ಯೂನಿಸ್ಟರ ಬಗ್ಗೆ, ದೇಶಪ್ರೇಮದ ಬಗ್ಗೆ ಗೌರವವಾದರೂ ಹುಟ್ಟೀತು ಹೇಗೆ? ಅದಕ್ಕೆ ಅಲ್ಲವೇ ಕಮ್ಯೂನಿಸ್ಟರ ಬೆಂಬಲ ಹೊಂದಿ ಸರ್ಕಾರ ನಡೆಸುವವರಿಗೆ ಬುದ್ಧಿಯಿಲ್ಲವೆಂದು ಅವರು ಹೇಳಿದ್ದು. ಇಂತಹ 'ಅಮೇರಿಕಾ'ದ ಆರಾಧಕರು ಎಷ್ಟೇ ನಾಲಿಗೆ ಹರಿಬಿಟ್ಟರೂ ಮಾನ ಹೋಗುವುದು ಅವರದ್ದೇ ಅಲ್ಲದೇ ಕಮ್ಯೂನಿಸ್ಟರದ್ದಲ್ಲ. ತ್ರಿಕಾಲಜ್ಞಾನಿಗಳಿಗೆ ಇದಾದರೂ ಅರ್ಥವಾದೀತೆ? ಯಾಕೆಂದರೆ ಪ್ರಗತಿಪರರು, ಜಾತ್ಯಾತೀತರು, ಕಮ್ಯೂನಿಸ್ಟರು ಇವರ ಮಾತಿನಿಂದ ವಿಚಲಿತರಾಗುವುದಿಲ್ಲ. ಹೋರಾಟ ಕೈಬಿಡುವುದಿಲ್ಲ, ಬಿಟ್ಟಿಲ್ಲ.

ಡಾಲರ್ ಗುರೂಜಿಯ ಹೇಳಿಕೆ ಖಂಡಿಸಿ ಪ್ರತಿಭಟನೆ. ಮಾಜಿ ಶಾಸಕ ಜಿ.ವಿ.ಶ್ರೀರಾಮರೆಡ್ಡಿ, ಎಸ್.ವೈ.ಜಿ., ಪ್ರಕಾಶ್, ಉಮೇಶ್ .ಕೆ.ಎನ್., ಮೀನಾಕ್ಷಿ ಸುಂದರಂ, ಗೋಪಾಲಕೃಷ್ಣ ಅರಳಹಳ್ಳಿ ಇನ್ನಿತರರು.



ಹೀಗೊಬ್ಬ ಜನನಾಯಕ

ಬಂಡವಾಳಶಾಹಿ ರಾಜಕಾರಣಿ ಗಳಿಗಿಂತ ಸಂಪೂರ್ಣವಾದ ಭಿನ್ನವಾದ ಕಮ್ಯುನಿಸ್ಟ್ ನಾಯಕರು, ಜನ ಪ್ರತಿಗಳ ಜೀವನ ಶೈಲಿ, ಕೆಲಸದ ವಿಧಾನವನ್ನು ಪರಿಚಯಿಸುವ ಈ ಲೇಖನಗಳನ್ನು ಇಲ್ಲಿ ಪ್ರಕಟಿಸಲಾಗಿದೆ.

ಸ್ವಾತಂತ್ರ್ಯಾನಂತರದ ಭಾರತದಲ್ಲಿ ರೂಪಿಸಲ್ಪಟ್ಟ ಮೊದಲ ಸಂಸತ್‌ನ ಸದಸ್ಯರಾಗಿದ್ದವರು ಕೇರಳದ ಕಮ್ಯೂನಿಸ್ಟ್ ಪಕ್ಷದ ನಾಯಕರಾದ ಎ.ಕೆ.ಗೋಪಾಲನ್. ದೆಹಲಿಯಲ್ಲಿ ಸಂಸತ್ ಸದಸ್ಯರಿಗೆ ನೀಡುತ್ತಿದ್ದ ಅನುಕೂಲತೆಗಳನ್ನು ಕಂಡು ಅವರು ಅಚ್ಚರಿ ವ್ಯಕ್ತಪಡಿಸಿದ್ದರು. ಇಂತಹ ಸವಲತ್ತುಗಳು ಜನಪ್ರತಿನಿಧಿಗಳನ್ನು ದಾರಿ ತಪ್ಪಿಸುತ್ತದೆಂದು ಅವರು ಭವಿಷ್ಯ ನುಡಿದಿದ್ದರು. ಹಾಗೆಂದು ಎ.ಕೆ.ಜಿ. ಹೇಳಿ ಅರ್ಧ ಶತಮಾನವೇ ಕಳೆದಿವೆ. ಸಂಸತ್ ಸದಸ್ಯರ ಈಗಿನ ಅನುಕೂಲತೆಗಳು ದುಪ್ಪಟ್ಟಾಗಿವೆ. ವಿಮಾನ, ರೈಲುಗಳಲ್ಲಿ ಮೇಲ್ದರ್ಜೆಯ ಉಚಿತ ಪ್ರಯಾಣ, ಕ್ಷೇತ್ರ ಸಂದರ್ಶನಕ್ಕೆ ವಿಶೇಷ ಭತ್ಯೆ, ಉಚಿತ ವಿದೇಶ ಪ್ರವಾಸ, ದೆಹಲಿಯಲ್ಲಿ ಉಚಿತ ನಿವಾಸ, ಜೊತೆಗೆ ಆಕರ್ಷಕ ಪಗಾರ. ಅಧಿಕೃತವಾಗಿ ಪಡೆಯುವ ಈ ಸವಲತ್ತುಗಳಲ್ಲದೆ ಇನ್ನೂ ಅನೇಕ ಅನುಕೂಲತೆಗಳು ಅವರಿಗಿದೆ. ಇದರೊಂದಿಗೆ ಜನಸಾಮಾನ್ಯರೊಂದಿಗೆ ಬೆರೆಯುವ ಅವಕಾಶ ಕಡಿಮೆಯಾಗುತ್ತಾ ಹೋಗುತ್ತದೆ. ಜನಸೇವೆಯ ಹೆಸರಿನಲ್ಲಿ ರಾಜಕೀಯ ಪ್ರವೇಶಿಸಿ ತಲೆಮಾರುಗಳು ತಿಂದು ತೇಗುವಷ್ಟು ಸಂಪಾದಿಸಿದ ಸಂಪನ್ನಸಂಸತ್ ಸದಸ್ಯರೇ ಈಗ ಹೆಚ್ಚಾಗಿರುವುದು.

ಇವರೆಲ್ಲರಿಗಿಂತಲೂ ಭಿನ್ನವಾದ ಜನಪ್ರತಿನಿಧಿಯನ್ನು ಪರಿಚಯಿಸಿಕೊಳ್ಳೋಣ. ತಮಿಳುನಾಡಿನ ಮಧುರೆ ಕಮ್ಯೂನಿಸ್ಟ್ ಪಕ್ಷವನ್ನು ಬೆಂಬಲಿಸುವ ಜಿಲ್ಲೆ, ಬಟ್ಟೆ ಗಿರಣಿಗಳು ಪ್ರಾರಂಭವಾದಾಗಿನಿಂದ ಇಲ್ಲಿ ಕಾರ್ಮಿಕ ಸಂಘಟನೆಗಳು ಬಲಗೊಳ್ಳುತ್ತಾ ಬಂದಿವೆ. ಕಾರ್ಪೊರೇಷನ್, ವಿಧಾನಸಭೆ, ಸಂಸತ್‌ಗಳನ್ನೆಲ್ಲಾ ಪ್ರತಿನಿಧಿಸುವುದು ಬಹುತೇಕ ಎಡಪಕ್ಷಗಳೇ.

ಇದು ಇತ್ತೀಚೆಗೆ 'ಉದಯವಾಣಿ' ದಿನಪತ್ರಿಕೆಯಲ್ಲಿ ಪ್ರಕಟವಾಗಿರುವ ಲೇಖನ. ತಮಿಳುನಾಡಿನ ಮಧುರೈ ಕ್ಷೇತ್ರದ ಲೋಕಸಭಾ ಸದಸ್ಯರಾದ ಸಿಪಿಐ(ಎಂ)ನ ಪಿ.ಪಿ.ಮೋಹನ್ ಅವರ ಸರಳತೆ, ಜನ ಸ್ನೇಹಿ ನಡವಳಿಕೆ, ಜನಪದ ಕೆಲಸಗಳು ಕುರಿತು ಇಲ್ಲಿ ಪರಿಚಯಿಸಲಾಗಿದೆ. ಅಧಿಕಾರವೆಂದರೆ ದರ್ಪ ಹಾಗೂ ಐಶಾರಾಮ ಅನುಭವಿಸುವಿಕೆ ಎಂಬ ಈಗಿರುವ ಸ್ಥಿತಿಯಲ್ಲಿ ಮಾದರಿ ಸಂಸದನ ಪರಿಚಯ.



ಯಾರನ್ನೇ ಕರೆದು ಮಾತನಾಡಿಸಿದರೂ ಅವರಲ್ಲೊಬ್ಬ ಕಮ್ಯುನಿಸ್ಟನಿರುತ್ತಾನೆ. ಪ್ರತಿ ಮನೆಯಲ್ಲೂ ಗೌರಿ, ಗೋಪಾಲನ್ ಹೆಸರಿನ ಮಕ್ಕಳಿರುತ್ತಾರೆ.

ಮಧುರೆಯ ಸಿಪಿಎಂ ಜಿಲ್ಲಾ ಸಮಿತಿಗೆ ಎರಡು ಮಹಡಿಯ ಕಟ್ಟಡವಿದೆ. ಆದರೆ ಇಲ್ಲಿನ ಸಂಸತ್ ಸದಸ್ಯ ಪಿ.ಪಿ.ಮೋಹನ್ ತಮ್ಮ ಪ್ರೀತಿಯ ಎಂ-80ರಲ್ಲಿ ಸಂಚರಿಸುತ್ತಾರೆ. ದಾರಿಯಲ್ಲಿ ಸಿಗುವ ಜನರನ್ನು ಮಾತನಾಡಿಸಿ ಕಷ್ಟ ಸುಖ ವಿಚಾರಿಸಿ ಮುನ್ನಡೆಯುತ್ತಿರುತ್ತಾರೆ. ಅವರ ಜೊತೆಗೆ ಯಾವ ಹಿಂಬಾಲಕರೂ ಇರುವುದಿಲ್ಲ. ರಕ್ಷಣೆಗೆ ಖಾಕಿ ಧಾರಿಗಳಿಲ್ಲ, ಸರಳ ಸಜ್ಜನರೆಂದೇ ಖ್ಯಾತಿ. ಜನಸಾಮಾನ್ಯರಿಗೆ ಸುಲಭವಾಗಿ ಮಾತಿಗೆ ನಿಲುಕುವ ಜನನಾಯಕ. ತಮ್ಮ ಸಮಸ್ಯೆಗಳನ್ನು ಅವರ ಮುಂದೆ ಹರಡಿ ಪರಿಹಾರಕ್ಕೆ ಕೈ ಚಾಚಲು ಸಂಕೋಚ ಪಡಬೇಕಾಗಿಲ್ಲ, ಏಕೆಂದರೆ ಮೋಹನ್ ನಮ್ಮ ನಾಯಕ, ಪ್ರತಿನಿಧಿ ಎಂಬ ಭಾವನೆ. ಜನರ ಸಮಸ್ಯೆಗಳಿಗೆ ಅವರು ಉತ್ತರವಾಗಬಲ್ಲರು. ದೆಹಲಿಗೆ ತಲುಪಿದ ಕೂಡಲೇ ಅವರ ಪ್ರಯಾಣ ಸೈಕಲ್‌ನಲ್ಲಿ, ಸಂಸತ್‌ಗೆ ಸೈಕಲ್‌ನಲ್ಲಿ ಪ್ರಯಾಣಿಸುವ ಏಕೈಕ ಸಂಸತ್ ಸದಸ್ಯ! ಇವರ ಈ ಸರಳ ಬದುಕು ಉಳಿದವರಿಗೆ ಮಾದರಿಯಾಗಬೇಕೆಂದು ಹೇಳಿದರೆ ಕೋಪಗೊಳ್ಳುವವರೂ ಇಲ್ಲದಿಲ್ಲ.

ಮೋಹನ್‌ರವರ ಈ ಸರಳ ವ್ಯಕ್ತಿತ್ವವೇ ಅವರ ಗೆಲುವಿಗೆ ಬಂಡವಾಳ. ಮೊದಲ ಬಾರಿಗೆ ಅವರು ಸಂಸತ್ ಪ್ರವೇಶಿಸಿದಾಗ ಅವರು 40,000 ಮತಗಳ ಅಂತರದಿಂದ ಗೆಲುವು(1999) ಸಾಧಿಸಿದ್ದರು. 2004ರಲ್ಲಿ ಮತ್ತೆ ಅವರನ್ನು ಕಣಕ್ಕಿಳಿಸಿದಾಗ 1,40,000 ಮತಗಳ ಅಂತರದ ಗೆಲುವು! ಪಕ್ಷ ಕೊಟ್ಟ ಹಣವನ್ನಷ್ಟೇ ಅವರು ಚುನಾವಣೆಗೆ ವಿನಿಯೋಗಿಸುತ್ತಿದ್ದರು.

ಮಧುರೆಯ ಹೊರವಲಯದಲ್ಲಿ ಪುಟ್ಟ ಪುಟ್ಟ ಮೂರು ಕೊಠಡಿಗಳಿರುವ ಮನೆಯಲ್ಲಿ ಹೆಂಡತಿ ಮತ್ತು ನಾಲ್ಕು ಮಕ್ಕಳೊಂದಿಗೆ ಅವರ ವಾಸ, ಎಂ 80 ಈ ಎಂ.ಪಿ.ಯ ವಾಹನವಾದರೆ, ಕುಟುಂಬದೊಂದಿಗೆ ಅವರು ಹೊರ ಹೊರಟರೆ ಅವರ ಪ್ರಯಾಣ ಮತ್ತಷ್ಟು ಅರ್ಭಟದಿಂದಿರುತ್ತದೆ. ಆಟೋ ರಿಕ್ಷಾವೊಂದನ್ನು ಬಾಡಿಗೆಗೆ ಪಡೆಯುತ್ತಾರೆ!

'ಈ ಪದವಿ ನೀಡಿರುವುದೇ ಜನ. ಆಗಾಗ ಬಂದು ಅವರನ್ನು ಭೇಟಿಯಾಗುವುದು ನನ್ನ ಕರ್ತವ್ಯ. ಅವರಂತೆ ನಾನಿದ್ದರೆ, ನನ್ನನ್ನು ಭೇಟಿ ಮಾಡ[ಲು] ಅವರಿಗೆ ಮುಜುಗರ ಉಂಟಾಗುವುದಿಲ್ಲ. ದೆಹಲಿಯ ಸವಲತ್ತುಗಳಲ್ಲಿ ನನ್ನ ಜನಪ್ರತಿನಿಧಿಗ[ಳ] ಕಳೆದು ಹೋಗಬಾರದು. ಸದಸ್ಯತ್ವ ಕಳೆದುಕೊಂಡ ಕೂಡಲೇ ನಮ್ಮ ಹಳೆಯ ಬದುಕಿಗೆ ಮರಳಬೇಕು. ದೆಹಲಿಗೆ ಹೋದಾಗ ನನಗೆ ಸಂಸತ್‌ಗೆ ಹೋಗಲು ಗೆಳೆಯನ ಸೈಕಲ್ ಇದೆ. ಮೊದಲ ಬಾರಿ ಸೈಕಲಿನ[ಲ್ಲಿ] ಸಂಸತ್‌ಗೆ ಹೋದಾಗ ರಕ್ಷಣಾ ದಳದವರು ನನ್ನ[ನ್ನು] ಒಳಕ್ಕೆ ಬಿಡಲಿಲ್ಲ. ಪಾಸ್ ತೋರಿಸಿದಾ[ಗ] ಬೆರಗುಗಣ್ಣುಗಳಿಂದ ನನ್ನನ್ನು ಒಳಗೆ ಬಿಟ್ಟರು. ಸೈಕಲ್‌ನ್ನು ನಿಲ್ಲಿಸುವುದೂ ಸಮಸ್ಯೆಯಾಯಿತು. ಕೊನೆಗೆ ಸಂಸತ್ ಸಮುಚ್ಚಯದಲ್ಲಿರುವ ಗಾಂಧಿಪ್ರತಿಮೆಯ ಬಳಿ ಸೈಕಲನ್ನು ಪಾರ್ಕ್ ಮಾಡಿದೆ. ಸರಳ ಬದುಕಿನ ನಿಜವಾದ ವಾರಸುದಾರನ ಸುಪರ್ದಿಯಲ್ಲಿ ನನ್ನ ಸೈಕಲ್'!

ತಮಿಳುನಾಡಿನ ಅನೇಕ ಹಳ್ಳಿಗಳಲ್ಲಿ ದಲಿತರಿ[ಗೆ] ಹೊಟೇಲ್‌ಗಳಲ್ಲಿ ಚಿಪ್ಪಿನಲ್ಲಿ ಚಹ ನೀಡುತ್ತಿ[ದ್ದ] ಸಂಪ್ರದಾಯ ಬಳಕೆಯಲ್ಲಿತ್ತು. ಅವರಿಗೆ ಸಾರ್ವಜನಿ[ಕ] ರಸ್ತೆಯಿಲ್ಲ, ಬಾವಿಯಿಲ್ಲ, ಸತ್ತರೆ ಸ್ಮಶಾನ ಕೂ[ಡ] ಇಲ್ಲ. ನಗರದಲ್ಲಿ ವಾಸಿಸಲು ಬಾಡಿಗೆ ಮನೆಯ[ನ್ನು] ಕೊಡಲಾರರು. ತಮಿಳುನಾಡಿನ ರಾಜಕೀಯ ಪಕ್ಷಗಳು ಈ ಕುರಿತು ಅಷ್ಟಾಗಿ ಕಾಳಜಿ ವಹಿಸಿರಲಿ[ಲ್ಲ]. ಮೋಹನ್ ಸಂಸತ್ ಸದಸ್ಯರಾದ ಕೂಡಲೇ ಇದು ನಿವಾರಣೆಗೆ ಪಣ ತೊಟ್ಟು ಯಶಸ್ವಿಯಾದರು.

ವಿಮಾನನಿಲ್ದಾಣ, ಹೆಚ್ಚಿನ ರೈಲು ಸೇವೆ, ಜೋ[...] ರೈಲು ಹಳಿ, ಕೇಂದ್ರೀಯ ವಿದ್ಯಾಲಯಗಳು, ಮೆಡಿಕಲ್ ಕಾಲೇಜು... ಹೀಗೆ ಈ ಸದಸ್ಯ[ರ] ನೇತೃತ್ವದಲ್ಲಿ ಮಧುರೆ ನಗರ ಹಾಗೂ ಜಿ[ಲ್ಲೆ] ಮುಂದುವರೆಯುತ್ತಿದೆ.

ಜನಸೇವೆಗೆ ತಮ್ಮ ಬದುಕನ್ನು ಮುಡಿಪಾಗಿ[ಟ್ಟ] ಮೋಹನ್, ಅದನ್ನು ಹಾಗೆಂದು ಎಲ್ಲೂ ಹೇಳಿಕೊಂಡವರಲ್ಲ, ಬಿಳಿ ಪಂಚೆ, ಬಿಳಿ ಷರ್ಟು ಅವರ ವೇಷಭೂಷಣ. ಜನ ತಮ್ಮ ಬ[ಳಿ] ಬರುವಂತಿರಲು ಜನ ತೊಡುವ ಸಾಮಾ[ನ್ಯ] ಉಡುಪನ್ನೇ ಜನಪ್ರತಿನಿಧಿ ಧರಿಸಿರಬೇಕೆಂಬುದು ಅವರ ವಾದ. ಇಂತಹ ಜನನಾಯಕರು ಎಲ್ಲಾದರು ಕಾಣ ಸಿಕ್ಕಾರೆಯೇ?

ಫುಲ್ ಟಾಕ್ ಟೈಂ ಫ್ರೀ...

ಕರ್ನಾಟಕದ ಐದು ಕೋಟಿ ಪ್ರಜೆಗಳಿಗೂ ಆರು ಕೋಟಿ ಮತದಾರರಿಗೂ ಇನ್ನೇನು ಯೋಚನೆ ಇಲ್ಲ. ಒಂದೊಂದೇ ಉಚಿತ ಉಡುಗೊರೆಗಳ ಘೋಷಣೆ ಆಗುತ್ತಿದೆ. ಚುನಾವಣೆ ಬರೋದ್ರೊಳಗೆ ಉಚಿತಗಳ ಮಹಾಪೂರವೇ ಹರಿದು ಬರಬಹುದು. ಶಾಲೆ ಮಕ್ಕಳಿಗೆ ಸೈಕಲ್ ಕೊಟ್ಟಾಯಿತು. ಆ ಮಕ್ಕಳು ಏನು ಓಟ್ ಹಾಕ್ತಾರ್ಯೇ? ಇಲ್ಲ. ಓಟ್ ಹಾಕೋ ಕಾಲೇಜು ಕನ್ಯೆಯರು ಸೈಕಲ್ಲಲ್ಲಿ ಹೋಗೋಕಾಗುತ್ಯೇ? ಇಲ್ಲ. ಅವರಿಗೆ ಸ್ಕೂಟಿ ಕೊಡಿಸಬೇಕಾದದ್ದು ಉಚಿತವಲ್ಲವೇ? ಕಾಲೇಜು ಕನ್ಯೆಯರು ಬುರ್ರ್.... ಅಂತ ಸ್ಕೂಟಿಯಲ್ಲಿ ಹೋದರೆ ಕಾಲೇಜು ಕುಮಾರರು ಅವರನ್ನು ಫಾಲೋ ಮಾಡೋದು ಹೇಗೆ? ಅವರಿಗೂ ಉಚಿತ ಬೈಕ್ ಕೊಡಿಸಬೇಡ್ವೆ? ಅದೂ ಅಲ್ಲದೇ ಈ ಕುಮಾರರು ಕಷ್ಟಪಟ್ಟು ನಾಕೈದು ಓಟ್ ಹಾಕಿರುತ್ವೆ ಪಾಪ! ಇಷ್ಟೆಲ್ಲ ಆದ ಮೇಲೆ ಪ್ರೈಮರಿ ಶಾಲೆಯ ವಿದ್ಯಾರ್ಥಿಗಳು ಪಾಪ ಅವರಿಗೇನೂ ಇಲ್ಲದಿದ್ರೆ ಹೇಗೆ? ಅವರಿಗೂ ಉಚಿತ ತ್ರಿಚಕ್ರ ಸೈಕಲ್ ಇರಲಿ. ಇಂದಿನ ಮಕ್ಕಳೇ ನಾಳಿನ ಮತದಾರರು. 'ಬಾ' ಪಕ್ಷದಿಂದ ರೈತರಿಗೆ ಉಚಿತ ವಿದ್ಯುತ್ ಅಂತೆ. ಹಿಂದೆ ಯಾವುದೋ ಪಕ್ಷ ರೈತರಿಗೆ '24 ಗಂಟೆ ವಿದ್ಯುತ್' ಅಂತ ಹೇಳಿತ್ತು. 24 ಗಂಟೆ ವಿದ್ಯುತ್ ವಾರಕ್ಕೋ ತಿಂಗಳಿಗೋ ಅಂತ ಹೇಳಿದಲೇ ಜಾಣತನ ಮೆರೆದಿತ್ತು. 'ಬಾ' ಪಕ್ಷದವರು ಇತ್ತ ಉಚಿತ ವಿದ್ಯುತ್ ಅಂತ ಹೇಳ್ತಾ ಅತ್ತ 'ಗುಜರಾತ್ ಮಾದರಿ' ಅಂತನೂ ಹೇಳಿದ್ದಾರೆ. ಗುಜರಾತ್‌ನಲ್ಲಿ ವಿದ್ಯುತ್ ಉಚಿತವಾಗಿ ಉಪಯೋಗಿಸಿದ್ದಕ್ಕೆ ಎಷ್ಟು ಸಾವಿರ ರೈತರು ಜೈಲಲ್ಲಿದ್ದಾರೆ ಅಂತನೂ ಟಾಂ ಟಾಂ ಮಾಡಿದ್ರೆ ಚೆನ್ನಾಗಿತ್ತು. ಇನ್ನು ಸಾಲಾನೂ ಉಚಿತವಾಗಿ ಕೊಡ್ತೀವಿ ಅಂತ ಬೇರೆ ಹೇಳ್ತಿದ್ದಾರೆ. ಒಂದು ವಿಚಾರ ತಿಳ್ಕೊಬೇಕು. ಸಾಲ ಏನೋ ಉಚಿತವಾಗಿ ಕೊಡ್ತಾರೆ. ಆದ್ರೆ ವಸೂಲಿ ಮಾತ್ರ ಬಡ್ಡಿ ಸಮೇತ. ಅದೂ ಗೂಂಡಾಗಳಿಂದ.

ಇನ್ನು ಪಕ್ಕದ ರಾಜ್ಯದ ಥರ 'ಉಚಿತ ಕಲರ್ ಟೀವಿ'ಯನ್ನು ಯಾವ ಪಕ್ಷವೂ ಘೋಷಿಸಿಲ್ಲ. 'ಜಾ' ಪಕ್ಷ ಏನಾದ್ರೂ ಘೋಷಿಸಿದ್ರೆ. 'ಕಾ' ಪಕ್ಷ 'ಸ' ಪಕ್ಷಗಳೇನು ಮಾಡಬೇಕು? ಉಚಿತ ಡಿವಿಡಿ, ಉಚಿತ ಕೇಬಲ್ ಸಂಪರ್ಕ ಕೊಡಬಹುದೇ? ಇವೆಲ್ಲ ಮನೆಯಲ್ಲಿರುವ ಮಹಿಳೆಯರಿಗೆ ಹೆಚ್ಚು ಉಪಯೋಗವಾಯ್ತು. ಇನ್ನು ಯುವ ಮತದಾರರನ್ನು ಆಕರ್ಷಿಸಲು ಉಚಿತ ಮೊಬೈಲ್ ಎಂದು 'ಆ' ಪಕ್ಷ ಹೇಳಬಹುದೇ? ಎಲ್ಲಾ ಪಕ್ಷಗಳಿಗೂ ಈಗ ಉಚಿತ ಟಾಕ್ ಟೈಂ! ಈ ಪಕ್ಷಗಳು ಪವರ್‌ಗೆ ಬಂದು ಎಲ್ಲಾ ಉಚಿತ ಕೊಟ್ರೆ ದುಡ್ಡು ಖರ್ಚೆ ಇಲ್ವಲ್ಲ?! ದುಡ್ಡೆಲ್ಲ ಏನು ಮಾಡೋದು? ರಿಲಯನ್ಸ್ ಪವರ್ ಷೇರಿಗೆ ಹಾಕಬಹುದು? ಅಂಬಾನಿ ಒಂದೇ ದಿನದಲ್ಲಿ ಡಬಲ್ ಮಾಡಿಸುತ್ತಾನೆ! ಅವನು ಪ್ರಪಂಚದ ನಂ.1 ಶ್ರೀಮಂತ ಆಗ್ತಾನೆ. ಛೇ ವಿಷಯ ಎಲ್ಲೆಲ್ಲಿಗೋ ಹೋಗ್ತಿದೆ. ಕರ್ನಾಟಕಕ್ಕೂ ಅಂಬಾನಿಗೂ ಎಲ್ಲಿಂದಲ್ಲಿಗೆ ಸಂಬಂಧ? ಇಲ್ಲಿಗೆ, ಗಣಿ ರೆಡ್ಡಿನೇ ಸಾಕು. ಮತದಾರರಿಗೆ ಏನಾದ್ರೂ ಉಚಿತ ಕೊಡಲಿ ಬಿಡಲಿ, ಶಾಸಕರಿಗೆ ಮಾತ್ರ 'ಒಳ್ಳೆ ಬೆಲೆನೇ' ಕೊಡ್ತಾನೆ.

ಈಗಲೇ ರೈತರು ಟೊಮ್ಯಾಟೋ, ಆಲೂಗಡ್ಡೆ, ಮೆಣಸಿನಕಾಯಿ ಮುಂತಾದವಕ್ಕೆ ಬೆಲೆ ಇಲ್ಲದೇ ಉಚಿತವಾಗಿ ರಸ್ತೆಗೆ ಸುರಿತಿದ್ದಾರೆ. ಬೆಳೆದ ಕಬ್ಬನ್ನು ಕಾರ್ಖಾನೆಯವರು ಉಚಿತವಾಗಿಯೂ ಕೊಳ್ಳುತ್ತಿಲ್ಲ. ಅದಕ್ಕೆ ರೈತ್ರು 'ಉಚಿತ' ಅಂದ್ರೆ ಉರಿದು ಬೀಳ್ತಾರೆ. "ಯಾವ್ದೂ ಉಚಿತ ಬೇಡ. ಸರ್ಯಾದ ಬೆಲೆ ಕೊಡಿ ಅಂತ ಹೇಳೋದು ಯಾವ ಪಕ್ಷದವರಿಗೂ ಕೇಳ್ತಿಲ್ಲ. ಮತದಾರರು ಅಂತಂದ್ರೆ ಇವರು ಪುಗಸಟ್ಟೆ ಬಿಸಾಕೋ ಪದಾರ್ಥಗಳಿಗೆ ಕಾಯ್‌ಕೊಂಡಿರೋ ಪ್ರಾಣಿಗಳು ಅಂತ ತಿಳ್ಕೊಂಡಿದ್ದಾರೋ ಏನೋ" ಅಂತ ಕೆಲವರು ಮಾತಾಡ್ಕೊತಿದ್ರು. ಏನು ಮಾಡೋದು ಪಕ್ಷಗಳ ಕಿವಿಗೆ ಇನ್ ಕಮಿಂಗ್ ಕಾಲ್ಸ್ ಕೇಳೋದೇ ಇಲ್ಲ. ಬಾಯಿಗೆ ಮಾತ್ರ ಫುಲ್ ಟಾಕ್ ಟೈಂ ಫ್ರೀ...

ಹಿಂದಿನ ಸಮ್ಮಿಶ್ರ ಸರ್ಕಾರ 'ನಿಜವಾದ ಮತದಾರ'ರನ್ನು 'ಪಾಕೆಟ್' ನಿಂದ 'ಬಾಟಲ್'ಗೆ ಅಪ್‌ಗ್ರೇಡ್ ಮಾಡಿದೆ. ಇವರಿಗೆ ಈ ಚುನಾವಣೆ ಬದಲು ನಲ್ಲೀಲಿ ಮನೆಮನೆಗೆ ಉಚಿತವಾಗಿ 'ಅದನ್ನು' ಸರಬರಾಜು ಮಾಡ್ತಿವಿ ಅಂತ ಹೇಳಬಹುದೇ? ನದಿಗಳನ್ನೇ ಮಾರಿ ಕುಡಿ[ಯುವ] ನೀರು ಬಾಟಲಿನಲ್ಲಿ ಮಾರುವಂತಾ ಪರಿಸ್ಥಿತಿಗೆ ತಂದಿರುವ ಪಕ್ಷಗಳು ತಗೊಳ್ಳಬಹುದಾದ ಸರಿಯಾದ ಕ್ರಮ ಇದು. ಹೇಗೂ ನಲ್ಲಿಯಲ್ಲಿ ನೀರು ಬರೋಲ್ಲ. ನಲ್ಲಿಗಳೂ ನಲ್ಲಿ ಪೈಪ್‌ಗಳೂ ವೇಸ್ಟ್ ಆಗಬಾರದಲ್ಲ!

■ ಶ್ರೀ

ಜನಶಕ್ತಿ ಕನ್ನಡ ವಾರಪತ್ರಿಕೆ


ಕೈಗಾರಿಕೆಗಳ ಆರಂಭಕ್ಕೆ ಅಡಿಗಲ್ಲಿಟ್ಟ ವಿಶ್ವೇಶ್ವರಯ್ಯ

ಕೈಗಾರಿಕಾ ಬೆಳವಣಿಗೆಯ ಬೆನ್ನೆಲುಬಾದ ಬೃಹತ್ ಸಾರ್ವಜನಿಕ ಉದ್ದಿಮೆಗಳನ್ನು ಅವಸಾನದಂಚಿಗೆ ತರಲಾಗಿದೆ. ಮಾಹಿತಿ ತಂತ್ರಜ್ಞಾನದ ಕ್ಷೇತ್ರದಲ್ಲಿ ಬೆಳವಣಿಗೆ ಇದೆಯಾದರೂ ದುಡಿವ ವರ್ಗದ ಸಾಕಷ್ಟು ವ್ಯತ್ಯಾಸಗಳು ಇವೆ. ಒಟ್ಟಾರೆ ಜಾಗತೀಕರಣದ ದಾಳಿಯು ಕಾರ್ಮಿಕ ವರ್ಗದ ಮೇಲಿನ ದಾಳಿಗಳನ್ನು ಹಿಮ್ಮೆಟ್ಟಿಸುವ ಬಗೆ ಹೇಗೆ ಎಂದು ವಿವರಿಸಿದ್ದಾರೆ ಹಿರಿಯ ಕಾರ್ಮಿಕ ನಾಯಕರಾದ ವಿ.ಜೆ.ಕೆ.ನಾಯರ್

ಕರ್ನಾಟಕದಲ್ಲಿಂದು ಕೈಗಾರಿಕಾ ಪರಿಸ್ಥಿತಿ ಮತ್ತು ಕಾರ್ಮಿಕ ವರ್ಗ

ವಿ.ಜೆ.ಕೆ.ನಾಯರ್

ಭಾರತದಲ್ಲಿ ಕೈಗಾರಿಕೆ ಅಭಿವೃದ್ಧಿ ಕಂಡಿರುವ ರಾಜ್ಯಗಳಲ್ಲಿ ಕರ್ನಾಟಕವೂ ಒಂದು. ಮೂರು ಪ್ರಮುಖ ಹಂತಗಳಲ್ಲಿ ಕರ್ನಾಟಕ ಈ ಹಂತವನ್ನು ತಲುಪಿದೆ.

ಮೊದಲನೆಯ ಘಟ್ಟ-ಸ್ವಾತಂತ್ರ್ಯ ಪೂರ್ವದಲ್ಲಿ ಸರ್ ಎಂ.ವಿಶ್ವೇಶ್ವರಯ್ಯನವರ ಪ್ರಯತ್ನದಿಂದ ಜವಳಿ ಮತ್ತು ಇತರ ಕೈಗಾರಿಕೆಗಳು ಆರಂಭವಾಗಿದ್ದು.

ಎರಡನೆಯದು ಕೇಂದ್ರ ಸಾರ್ವಜನಿಕ ಉದ್ದಿಮ ವಲಯ ಕೈಗಾರಿಕೆಗಳನ್ನು ಅಭಿವೃದ್ಧಿಪಡಿಸಿದ್ದು ಮತ್ತು ಬೆಂಗಳೂರಿನ ಭವಿಷ್ಯದ ಕೈಗಾರಿಕಾ ಅಭಿವೃದ್ಧಿಗೆ ಭದ್ರ ಬುನಾದಿ ಹಾಕಿದ್ದು. ಮೂರನೆ ಘಟ್ಟ ಎಂದರೆ ಜಾಗತೀಕರಣದ ನಂತರದ್ದು. ಈ ಘಟ್ಟದಲ್ಲಿ ಮಾಹಿತಿ ತಂತ್ರಜ್ಞಾನ, ಮಾಹಿತಿ ತಂತ್ರಜ್ಞಾನ ಸಂಬಂಧಿತ ಸೇವಾ ವಲಯ, ಜೈವಿಕ ತಂತ್ರಜ್ಞಾನ ಮತ್ತು ಹೊಸ ಉದ್ಯಮಗಳ ಆರಂಭ ಮತ್ತು ಇತರ ಉದ್ಯಮ ಚಟುವಟಿಕೆಗಳ ಅಭಿವೃದ್ಧಿ.

ಕರ್ನಾಟಕದ ಪ್ರಸ್ತುತ ಕೈಗಾರಿಕಾ ಪರಿಸ್ಥಿತಿ ಈ ಮೂರು ಘಟ್ಟಗಳೊಂದಿಗೆ ನಿಕಟ ಸಂಬಂಧ ಹೊಂದಿದ್ದು, ಹೊಸ ಪರಿಸ್ಥಿತಿಗಳು ಹೊಸ ಕೈಗಾರಿಕೆಗಳ ಸ್ಥಾಪನೆಗೆ ನಾಂದಿಯಾಗಿವೆ.

ಸ್ವಾತಂತ್ರ್ಯ ಪೂರ್ವದಲ್ಲಿ ಪ್ರಾರಂಭಿಸಲಾದ ಬಹುತೇಕ ಜವಳಿ ಉದ್ಯಮಗಳು ಇಂದು ಮುಚ್ಚಿವೆ. ಬೆಂಗಳೂರು, ಮೈಸೂರು, ದಾವಣಗೆರೆ ಮತ್ತಿತರ ಕೇಂದ್ರಗಳಲ್ಲಿ ಉದ್ಯೋಗ ಪಡೆದಿದ್ದ ಲಕ್ಷಾಂತರ ಕಾರ್ಮಿಕರು ಇಂದು ಬೀದಿಗೆ ಬಿದ್ದಿದ್ದಾರೆ. ವಿಶ್ವೇಶ್ವರಯ್ಯನವರು ಸ್ಥಾಪಿಸಿದ ಕೈಗಾರಿಕೆಗಳಲ್ಲಿನ ಕಾರ್ಮಿಕರ ಪರಿಸ್ಥಿತಿಯೂ ಇದರಿಂದ ಹೊರತಾಗಿಲ್ಲ.

ಬೆಂಗಳೂರಿನ ಮೈಸೂರ್ ಲ್ಯಾಂಪ್ಸ್ ಮುಚ್ಚಲಾಗಿದೆ. ಜಿಇಎಫ್ ಕವಿಕಾ ಹೆಸರಿನಲ್ಲಿ ಕಾರ್ಯನಿರ್ವಹಿಸುತ್ತಿದ್ದರೆ ಎನ್‌ಜಿಇಎಫ್ ಈಗಾಗಲೇ ಮುಚ್ಚಲಾಗಿದೆ. ಕಿರ್ಲೋಸ್ಕರ್ ಕಂಪನಿಯ ಬಹುತೇಕ ಘಟಕಗಳು ಮುಚ್ಚಿವೆ. ಕೋಲಾರ ಜಿಲ್ಲೆಯಲ್ಲಿನ ಭಾರತ್ ಗೋಲ್ಡ್ ಮೈನ್ಸ್ ಮುಚ್ಚಲಾಗಿದೆ.

ಎರಡನೇ ಕೈಗಾರಿಕಾ ಘಟ್ಟದಲ್ಲಿ ಸ್ಥಾಪಿಸಲಾದ ಸಾರ್ವಜನಿಕ ವಲಯದ ಉದ್ಯಮಗಳಲ್ಲಿ ಒಂದಾದ ಹೆಚ್‌ಎಂಟಿ ಸಂಕಷ್ಟದಲ್ಲಿ ಸಿಲುಕಿದೆ. ಜಾಗತೀಕರಣದ ಯುಗದಲ್ಲಿ ಐಟಿಐ ಭಾರಿ ಸಮಸ್ಯೆಗಳನ್ನು ಎದುರಿಸುತ್ತಿದೆ. ಈ ಹಿಂದೆ 1.25ಲಕ್ಷ ಮಂದಿಗೆ ಉದ್ಯೋಗ ಕಲ್ಪಿಸಿದ್ದ ಈ ಐದು ಪ್ರಮುಖ ಸಾರ್ವಜನಿಕ ವಲಯದ ಉದ್ಯಮಗಳಲ್ಲಿ ಈಗ 50 ಸಾವಿರ ಮಂದಿ ಮಾತ್ರ ಕಾರ್ಯನಿರ್ವಹಿಸುತ್ತಿದ್ದಾರೆ.

ಹೊಸ ಧಾಳಿಗಳು

ಜಾಗತೀಕರಣ ಪ್ರಕ್ರಿಯೆ ಆರಂಭಗೊಂಡ ನಂತರ ರಾಜ್ಯದಲ್ಲಿ 2ಲಕ್ಷಕ್ಕೂ ಹೆಚ್ಚು ಮಂದಿ ಉದ್ಯೋಗ ಕಳೆದುಕೊಂಡು ಬೀದಿಗೆ ಬಿದ್ದಿದ್ದಾರೆ. ಇನ್ನೆಷ್ಟೋ ಮಂದಿ ಉದ್ಯೋಗ ಕಳೆದುಕೊಂಡಿದ್ದಾರೆ ಎಂಬುದನ್ನು ಇನ್ನೂ ತಿಳಿದುಕೊಳ್ಳಲು ಸಾಧ್ಯವಾಗಿಲ್ಲ.

ಇದೇ ಸಂದರ್ಭದಲ್ಲಿ ಮಾಹಿತಿ ತಂತ್ರಜ್ಞಾನ, ಹೊರಗಾಣಿಕೆ, ಮತ್ತಿತರ ಹೊಸ ಉದ್ಯಮಗಳು ಲಕ್ಷಾಂತರ ಉದ್ಯೋಗಗಳನ್ನು ಸೃಷ್ಟಿ ಮಾಡಿವೆ. ಹಾಗಿದ್ದರೂ ಹೊಸ ಪೀಳಿಗೆಯ ಈ ಉದ್ಯಮ ಮತ್ತು ಕೆಲಸದ ಹಾದರಿಗಳಲ್ಲಿ ಸಾಕಷ್ಟು ವ್ಯತ್ಯಾಸಗಳು ಸೃಷ್ಟಿಯಾಗಿವೆ.

ಈ ಹಿಂದೆ ಬೆಂಗಳೂರಿನಲ್ಲಿರಬಹುದು ಅಥವಾ ಹೊರಗಡೆ ಇರಬಹುದಾದ ಅಲ್ಲಿನ ಪರಿಸ್ಥಿತಿಗೆ ಅನುಗುಣವಾಗಿ ಭಾರಿ ಕೈಗಾರಿಕೆಗಳು ಸಿಬ್ಬಂದಿ ವೇತನ ನಿರ್ಧರಿಸುತ್ತಿದ್ದವು. ಆದರೆ ಈಗ ವೇತನ ಪರಿಸ್ಥಿತಿ ಕಾರ್ಮಿಕರ ಪರಿಸ್ಥಿತಿಗೆ ಅನುಗುಣವಾಗಿ ನಿರ್ಧಾರವಾಗುತ್ತಿದೆ. ಮಾಹಿತಿ ತಂತ್ರಜ್ಞಾನ ಮತ್ತು ಅದಕ್ಕೆ ಸಂಬಂಧಿಸಿದ ಉದ್ಯಮಗಳಲ್ಲಿನ ಸಿಬ್ಬಂದಿ ಹೆಚ್ಚು ವೇತನ ಪಡೆಯುತ್ತಿದ್ದಾರೆ. ಈ ಕ್ಷೇತ್ರಗಳಲ್ಲಿನ ಎಂಜಿನಿಯರುಗಳು ಮತ್ತು ಬಿಸಿನೆಸ್ ವ್ಯವಸ್ಥಾಪಕರು ಹೆಚ್ಚಿನ ವೇತನ ಪಡೆದರೆ, ತಯಾರಿಕಾ ವಲಯಗಳಲ್ಲಿನ ಎಂಜಿನಿಯರುಗಳು ಮತ್ತು ವ್ಯವಸ್ಥಾಪಕರ ವೇತನಗಳಲ್ಲಿ ಕುಸಿತ ಕಂಡಿದೆ.


HMT LIMITED


ದುಸ್ತರ ಜೀವನ

ಕಳೆದ ಶತಮಾನದಲ್ಲಿ ಕೆಲವು ನೂರರಷ್ಟು ಮಂದಿ ಮಾತ್ರ ತಿಂಗಳಿಗೆ ಸಾವಿರಾರು ರೂ. ವೇತನ ಪಡೆಯುತ್ತಿದ್ದರು. ಆದರೆ ಈಗ ಲಕ್ಷಾಂತರ ಮಂದಿ ಇಷ್ಟೊಂದು ಪ್ರಮಾಣದ ವೇತನ ಪಡೆಯುತ್ತಿದ್ದಾರೆ. ಇದು ಬೆಂಗಳೂರು ಭಾರಿ ವೇಗದಿಂದ ಹೆಚ್ಚು ನಗರೀಕರಣವಾಗುತ್ತಿರುವುದಕ್ಕೆ ಪ್ರಮುಖ ಕಾರಣವಾಗಿದೆ. ಭಾರಿ ಪ್ರಮಾಣದಲ್ಲಿ ನಗರೀಕರಣವಾಗುತ್ತಿರುವುದರಿಂದ ಭೂಮಿ ದರ ಗಗನ ಮುಟ್ಟಿದೆ. ರಿಯಲ್ ಎಸ್ಟೇಟ್, ಮನೆ ಬಾಡಿಗೆ ಮುಗಿಲು ಮುಟ್ಟಿದೆ. ಮಧ್ಯಮ ವರ್ಗ ಮತ್ತು ಬಡವರ ಜೀವನ ಸುಧಾರಣೆ ಮಟ್ಟ ದುಬಾರಿಯಾಗಿದೆ.

ಈ ನಗರೀಕರಣ ಎಂದೂ ದುಡಿಯದಿರುವ ಕೆಲವೇ ಮಂದಿಯ ಸಂಪತ್ತು ಹೆಚ್ಚಿಸಿದೆ. ಇದರೊಂದಿಗೆ ಎಲ್ಲ ವಲಯಗಳಲ್ಲೂ ಅಗ್ಗದ ದರಕ್ಕೆ ಮಾನವ ಸಂಪನ್ಮೂಲ ದೊರೆಯುವಂತೆ ಮಾಡಿದೆ.


ಹೊಸ ಕೈಗಾರಿಕೆಗಳಿಂದಾಗಿ ಸರ್ಕಾರ ಹೊಸ ರೀತಿಯ ಕಾರ್ಮಿಕ ಕಾನೂನುಗಳನ್ನು ಜಾರಿ ಮಾಡುವಂತೆ ಮಾಡಿದೆ. ಗುತ್ತಿಗೆ ಆಧರಿತ ಕಾರ್ಮಿಕ ಪದ್ಧತಿ ಹೆಚ್ಚಾಗಿದೆ. ಕೈಗಾರಿಕೆಗಳು ಖಾಯಂ ನೌಕರರನ್ನು ನೇಮಕಾತಿ ಮಾಡಿಕೊಳ್ಳುವ ಬದಲು ಗುತ್ತಿಗೆ ಕಾರ್ಮಿಕರತ್ತ ಮುಖ ಮಾಡಿವೆ. ಅಮೆರಿಕನ್ ಪವರ್ ಕಾರ್ಪೊರೇಷನ್‌ನಂತಹ ಹೊಸ ಕೈಗಾರಿಕೆ ಶೇಕಡ 50ರಷ್ಟು ಸಿಬ್ಬಂದಿಯನ್ನು ಗುತ್ತಿಗೆ ಆಧಾರದಲ್ಲಿ ನೇಮಿಸಿಕೊಂಡಿದೆ. ಎಲ್ಲ ಕೈಗಾರಿಕೆಗಳು ಕಾರ್ಮಿಕರನ್ನು ಗುತ್ತಿಗೆ ಆಧಾರದಲ್ಲಿ ನೇಮಿಸಿಕೊಳ್ಳುತ್ತವೆ. ಇಲ್ಲವೆ ಎಲ್ಲ ಕೆಲಸಗಳನ್ನು ಹೊರಗುತ್ತಿಗೆ ನೀಡುತ್ತಿವೆ. ಸರ್ಕಾರಿ ವಲಯದ ಸಂಸ್ಥೆಗಳೂ ಇದೇ ಟ್ರೆಂಡ್ ಅಳವಡಿಸಿಕೊಳ್ಳುತ್ತಿವೆ. ರಸ್ತೆ ಸಾರಿಗೆ ಸಂಸ್ಥೆಗಳು, ವಿದ್ಯುತ್ ಕಂಪನಿಗಳು ಗುತ್ತಿಗೆ ಆಧಾರದ ನೌಕರರನ್ನು ನೇಮಿಸಿಕೊಂಡಿವೆ. ಪುರಸಭೆ, ನಗರಸಭೆ ಮತ್ತು ಮಹಾನಗರ ಪಾಲಿಕೆಗಳು ತಮ್ಮ ಕೆಲಸ ಕಾರ್ಯಗಳಿಗಾಗಿ ಗುತ್ತಿಗೆ ಪದ್ಧತಿಯಲ್ಲಿ ಕಾರ್ಮಿಕರನ್ನು ನೇಮಿಸಿಕೊಂಡಿವೆ. ಗುತ್ತಿಗೆ ನೌಕರರು ಮಾತ್ರವಲ್ಲದೆ ಸರ್ಕಾರ ತನ್ನ ಕಾರ್ಯಕ್ರಮಗಳು, ಯೋಜನೆಗಳ ಜಾರಿಗೆ ಸ್ವಯಂ ಸೇವಾ ಕಾರ್ಮಿಕರನ್ನು ಅವಲಂಬಿಸಿದೆ. ಅಂಗನವಾಡಿ, ಮಧ್ಯಾಹ್ನದ ಊಟ, ಪಂಚಾಯತಿ ಮತ್ತಿತರ ಯೋಜನೆಗಳನ್ನು ಸ್ವಯಂ ಸೇವಾ ಕಾರ್ಮಿಕ ಆಧಾರದಲ್ಲಿ ನಡೆಸುತ್ತಿದೆ.

ಜಾಗತೀಕರಣ ನೀತಿಗಳು ಕಾರ್ಮಿಕರಿಗೆ ಮಾರಕವಾಗಿದ್ದು ಅವರ ಸ್ಥಿತಿಗತಿಗಳನ್ನೇ ಬದಲಾಯಿಸಿದೆ. ಜಾಗತೀಕರಣ ಪ್ರಕ್ರಿಯೆ ಆರಂಭವಾಗುವುದಕ್ಕೆ ಮೊದಲು ಕಾರ್ಮಿಕರು ತಾವು ಸಲ್ಲಿಸಿದ ಮೌಲ್ಯಯುತ ಸೇವೆಯಲ್ಲಿ ಶೇಕಡ 32ರಷ್ಟು ಪಾಲನ್ನು ಅನುಭವಿಸುತ್ತಿದ್ದರೆ, ಉದ್ಯಮಿಗಳು ಶೇಕಡ



12ರಷ್ಟು ಪಾಲನ್ನು ಅನುಭವಿಸುತ್ತಿದ್ದರು. ಜಾಗತೀಕರಣ ಪ್ರಕ್ರಿಯೆ ಆರಂಭವಾದ ನಂತರ ಕಾರ್ಮಿಕರು ತಾವು ಸಲ್ಲಿಸಿದ ಮೌಲ್ಯಯುತ ಸೇವೆಯಲ್ಲಿ ಶೇಕಡ 19ರಷ್ಟು ಪಾಲು ಅನುಭವಿಸಿದರೆ ಉದ್ಯಮಿಗಳು ಶೇಕಡ 32ರಷ್ಟು ಪಾಲು ಅನುಭವಿಸುತ್ತಿದ್ದಾರೆ ಎಂಬುದು ವಾರ್ಷಿಕ ಕೈಗಾರಿಕಾ ಸಮೀಕ್ಷೆ ವರದಿಯಿಂದ ಬೆಳಕಿಗೆ ಬಂದಿದೆ. ನೂರಾರು ಕಾರ್ಖಾನೆಗಳು ಮುಚ್ಚಿ, ಲಕ್ಷಾಂತರ ಕಾರ್ಮಿಕರನ್ನು ಬೀದಿಗೆ ತಳ್ಳಿದ್ದರಿಂದ ಹಾಗೂ ಕಾರ್ಮಿಕರನ್ನು ಗುತ್ತಿಗೆ ಆಧಾರದಲ್ಲಿ ನೇಮಕ ಮಾಡಿಕೊಳ್ಳುತ್ತಿರುವುದರಿಂದ ಈ ಪರಿಸ್ಥಿತಿ ಸೃಷ್ಟಿಯಾಗಿದೆ.

ಕಾರ್ಮಿಕರು ತಮ್ಮ ಪರವಾದ ನೀತಿಗಳನ್ನು ರೂಪಿಸಬೇಕೆಂದು ಸಮರಧೀರ ಹೋರಾಟಗಳನ್ನು ಸಂಘಟಿಸದೆ ಈ ಪರಿಸ್ಥಿತಿ ಬದಲಾವಣೆಯಾಗಲು ಸಾಧ್ಯವಿಲ್ಲ. ಇದರ ಮೊದಲ ಪ್ರಯತ್ನವಾಗಿ ಕನಿಷ್ಠ ವೇತನ ನೀತಿಯನ್ನು ಜಾರಿಗೊಳಿಸಲು ಹೋರಾಟಗಳನ್ನು ನಡೆಸಬೇಕು. ಅಂದರೆ ಈ ಕನಿಷ್ಠ ವೇತನ ಜೀವನಾಧಾರಕ್ಕೆ ತಕ್ಕಷ್ಟರ ಮಟ್ಟಕ್ಕಿಂತಲೂ ಕಡಿಮೆ ಇರಬಾರದು. ಪ್ರತಿ ಅಕುಶಲ ಕಾರ್ಮಿಕನಿಗೆ ಗ್ರಾಹಕರ ದರ ಸೂಚ್ಯಂಕ(ಸಿಪಿಐ)ದ ಅನುಸಾರ 2967 ಅಂಕಗಳಂತೆ ಪ್ರತಿ ತಿಂಗಳಿಗೆ ಕನಿಷ್ಠ 4,080 ರೂ. ವೇತನ ಪಾವತಿಸಬೇಕು. ಅರೆಕುಶಲ ಕಾರ್ಮಿಕರಾಗಿದ್ದರೆ ಈ ಮೊತ್ತ 4,692 ರೂ.ಗಿಂತಲೂ ಕಡಿಮೆ ಇರಬಾರದು. ಕುಶಲ ಕಾರ್ಮಿಕರಿಗೆ ನೀಡುವ ವೇತನ ಕನಿಷ್ಠ 5,304 ರೂ. ಮತ್ತು ಉನ್ನತ ಮಟ್ಟದ ಕುಶಲ ಕಾರ್ಮಿಕರಿಗೆ ನೀಡುವ ವೇತನ ಕನಿಷ್ಠ 6,120 ರೂ.ನಷ್ಟಿರಬೇಕು. ಇದು ಸಿಪಿಐನ ಪ್ರತಿ ಒಂದು ಅಂಕಕ್ಕೆ 1.50 ರೂ. ನಂತೆ ಲೆಕ್ಕಾಚಾರ ಮಾಡಲಾಗಿದೆ.



ಗುತ್ತಿಗೆ ಕಾರ್ಮಿಕರ ರಕ್ಷಣೆಗೆ ಕಠಿಣ ಕಾನೂನು ರೂಪಿಸಬೇಕಂತಲೂ ಒತ್ತಾಯಿಸುತ್ತಿದ್ದೇವೆ. ಮೂರನೆಯದಾಗಿ ಸರ್ಕಾರದ ಅಂಗಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲ ನೌಕರರನ್ನು ಭವಿಷ್ಯನಿಧಿ ಸೌಲಭ್ಯಕ್ಕೆ ಅರ್ಹವಾಗುವಂತೆ ಕಾನೂನು ರೂಪಿಸಬೇಕೆಂದು ಒತ್ತಾಯಿಸುತ್ತೇವೆ.

ಅಸಂಘಟಿತ ವಲಯದ ಕಾರ್ಮಿಕರಿಗೆ ಭದ್ರತೆ ಒದಗಿಸುವ ಮತ್ತು ಅವರ ಸೇವಾ ಪರಿಸ್ಥಿತಿಗಳಲ್ಲಿ ಸುಧಾರಣೆ ತರಲಿರುವ ಮಸೂದೆ ಜಾರಿಗೊಳಿಸಬೇಕೆಂದು ಒತ್ತಾಯಿಸುವುದರೊಂದಿಗೆ ಈ ಮೂರು ಬೇಡಿಕೆಗಳನ್ನು ಸೇರಿಸಿ ಹೋರಾಟಗಳನ್ನು ರೂಪಿಸಬೇಕಾಗಿದೆ.

2008ರ ಏಪ್ರಿಲ್ 1ರಿಂದ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯನ್ನು ರಾಜ್ಯದ ಎಲ್ಲ ಜಿಲ್ಲೆಗಳಿಗೂ ವಿಸ್ತರಿಸಬೇಕು. ಎಲ್ಲ ಕಾರ್ಮಿಕರು ಕಡ್ಡಾಯವಾಗಿ ನೋಂದಾಯಿಸಿಬೇಕು. ಹಾಗೂ ವರ್ಷಕ್ಕೆ 100 ದಿನ ಕಡ್ಡಾಯವಾಗಿ ಉದ್ಯೋಗ ಪಡೆಯಬೇಕು. ಇಲ್ಲದಿದ್ದಲ್ಲಿ ನಿರುದ್ಯೋಗ ಪರಿಹಾರ ಪಡೆಯಬೇಕು.

ಸಮಸ್ತ ಕಾರ್ಮಿಕರ ಬಲಿಷ್ಠ ಚಳುವಳಿಯನ್ನು ರೂಪಿಸುವುದರಿಂದ ಮಾತ್ರ ಈ ಗುರಿ ಮುಟ್ಟಲು ಸಾಧ್ಯ. ಆಗ ಮಾತ್ರ ಪರಿಸ್ಥಿತಿಯನ್ನು ಕಾರ್ಮಿಕರ ಪರವಾದ ಸೇವೆಯಾಗಿ ಪರಿವರ್ತಿಸಲು ಸಾಧ್ಯ. ○



ಕರಾವಳಿಯಲ್ಲಿ ತೀವ್ರ ಆಟಾಟೋಪ ನಡೆಸುತ್ತಿರುವ ಕೋಮುಶಕ್ತಿಗಳ ವಿರುದ್ಧ ದೃಢ ಹೋರಾಟ ನಡೆಸಲು ತೀರ್ಮಾನಿಸಿದ ಸಿಪಿಐ(ಎಂ) ದಕ್ಷಿಣಕನ್ನಡ ಜಿಲ್ಲಾ ಸಮ್ಮೇಳನದ ವರದಿ

ದಕ್ಷಿಣ ಕನ್ನಡ : ಕೋಮುವಾದದ ವಿರುದ್ಧ ಹೋರಾಟುವ ದೃಢಸಂಕಲ್ಪ

ಕರಾವಳಿಯನ್ನು ಇತ್ತೀಚಿನ ವರ್ಷಗಳಲ್ಲಿ ತಲ್ಲಣಗೊಳಿಸಿರುವ ಕೋಮುವಾದಿಗಳ ಅಟ್ಟಹಾಸವನ್ನು ದೃಢವಾಗಿ ಎದುರಿಸಲು ಸಿಪಿಐ(ಎಂ) 19ನೇ ದಕ್ಷಿಣ ಕನ್ನಡ ಜಿಲ್ಲಾ ಸಮ್ಮೇಳನ ತೀರ್ಮಾನಿಸಿದೆ. ಗೋಸಾಗಾಟ ಮತ್ತು ಗೋಮಾಂಸ ಮಾರಾಟವನ್ನು ವಿರೋಧಿಸುವ ನೆಪದಲ್ಲಿ ಮುಸ್ಲಿಮರ ಮೇಲೆ ದೈಹಿಕ ಹಲ್ಲೆ, ಆದಿ ಉಡುಪಿಯಲ್ಲಿ ಮುಸ್ಲಿಂ ವೃದ್ಧ ಮತ್ತು ಆತನ ಮಗನನ್ನು ಬೆತ್ತಲೆಗೊಳಿಸಿ ಹಲ್ಲೆ, ಯುವಕ-ಯುವತಿಯರು ತಮ್ಮೊಳಗೆ ಮಾತನಾಡುವುದನ್ನು ಅಥವಾ ಒಟ್ಟಿಗೆ ಸಂಚರಿಸುವುದನ್ನು ಆಕ್ಷೇಪಿಸಿ ಹಲ್ಲೆ ನಡೆಸುವುದು ಇತ್ಯಾದಿ ಅಮಾನವೀಯ ಕೃತ್ಯಗಳನ್ನು ಸಂಘ ಪರಿವಾರದವರು ನಡೆಸುತ್ತಿರುವುದನ್ನು ಸಮ್ಮೇಳನವು ಉಗ್ರವಾಗಿ ಖಂಡಿಸಿದೆ. ಹಿಂದೂ ಕೋಮುವಾದಕ್ಕೆ ಪ್ರತಿಕ್ರಿಯೆಯಾಗಿ ಮುಸ್ಲಿಂ ಮೂಲಭೂತವಾದಿಗಳು ಮತ್ತು ಕೆ.ಎಫ್.ಡಿ.ಯಂತಹ ಸಂಘಟನೆಗಳು ಅಲ್ಪಸಂಖ್ಯಾತರ ನಡುವೆ ಉದ್ರೇಕಕಾರಿ ಪ್ರಚಾರಗಳನ್ನು ನಡೆಸುತ್ತಿದ್ದಾರೆ. ಎರಡೂ ಕಡೆಗಳ ಕೋಮುವಾದಿಗಳು ಹರಡುತ್ತಿರುವ ಕೋಮುದ್ವೇಷಗಳು ಕರಾವಳಿಯ ಜನಸಾಮಾನ್ಯರಲ್ಲಿ ಭೀತಿಯ ವಾತಾವರಣವನ್ನು ನಿರ್ಮಿಸಿವೆ. ಈ ಹಿನ್ನಲೆಯಲ್ಲಿ ಕೋಮುದ್ವೇಷವನ್ನು ಹರಡುವ ಎಲ್ಲಾ ಶಕ್ತಿಗಳ ವಿರುದ್ಧ ಜಾತ್ಯಾತೀತ ಶಕ್ತಿಗಳು ಒಗ್ಗಟ್ಟಿನಿಂದ ಹೋರಾಡಬೇಕೆಂದು ಸಮ್ಮೇಲನವು ಕರೆ ನೀಡಿವೆ.

ಆರಂಭದಲ್ಲಿ ಸಮ್ಮೇಳನವನ್ನು ಉದ್ಘಾಟಿಸಿದ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯ ಜಿ.ವಿ.ಶ್ರೀರಾಮರೆಡ್ಡಿಯವರು ಮಾತನಾಡುತ್ತಾ, ದಕ್ಷಿಣ ಕನ್ನಡ ಜಿಲ್ಲೆಯನ್ನು ಗುಜರಾತ್ ಮಾದರಿಯಲ್ಲಿ ಅಭಿವೃದ್ಧಿಪಡಿಸುವುದಾಗಿ ಹೇಳುತ್ತಿರುವ ಬಿಜೆಪಿ ನಾಯಕರು ಗೋಧ್ರಾ ನಂತರದ ಗುಜರಾತ್ ಮಾದರಿಯನ್ನು ಜಾರಿಗೊಳಿಸಲು ಪ್ರಯತ್ನಿಸುತ್ತಿದ್ದಾರೆ ಎಂದು ಟೀಕಿಸಿದರು. ಜೆಡಿ(ಎಸ್)ನವರು ವಚನಭ್ರಷ್ಟರು, ತಮ್ಮ ಪಕ್ಷಕ್ಕೆ ಮುಖ್ಯಮಂತ್ರಿ ಸ್ಥಾನ ಕೊಡಲಿಲ್ಲ ಎಂದು ಪ್ರಲಾಪಿಸುತ್ತಿರುವ ಬಿಜೆಪಿಯವರು ಈ ದೇಶದ ಮಹಾನ್ ವಚನಭ್ರಷ್ಟರು. ಬಾಬರಿ ಮಸೀದಿಗೆ ಯಾವುದೇ ಹಾನಿ ಮಾಡುವುದಿಲ್ಲವೆಂದು ಸುಪ್ರೀಂಕೋರ್ಟಿಗೆ ವಚನ ನೀಡಿದ ಬಿಜೆಪಿಯವರು ಬಾಬರಿ ಮಸೀದಿಯನ್ನು ಧ್ವಂಸ ಮಾಡಿದರು. ಅಯೋಧ್ಯೆಯಲ್ಲಿ ರಾಮ ಮಂದಿರ ಕಟ್ಟುತ್ತೇವೆಂದು ಹೇಳಿ ಇಟ್ಟಿಗೆ ಮತ್ತು ಹಣ ಸಂಗ್ರಹ ಮಾಡಿದ ಅವರು ಮಂದಿರ ಕಟ್ಟದೆ ರಾಮಭಕ್ತರಿಗೆ ವಂಚನೆ ಮಾಡಿದರು ಎಂದು ಅವರು ಎತ್ತಿತೋರಿಸಿದರು.

ಉದ್ಘಾಟನಾ ಸಮಾರಂಭದ ಮುಖ್ಯ ಅತಿಥಿಗಳಾಗಿ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಜಿ.ಎನ್.ನಾಗರಾಜ್ ಅವರು ಮಾತನಾಡುತ್ತಾ, ರಾಜ್ಯದ ಮುಸ್ಲಿಂ ಮೂಲಭೂತವಾದಿ ಸಂಘಟನೆ ಕೆ.ಎಫ್.ಡಿ.ಯನ್ನು ನಕ್ಸಲರು ಬೆಳೆಸುತ್ತಿರುವುದು ಪ್ರಜಾಪ್ರಭುತ್ವಕ್ಕೆ ಅಪಾಯಕಾರಿಯಾಗಿದೆ ಎಂದು ಆತಂಕ ವ್ಯಕ್ತಪಡಿಸಿದರು. ನಕ್ಸಲರು ಕೋಮುವಾದಿಗಳನ್ನು ವಿರೋಧಿಸುತ್ತಿದ್ದಾರೆಂಬುದು ಹುಸಿವಾದ. ನಕ್ಸಲ್‌ವಾದಿಗಳಿಂದ ಮುಸ್ಲಿಂ ಮೂಲಭೂತವಾದಿಗಳು ಬೆಳೆಯುತ್ತಿದ್ದಾರೆ. ಈ ಮೂಲಕ ರಾಜ್ಯದಲ್ಲಿ ಸಂಘ ಪರಿವಾರದ ಬೆಳವಣಿಗೆಗೂ ಕಾರಣರಾಗಿದ್ದಾರೆ ಎಂದು ಟೀಕಿಸಿದರು. ಮುಸ್ಲಿಂ ಮೂಲಭೂತವಾದ, ಸಂಘ ಪರಿವಾರ ಹಾಗೂ ಭಯೋತ್ಪಾದನೆಯ ವಿರುದ್ಧ ಪಕ್ಷದ ಕಾರ್ಯಕರ್ತರು ಹೋರಾಡಬೇಕೆಂದು ಅವರು ಕರೆ ನೀಡಿದರು.



ವೈಜ್ಞಾನಿಕ, ವಸ್ತುನಿಷ್ಟ ಅಧ್ಯಯನ ಆಗುವ ತನಕ ಮಂಗಳೂರು ಸೆಝ್ ಜಾರಿಗೊಳಿಸದಿರಲು ಒತ್ತಾಯ

ಪ್ರಸ್ತಾಪಿತ ಮಂಗಳೂರು ವಿಶೇಷ ಆರ್ಥಿಕ ವಲಯದಿಂದಾಗಿ ಜಿಲ್ಲೆಯ ಕೃಷಿ, ನೆಲ, ಜಲ, ಪರಿಸರ ಮತ್ತು ಜನತೆಯ ಮೇಲಾಗುವ ಪರಿಣಾಮಗಳ ಕುರಿತು ವೈಜ್ಞಾನಿಕ, ವಸ್ತುನಿಷ್ಟ ಅಧ್ಯಯನ ನಡೆಸಬೇಕೆಂದೂ, ಅಷ್ಟರ ತನಕ ಈ ಯೋಜನೆಗಾಗಿ ಯಾವುದೇ ಭೂ ಸ್ವಾಧೀನ ಮಾಡಬಾರದೆಂದೂ ಸಮ್ಮೇಳನವು ಸರ್ಕಾರವನ್ನು ಒತ್ತಾಯಿಸಿದೆ. ಭೂಮಿ ಕಳಕೊಳ್ಳುವ ರೈತರಿಗೆ ಮಾತ್ರವಲ್ಲದೆ ಅದನ್ನು ಅವಲಂಬಿಸಿರುವ ಒಕ್ಕಲುಗಳಿಗೂ ಕೃಷಿ ಕಾರ್ಮಿಕರಿಗೂ ಸಮರ್ಪಕ ಪರಿಹಾರ ಮತ್ತು ಪುನರ್ ವಸತಿ ಒದಗಿಸಲು 1894ರ ಭೂ ಸ್ವಾಧೀನ ಕಾಯಿದೆಗೆ ತಿದ್ದುಪಡಿಗಳನ್ನು ತರಬೇಕೆಂದೂ ಸಮ್ಮೇಳನವು ಸರ್ಕಾರವನ್ನು ಒತ್ತಾಯಿಸಿದೆ.

ಜಿಲ್ಲೆಯಲ್ಲಿ ಉದ್ಯೋಗಾವಕಾಶಗಳನ್ನು ಒದಗಿಸಬಲ್ಲ ಘನ ಕೈಗಾರಿಕೆಗಳನ್ನು ಸ್ಥಾಪಿಸಲು ಸರ್ಕಾರವು ತಕ್ಷಣ ಕ್ರಮ ಕೈಗೊಳ್ಳಬೇಕೆಂದೂ, ನೀರಾವರಿ ಮತ್ತು ಕುಡಿಯುವ ನೀರಿನ ಸಮಸ್ಯೆಗಳನ್ನು ಪರಿಹರಿಸಲು ಜಿಲ್ಲೆಯ ಪ್ರಮುಖ ನದಿಗಳಾದ ನೇತ್ರಾವತಿ, ಕುಮಾರಧಾರಾ, ಫಾಲ್ಗುಣಿ ಮತ್ತು ಶಾಂಭವಿ ನದಿಗಳನ್ನು ಅಣೆಕಟ್ಟುಗಳನ್ನು ಸರ್ಕಾರವನ್ನು ಒತ್ತಾಯಿಸಿದೆ. ಅಡಿಕೆ, ಕರಿಮೆಣಸು, ತೆಂಗು ಇತ್ಯಾದಿ ಬೆಳೆಗಳಿಗೆ ಸರ್ಕಾರವು ತಕ್ಷಣ ಬೆಂಬಲ ಬೆಲೆ ಘೋಷಿಸಿ ಬೆಳೆಗಾರರನ್ನು ಸಂಕಷ್ಟದಿಂದ ಪಾರು ಮಾಡಬೇಕೆಂದೂ, ಅಡಿಕೆಯ ಖರೀದಿ ಮತ್ತು ಮಾರಾಟಕ್ಕಾಗಿ ಸರ್ಕಾರವು ಕಾಫಿ ಬೋರ್ಡಿನ ಮಾದರಿಯಲ್ಲಿ ಅಡಿಕೆ ಬೋರ್ಡ್‌ನ್ನು ರಚಿಸಬೇಕೆಂದೂ ಸಮ್ಮೇಳನವು ಒತ್ತಾಯಿಸಿದೆ.

ಮಂಗಳೂರಿನಿಂದ ಹೊಸ ರೈಲುಗಳನ್ನು ಪ್ರಾರಂಭಿಸಲು ಒತ್ತಾಯ

1. ಮಂಗಳೂರಿನಿಂದ ಬೆಂಗಳೂರಿಗೆ ಹಗಲಿನಲ್ಲಿ ರೈಲನ್ನು ಆರಂಭಿಸಬೇಕು.
2. ಮಂಗಳೂರಿನಿಂದ ಹಾಸನ, ಕಡೂರು ಮಾರ್ಗವಾಗಿ ಮೀರಜ್‌ಗೆ ಈ ಮೊದಲು ಮೀಟರ್‌ಗೇಜ್‌ನಲ್ಲಿ ಓಡುತ್ತಿದ್ದ ರೈಲನ್ನು ಬ್ರಾಡ್‌ಗೇಜ್‌ನಲ್ಲಿ ಪುನರಾರಂಭಿಸಬೇಕು.
3. ಮಂಗಳೂರಿನಿಂದ ಹೈದರಾಬಾದ್‌ಗೆ ನೂತನ ರೈಲು ಆರಂಭಿಸಬೇಕು.
4. ಮಂಗಳೂರಿನಿಂದ ಬೆಂಗಳೂರು ಮೂಲಕ ಚೆನ್ನೈಗೆ ನೂತನ ರೈಲು ಆರಂಭಿಸಬೇಕು.
5. ಮಂಗಳೂರಿನಿಂದ ಹೌರಾಕ್ಕೆ ನೂತನ ರೈಲು ಆರಂಭಿಸಬೇಕು.
6. ಮಂಗಳೂರು ಸುಬ್ರಮಣ್ಯ ಮಧ್ಯೆ ಪ್ರತಿ ಎರಡು ಗಂಟೆಗೊಂದರಂತೆ ಪ್ಯಾಸೆಂಜರ್ ರೈಲು ಆರಂಭಿಸಬೇಕು.
7. ಮಂಗಳೂರು ಕುಂದಾಪುರ ನಡುವೆ ದಿನಕ್ಕೆರಡು ಬಾರಿ ಓಡುವ ನೂತನ ಪ್ಯಾಸೆಂಜರ್ ರೈಲು ಆರಂಭಿಸಬೇಕು.

ಈ ಬಗ್ಗೆ ಮುಂಬರುವ ರೈಲ್ವೆ ಬಜೆಟ್‌ನಲ್ಲಿ ಅವಕಾಶವನ್ನು ಒದಗಿಸಬೇಕೆಂದು ಸಮ್ಮೇಳನವು ರೈಲ್ವೇ ಸಚಿವರನ್ನು ಒತ್ತಾಯಿಸಿದೆ.

ಮಂಗಳೂರಿನಲ್ಲಿ ಪೂರ್ಣ ಪ್ರಮಾಣದ ಪಾಸ್‌ಪೋರ್ಟ್ ಕಛೇರಿ ಸ್ಥಾಪಿಸಬೇಕೆಂದು ಸಮ್ಮೇಳನವು ಸರ್ಕಾರವನ್ನು ಒತ್ತಾಯಿಸಿದೆ. ಒರಿಸ್ಸಾದಲ್ಲಿ ಇತ್ತೀಚಿಗೆ ಕ್ರೈಸ್ತರ ಶಿಕ್ಷಣ ಸಂಸ್ಥೆಗಳ ಮೇ[...] ಮತ್ತು ಚರ್ಚುಗಳ ಮೇಲೆ ನಡೆಸಿ[...] ಕೋಮುವಾದಿಗಳ ದಾಳಿ, ಕೊಲೆ, ಕೊಳ್ಳಿಯಿಡುವ[...] ಮೊದಲಾದ ಹಿಂಸಾಚಾರಗಳನ್ನು ಸಮ್ಮೇಳನ[...] ಉಗ್ರವಾಗಿ ಖಂಡಿಸಿದೆ.

ಜಿಲ್ಲಾ ಕಾರ್ಯದರ್ಶಿಯಾಗಿ ಬಿ.ಮಾಧವ ಆಯ್ಕೆ

ಪಕ್ಷದ ದಕ್ಷಿಣ ಕನ್ನಡ ಜಿಲ[...] ಕಾರ್ಯದರ್ಶಿಯಾಗಿ ಹಿರಿಯ ಕಾರ್ಮಿಕ ನಾಯ[...] ಬಿ.ಮಾಧವ ಅವರು ಆಯ್ಕೆಯಾಗಿದ್ದಾ[...] ಸಮ್ಮೇಳನವು 25 ಮಂದಿಯ ನೂತನ ಜಿ[...] ಸಮಿತಿಯನ್ನು ಆಯ್ಕೆ ಮಾಡಿತು. ಜಿ[...] ಕಾರ್ಯದರ್ಶಿ ಮಂಡಳಿ ಸದಸ್ಯರಾಗಿ ಬಿ.ಮಾಧವ[...] ಕೆ.ಆರ್.ಶ್ರೀಯಾನ್, ರಾಮಚಂದ್ರ ಉಚ್ಚಿಲ[...] ಜೆ.ಬಾಲಕೃಷ್ಣಶೆಟ್ಟಿ, ಯು.ಬಿ.ಲೋಕಯ್ಯ, ವಸ[...] ಆಚಾರಿ ಮತ್ತು ಯಾದವ ಶೆಟ್ಟಿಅವರನ್ನು ಆ[...] ಮಾಡಲಾಯಿತು.


ಬಿ.ಮಾಧವ, ಜೆ.ಬಾಲಕೃಷ್ಣಶೆಟ್ಟಿ ಮ[...] ಶಿವಕುಮಾರ್ ಇವರನ್ನು ಒಳಗೊಂಡ ಅಧ್ಯಕ್ಷೀ[...] ಮಂಡಳಿಯು ಸಮ್ಮೇಳನದ ಕಲಾಪಗಳ[...] ನಡೆಸಿತು.

ಸ್ವಾಗತ ಸಮಿತಿಯ ಶ್ಲಾಘನೀಯ ಕೆಲಸ:

ಸಂಗಾತಿ ಕೃಷ್ಣಪ್ಪ ಸಾಲಿಯಾನ್ ಅಧ್ಯಕ್ಷರಾ[...] ರಾಮಚಂದ್ರ ಉಚ್ಚಿಲ್ ಕಾರ್ಯದರ್ಶಿಯಾಗಿ[...] ಸ್ವಾಗತ ಸಮಿತಿಯು ಸಮ್ಮೇಳನವ[...] ಯಶಸ್ವಿಗೊಳಿಸಲು ಮಾಡಿದ ಕೆಲಸಗ[...] ಶ್ಲಾಘನೀಯವಾಗಿದ್ದವು. ಇಡೀ ಉಳ್ಳಾ[...] ವಲಯವನ್ನು ಬ್ಯಾನರ್, ಬಂಟಿಂಗ್ಸ್ ಮ[...] ಧ್ವಜಗಳಿಂದ ಸಿಂಗರಿಸಲಾಗಿತ್ತು. ಅಸಂಖ್ಯ ಸ್ವಯ[...] ಸೇವಕ ಸಂಗಾತಿಗಳು ಹಗಲಿರುಳು ದುಡಿ[...] ಸಮ್ಮೇಳನವನ್ನು ಯಶಸ್ವಿಗೊಳಿಸಿದರು.



ಸಿಪಿಐ(ಎಂ) ದಕ್ಷಿಣ ಕನ್ನಡ ಜಿಲ್ಲೆಯ ನೂತನ ಕಾರ್ಯದರ್ಶಿಯಾಗಿ ಆಯ್ಕೆಯಾದ ಬಿ.ಮಾಧವ



ಮೂರು ದಶಕಗಳ ಕಾಲ ಸಿಪಿಐ(ಎಂ) ದಕ್ಷಿಣ ಕನ್ನಡ ಜಿಲ್ಲಾ ಕಾರ್ಯದರ್ಶಿಯಾಗಿದ್ದ ಕಾಂ. ಕೆ.ಆರ್.ಶ್ರೀಯಾನ್



ಸಿಪಿಐ(ಎಂ) ಉಡುಪಿ ಜಿಲ್ಲಾ ಕಾರ್ಯದರ್ಶಿಯಾಗಿ ಆಯ್ಕೆಯಾಗಿರುವ ಕಾಂ.ಕೆ.ಶಂಕರ್

ಹ್ಞ...ಹ್ಞಾ...ಹ್ಞಾ...

ಮಾಯೆ

ಈ ಜಗತ್ತೇ ಒಂದು ಮಾಯೆ.
ಇದೊಂದು ಭ್ರಮೆ, ನಾವು ನೀವು
ನೋಡುತ್ತಿರುವುದೆಲ್ಲಾ ಒಂದು ಕನಸು...
ಎನ್ನುವ ಮಾಯಾವಾದ ಗೊತ್ತಲ್ಲವೇ?
ಶಂಕರಾಚಾರ್ಯರ ಅದ್ವೈತ ಸಿದ್ಧಾಂತ ಇದು

ಇಂತಹ ಅದ್ವೈತವಾದಿ ಗುರುಗಳೊಬ್ಬರು ಮರದ ಕೆಳಗೆ ತಮ್ಮ ಶಿಷ್ಯಂದಿರನ್ನು ಕೂರಿಸಿಕೊಂಡು ಅದ್ವೈತ ಸಿದ್ಧಾಂತದ ಕುರಿತ ಉಪದೇಶ ಕೊಡುತ್ತಿದ್ದರಂತೆ. ಅದೆಲ್ಲಿತ್ತೋ ಒಂದು ದೊಡ್ಡ ಆನೆ, ಅದೂ ಮದವೇರಿದ ಒಂಟಿ ಸಲಗ ಜೋರಾಗಿ ಘೀಳಿಡುತ್ತಾ ಇತ್ತ ಕಡೆ ನುಗ್ಗಿ ಓಡಿ ಬರತೊಡಗಿತಂತೆ. ಅದುವರೆಗೂ ಜಗತ್ತೇ ಮಾಯೆ, ಭ್ರಮೆ ಎನ್ನುತ್ತಿದ್ದ ಗುರುಗಳು ಗಾಬರಿಯಾಗಿ, ಶಿಷ್ಯಂದಿರನ್ನು ಗಾಬರಿ ಮಾಡಿ ಎಲ್ಲರನ್ನು ಓಡಿಸಿಕೊಂಡು ದೂರಕ್ಕೆ ಪೇರಿಕಿತ್ತರಂತೆ.

ಪಾಪ ಜಗತ್ತು ಭ್ರಮಯೋ ಸತ್ಯವೋ ಅಂತ ಆ ಮೇಲೆ ಕೊಂಚ ಕೊಂಚ ಮನವರಿಕೆಯಾಯಿತೇನೋ ಅವರಿಗೆ.

ಸಮಾಜವಾದ ಎಂದು, ಹೇಗೆ? ಪ್ರಸಕ್ತ ಸನ್ನಿವೇಶದಲ್ಲಿ ಮಾಡಬಹುದಾದ್ದು ಏನು ಎಂಬ ಬಗ್ಗೆ ವಸ್ತುನಿಷ್ಠ ವಿಶ್ಲೇಷಣೆಯನ್ನು ನಡೆಸಿದ ಹಿರಿಯ ಮುತ್ಸದ್ದಿ ಜ್ಯೋತಿಬಸುರವರ ಹೇಳಿಕೆಯನ್ನು ಮಾಧ್ಯಮಗಳು ತಿರುಚುವುದರ ಹಿಂದಿನ ಉದ್ದೇಶವಾದರೂ ಏನು? ಭಾರತದ ಸಮಾಜವಾದ ಯಾವಾಗ? ಓದಿ.

ಬಂಡವಾಳಶಾಹಿ ಬಗ್ಗೆ ಜ್ಯೋತಿಬಸು ಹೇಳಿಕೆ

ಮಾಧ್ಯಮಗಳ ಗೊಂದಲ ಮತ್ತು ಅಜ್ಞಾನದ ಪ್ರದರ್ಶನ

ರಿಯ ಮಾರ್ಕ್ಸ್‌ವಾದಿ ಮುತ್ಸದ್ದಿ ಜ್ಯೋತಿ ುರವರು ಪಶ್ಚಿಮ ಬಂಗಾಳದಲ್ಲಿ ಡವಾಳಶಾಹಿ ಬೆಳವಣಿಗೆಯ ಸ್ವರೂಪ ಮತ್ತು ರಲ್ಲಿ ಎಡರಂಗದ ಪಾತ್ರದ ಬಗ್ಗೆ ಮಾಡಿರುವ ಪ್ಪಣಿಗಳನ್ನು ಮಾಧ್ಯಮಗಳು ಅವರವರ ವಕ್ಕೆ(ಅಥವಾ ಅಜ್ಞಾನಕ್ಕೆ?) ತಕ್ಕಂತೆ ವರದಿ ಡಿವೆ. ಆ ಮೂಲಕ ಗೊಂದಲಗಳನ್ನು ಸೃಷ್ಟಿಸಲು ುತ್ನಿಸಿವೆ. ಇದರಲ್ಲಿ ಕನ್ನಡದ ಪತ್ರಿಕೆಗಳೂ ಹಿಂದೆ ದ್ದಿಲ್ಲ.

ಜ್ಯೋತಿ ಬಸುರವರು ಹೇಳಿದ್ದಾದರೂ ಏನು? ವರಿ 6 ರಂದು ಸಿಪಿಐ(ಎಂ)ನ ಪಶ್ಚಿಮ ಬಂಗಾಳ ಜ್ಯ ಕಾರ್ಯದರ್ಶಿ ಮಂಡಳಿಯ ಸಭೆಯ ನಂತರ ುಝಫರ್ ಭವನದಲ್ಲಿ ನೆರೆದಿದ್ದ ಪತ್ರಕರ್ತರೊಡನೆ ಾತನಾಡುತ್ತಾ ಅವರು ಎಂದಿನಂತೆ ಖಾಸಗೀ ಡವಾಳ, ಕೈಗಾರಿಕೀಕರಣ ಇತ್ಯಾದಿಗಳ ಬಗ್ಗೆ ್ರಕರ್ತರು ಕೇಳಿದ ಪ್ರಶ್ನೆಗಳಿಗೆ ಉತ್ತರ ನೀಡಿದರು. ಡರಂಗ ಸರಕಾರ ಖಾಸಗಿಯವರಿಂದ ಬಂಡವಾಳ ಡಿಕೆ ಆಹ್ವಾನಿಸುತ್ತಿದೆ, ಇದಕ್ಕೆ ನಿಮ್ಮ ಕ್ಷೇಪವಿಲ್ಲವೇ ಎಂದು ಕೇಳಿದಾಗ, 'ಏನು ಆಕ್ಷೇಪ? ಗ ಏಕೆ ಈ ಪ್ರಶ್ನೆ ಎಂದು ಅರ್ಥವಾಗುತ್ತಿಲ್ಲ..... ವು ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಇದ್ದೇವೆ. ಜ್ಯಕ ಅಭಿವೃದ್ಧಿಗೆ ನಮಗೆ ಬಂಡವಾಳ ಬೇಕು. ದರೆ ನಾವು ಪರಸ್ಪರರ ಹಿತಾಸಕ್ತಿಗಳನ್ನು ಗಮನದಲ್ಲಿ ಟ್ಟುಕೊಳ್ಳಬೇಕು, ಕಾರ್ಮಿಕರ ಹಿತಾಸಕ್ತಿಗಳನ್ನೂ ಕಾಪಾಡಬೇಕು' ಎಂದರು. 'ನಾವು ಹಲವು ಬಾರಿ ಳಿದ್ದೇವೆ-ಕೃಷಿರಂಗದಲ್ಲಿ ಸಾಕಷ್ಟು ಸಾಧನೆ ಾಡಿದ ಮೇಲೆ ಎಡರಂಗ ಕೈಗಾರಿಕೀಕರಣದತ್ತ ುನ ಕೇಂದ್ರೀಕರಿಸಿದೆ-ಇದರಲ್ಲಿ ಹೊಸದೇನಿಲ್ಲ, ದ್ಯೋಗಾವಕಾಶ ನಿರ್ಮಾಣಕ್ಕೆ ಇದು ಅಗತ್ಯ' ದು ಇನ್ನೊಂದು ಪ್ರಶ್ನೆಗೆ ಉತ್ತರಿಸುತ್ತ ಅವರು ಳಿದರು.

ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಖಾಸಗಿ ಡವಾಳಕ್ಕೆ ನಿರ್ದಿಷ್ಟ ಪಾತ್ರವಿದೆ. ನಾವು ಡವಾಳಶಾಹಿಯ ಅಡಿಯಲ್ಲಿ ಕೆಲಸ ಾಡಬೇಕಾಗಿದೆ. ಪಶ್ಚಿಮ ಬಂಗಾಳ ಒಂದು ಪ್ರತ್ಯೇಕ ಾತಂತ್ರವಲ್ಲ. ಸಿಪಿಐ(ಎಂ) ಮತ್ತು ಜತೆಗಾರರು ಧಿಕಾರದಲ್ಲಿರುವುದು ಮೂರು ರಾಜ್ಯಗಳಲ್ಲಿ ಾತ್ರ. ಎಡರಂಗದ ರಾಜಕೀಯ ಅಜೆಂಡಾ ಮಾಜವಾದದತ್ತ ಸಾಗುವುದಾಗಿದ್ದರೂ ನಮಗೆ ಿತಿಗಳಿವೆ- ನಾವು ಒಂದು ಒಕ್ಕೂಟ ರಚನೆಯ ಗ. ಹೇಗೆ ತಾನೇ ಇಲ್ಲಿ ಮಾತ್ರ ಮಾಜವಾದವನ್ನು ಆಚರಣೆಗೆ ತರಲು ಸಾಧ್ಯ? ನ್ನುತ್ತಾ ಸಮಾಜವಾದವನ್ನು ತರುವುದು ಒಂದು ೀರ್ಘಕಾಲ ಹಿಡಿಸುವ ಪ್ರಕ್ರಿಯೆ,ಅದು ುವವರೆಗೆ ಕಾಯಿರಿ ಎನ್ನಲು ಾಧ್ಯವಿಲ್ಲ ಎಂದರು. ಂಡವಾಳಶಾಹಿ ವಸ್ಥೆಯಲ್ಲಿ ಜನಗಳಿಗೆ ಕನಿಷ್ಠ ರಿಹಾರಗಳನ್ನು ಒದಗಿಸಲು ಾವು ಬಂಡವಾಳವನ್ನು ್ವೀಕರಿಸಬೇಕು. ಆದರೆ ಅದೇ ೇಳೆಗೆ ಸತತವಾಗಿ ಜನಗಳಿಗೆ ನ್ಮ ಕಾರ್ಯಕ್ರಮದ ಬಗ್ಗೆ, ುರಿಯ ಬಗ್ಗೆ ತಿಳಿಸುತ್ತಲೂ ಇರಬೇಕು ಎಂದು ಅವರು ವರಿಸಿದರು.


ಸಮಾಜವಾದವನ್ನು ತರುವುದು ಒಂದು ದೀರ್ಘಕಾಲ ಹಿಡಿಸುವ ಪ್ರಕ್ರಿಯೆ,ಅದು ಬರುವವರೆಗೆ ಕಾಯಿರಿ ಎನ್ನಲು ಸಾಧ್ಯವಿಲ್ಲ ಎಂದರು. ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಜನಗಳಿಗೆ ಕನಿಷ್ಠ ಪರಿಹಾರಗಳನ್ನು ಒದಗಿಸಲು ನಾವು ಬಂಡವಾಳವನ್ನು ಸ್ವೀಕರಿಸಬೇಕು. ಆದರೆ ಅದೇ ವೇಳೆಗೆ ಸತತವಾಗಿ ಜನಗಳಿಗೆ ನಮ್ಮ ಕಾರ್ಯಕ್ರಮದ ಬಗ್ಗೆ, ಗುರಿಯ ಬಗ್ಗೆ ತಿಳಿಸುತ್ತಲೂ ಇರಬೇಕು

ಭಾರತದಲ್ಲಿ ಂಡವಾಳವಾಳಶಾಹಿ ಪಥದ ರಿಣಾಮಗಳ ಬಗ್ಗೆ ಕೇಳಿದ ಮತ್ತೊಂದು ಪ್ರಶ್ನೆಗೆ ಉತ್ತರಿಸುತ್ತಾ ಜ್ಯೋತಿ ಸುರವರು 'ಬಂಡವಾಳಶಾಹಿ ರಾಷ್ಟ್ರೀಯ ಟ್ಟದಲ್ಲಿ ನಿರುದ್ಯೋಗವನ್ನು ಹೆಚ್ಚಿಸಿದೆ. ಅದು ಹಜವೇ. ಆದ್ದರಿಂದಲೇ ಜನಗಳಲ್ಲಿ ಈ ಬಗ್ಗೆ ಾಗೃತಿ ಮೂಡಿಸುವುದು, ಅವರ ಪ್ರಜ್ಞೆಯನ್ನು ತ್ತರಿಸುವುದು ಮುಖ್ಯವಾಗುತ್ತದೆ.... ಪಶ್ಚಿಮ ಂಗಾಳದಲ್ಲಿ ಇದನ್ನು ನಾವು ಯಶಸ್ವಿಯಾಗಿ ಮಾಡಿದ್ದೇವೆ' ಎಂದರು.

'ಜಾಣ'ತನದ ಪ್ರದರ್ಶನ

ಈ ಮಾತುಗಳಲ್ಲಿ ಜ್ಯೋತಿ ಬಸುರವರಾಗಲೀ, ಸಿಪಿಐ(ಎಂ) ಆಗಲೀ ನಿಲುವು ಬದಲಿಸಿದ ಸಂಗತಿಗಳೇನಿವೆ? 'ಇತ್ತೀಚೆಗೆ' ಬಂಡವಾಳಶಾಹಿ ಧೋರಣೆ ಇಲ್ಲದಿದ್ದರೆ ಯಾವ ಪ್ರಗತಿಯೂ ಸಾಧ್ಯವಿಲ್ಲ ಎಂದು ಘೋಷಿಸಿದ ಕಮ್ಯುನಿಸ್ಟ್ ನಾಯಕ ಈ ಜ್ಯೋತಿಬಸು ಎಂದು ಗೌರಿಯವರ 'ಲಂಕೇಶ್ ಪತ್ರಿಕೆ' ಟಿಪ್ಪಣಿ ಮಾಡಿದೆ. ಮುಂದುವರೆದು 'ಅಷ್ಟೇ ಅಲ್ಲ, ನಂದಿಗ್ರಾಮದಂತಹ ನರಹತ್ಯೆಯನ್ನು ಸಮರ್ಥಿಸಿಕೊಂಡು ಪಶ್ಚಿಮ ಬಂಗಾಳದ ಎಡರಂಗವನ್ನು ಬಲದಿಕ್ಕಿನಲ್ಲಿ ಮುನ್ನಡೆಸಿದ ವ್ಯಕ್ತಿ ಈತ' ಎನ್ನಲಾಗಿದೆ. ನಂದಿಗ್ರಾಮದಲ್ಲಿ ಕೊನೆಗೂ ಶಾಂತಿ ಮರಳುತ್ತಿದ್ದು ಕಳೆದ ಒಂದು ವರ್ಷದ ಹಿಂಸಾಚಾರ ನಡೆಸಿದವರು ಯಾರು ಎಂದು ಬೆಳಕಿಗೆ ಬರುತ್ತಿರುವಾಗ ಈ ಟಿಪ್ಪಣಿಯಲ್ಲಿನ ಟೊಳ್ಳುತನ ಸ್ವಯಂವೇದ್ಯ.

ಇನ್ನೊಂದು ಪತ್ರಿಕೆ ಜ್ಯೋತಿ ಬಸುರವರ ಹೇಳಿಕೆಯನ್ನು 'ಬಂಡವಾಳಶಾಹಿಗೆ ತಡೆಯಿಲ್ಲ' ಎಂಬ ಶಿರೋನಾಮೆ ಕೊಟ್ಟು, ಜತೆಗೆ ಪ್ರಕಾಶ ಕಾರಟ್‌ರವರ ಬೇರೊಂದು ಸಂದರ್ಭದ ಹೇಳಿಕೆಯನ್ನು 'ಬಂಡವಾಳಕ್ಕೆ ಕಡಿವಾಣ'ಎಂಬ ಶಿರೋನಾಮೆಯಡಿಯಲ್ಲಿ ಕೊಟ್ಟು ಮತ್ತೊಂದು



ರೀತಿಯಲ್ಲಿ ತನ್ನ ಜಾಣತನ ಮೆರೆಯಲು ಯತ್ನಿಸಿದೆ. ಜ್ಯೋತಿ ಬಸುರವರ ಹೇಳಿಕೆಗೆ ತನ್ನದೇ ಬಣ್ಣ ಹಚ್ಚಿ ತನಗೆ ಅನುಕೂಲ(!)ವಾಗುವಂತೆ ಪ್ರಕಟಿಸಿದೆ ಎಂದು ಬೇರೆ ಹೇಳಬೇಕಾಗಿಲ್ಲ. ಈ ಸಂದರ್ಭದಲ್ಲಿಯೇ ಜ್ಯೋತಿ ಬಸುರವರು ಬಂಡವಾಳಶಾಹಿಯು ಸ್ವರೂಪದ ಬಗ್ಗೆ ಜನಗಳ ಪ್ರಜ್ಞೆಯನ್ನು ಎತ್ತರಿಸುವ ಅಗತ್ಯವನ್ನು, ಅದನ್ನು ಪಶ್ಚಿಮ ಬಂಗಾಳದಲ್ಲಿ ಮಾಡಲು ಸಾಧ್ಯವಾಗಿದೆ ಎಂದು ಹೇಳಿದ್ದನ್ನು ಮಾತ್ರ ಈ ಪತ್ರಿಕೆ ಗಮನಿಸಿದಂತಿಲ್ಲ, ಅಷ್ಟೇ ಅಲ್ಲ, ಸ್ವತಃ ಪ್ರಕಾಶ್ ಕಾರಟ್ ರವರು ಜ್ಯೋತಿ ಬಸುರವರ ಟಿಪ್ಪಣಿಗಳು ಪಕ್ಷದ ಕಾಯಕ್ರಮವನ್ನು ಆಧರಿಸಿವೆ ಎಂದು ಮರುದಿನವೇ ಅಂದರೆ ಜನವರಿ 7ರಂದು ನೀಡಿದ ವಿವರವಾದ ಹೇಳಿಕೆಯನ್ನು ಕೂಡಾ ಈ ಪತ್ರಿಕೆಯ ಸಂಪಾದಕರು ಗಮನಿಸಿದಂತಿಲ್ಲ.

'ಜ್ಯೋತಿ ಬಸುರವರು ಪಶ್ಚಿಮ ಬಂಗಾಳದಲ್ಲಿ ಆರ್ಥಿಕ ಬೆಳವಣಿಗೆಯನ್ನು ಮತ್ತು ಎಡರಂಗ ಸರಕಾರದ ಪಾತ್ರವನ್ನು ಸಿಪಿಐ(ಎಂ) ಕಾರ್ಯಕ್ರಮದ ಕಣ್ನೋಟದಲ್ಲಿ ವಿವರಿಸಿದ್ದಾರೆ. ಪಕ್ಷದ ಕಾರ್ಯಕ್ರಮದ ಬಗ್ಗೆ ಅಜ್ಞಾನವಿರುವವರು ಮಾತ್ರವೇ ಪಕ್ಷ ಸಮಾಜವಾದಕ್ಕೆ ವಿದಾಯ ಹೇಳಿದೆ ಮತ್ತು ಬಂಡವಾಳಶಾಹಿಯನ್ನು ಸ್ವಾಗತಿಸುತ್ತಿದೆ ಎನ್ನಲು ಸಾಧ್ಯ' ಎಂದು ಅವರು ಸ್ಪಷ್ಟಪಡಿಸಿದ್ದಾರೆ.

ಸಿಪಿಐ(ಎಂ) ಕಣ್ನೋಟ

ಮುಂದುವರೆದು ಅವರು ಈ ಹೇಳಿಕೆಯಲ್ಲಿ ಇಂತಹ ಟಿಪ್ಪಣಿಕಾರರ ಅವಗಾಹನೆಗಾಗಿ ಸಿಪಿಐ(ಎಂ) ಈ ಬಗ್ಗೆ ತನ್ನ ಕಾರ್ಯಕ್ರಮದಲ್ಲಿ ಬಹಳ ಹಿಂದೆಯೇ ಏನು ಹೇಳಿದೆ ಎಂಬುದನ್ನು ಹೀಗೆ ಪಟ್ಟಿ ಮಾಡಿದ್ದಾರೆ:

ಸಿಪಿಐ(ಎಂ) ಸಮಾಜವಾದಕ್ಕೆ ವಿದಾಯ ಹೇಳಿದೆ, ಬಂಡವಾಳಶಾಹಿಯನ್ನು ಸ್ವಾಗತಿಸುತ್ತಿದೆ ಎಂದು ಮತ್ತೊಮ್ಮೆ ದೇಶದ ಕಾರ್ಪೋರೇಟ್ ಮಾಧ್ಯಮಗಳು ಗುಲ್ಲೆಬ್ಬಿಸಿವೆ, ಇದು ಜನಪರ, ಎಡಶಕ್ತಿಗಳ ಬಗ್ಗೆ ಗೊಂದಲ ಹುಟ್ಟಿಸುವ ಇನ್ನೊಂದು ಪ್ರಯತ್ನವಷ್ಟೆ.

1. ತನ್ನ ಕಾರ್ಯಕ್ರಮ ಹಾಕಿಕೊಟ್ಟ ದಿಕ್ಕನ್ನು ಗಮನದಲ್ಲಿಟ್ಟುಕೊಂಡು, ಸಂವಿಧಾನದ ಅಡಿಯಲ್ಲಿ ಸೀಮಿತ ಅಧಿಕಾರಗಳು ಮಾತ್ರ ಇವೆ ಎಂಬ ಪೂರ್ಣ ಅರಿವಿನೊಂದಿಗೆ ಸಿಪಿಐ(ಎಂ) ರಾಜ್ಯ ಸರಕಾರಗಳಲ್ಲಿ ಭಾಗವಹಿಸುತ್ತದೆ. ಈ ಸೀಮಿತ ಅಧಿಕಾರಗಳನ್ನೇ ಬಳಸಿ ಎಡ ನೇತೃತ್ವದ ಸರಕಾರಗಳು ದುಡಿಯುವ ಜನರ ಹಿತಾಸಕ್ತಿಗಳನ್ನು ರಕ್ಷಿಸಲು ಕೆಲಸ ಮಾಡುತ್ತವೆ, ಅಧಿಕಾರವಿರುವ ಸೀಮಿತ ವಲಯಗಳಲ್ಲಿ ಸಾಧ್ಯವಿರುವ ಕಲ್ಯಾಣ ಕ್ರಮಗಳನ್ನು ಆರಂಭಿಸುತ್ತವೆ, ಬಂಡವಾಳಶಾಹಿ ಪಕ್ಷಗಳು ನಡೆಸುವ ಸರಕಾರಗಳಿಗಿಂತ ಭಿನ್ನವಾದ ರೀತಿಯಲ್ಲಿ ಧೋರಣೆಗಳನ್ನು ರೂಪಿಸುತ್ತವೆ. ತಾವು ಅಧಿಕಾರದಲ್ಲಿರುವ ರಾಜ್ಯಗಳಲ್ಲಿ ಸಮಾಜವಾದ ಕಟ್ಟಲು ಸಾಧ್ಯವಿಲ್ಲ, ಆದರೆ ಬಂಡವಾಳಶಾಹಿ ವ್ಯವಸ್ಥೆಯೊಳಗೇ ಕೆಲವು ಪರ್ಯಾಯ ನೀತಿಗಳನ್ನು ಅನುಸರಿಸಲು ಮಾತ್ರ ಸಾಧ್ಯ ಎಂಬ ಪೂರ್ಣ ಅರಿವು ಸಿಪಿಐ(ಎಂ)ಗಿದೆ.

2. ಪಶ್ಚಿಮ ಬಂಗಾಳದಲ್ಲಿ ಎಡರಂಗ ಮೂವತ್ತು ವರ್ಷಗಳಿಂದ ಅಧಿಕಾರದಲ್ಲಿದ್ದರೂ ಅಲ್ಲಿಯೂ ಭಾರತದ ಇತರೆಡೆಗಳಂತೆ ಬಂಡವಾಳಶಾಹಿ ಬೆಳವಣಿಗೆಯೇ ನಡೆದಿರುವುದು. ಅಲ್ಲಿಯ ರಾಜ್ಯ ಸರಕಾರ ಮಾಡಬಹುದಾದದ್ದೆಂದರೆ ಎಡ ಮತ್ತು ಪ್ರಜಾಪ್ರಭುತ್ವವಾದಿ ಪಕ್ಷಗಳು ಅಖಿಲ ಭಾರತ ಮಟ್ಟದಲ್ಲಿ ಪ್ರತಿಪಾದಿಸುತ್ತಿರುವ ಪರ್ಯಾಯ ಧೋರಣೆಗಳಿಗಾಗಿ ಹೋರಾಟವನ್ನು ಬಲಗೊಳಿಸುವುದು.

3. ಸಿಪಿಐ(ಎಂ)ನ ತಕ್ಷಣದ ಗುರಿ ಒಂದು ಜನತಾ ಪ್ರಜಾಪ್ರಭುತ್ವವನ್ನು ಸ್ಥಾಪಿಸುವುದು; ಇದು ಅಂತಿಮವಾಗಿ ಸಮಾಜವಾದದತ್ತ ಒಂದು ಹೆಜ್ಜೆ. ಇದನ್ನು, ಜ್ಯೋತಿ ಬಸುರವರು ಹೇಳಿದಂತೆ ಮೂರು ಎಡರಂಗ ಸರಕಾರಗಳಿಂದ ಮಾಡಲು ಸಾಧ್ಯವಿಲ್ಲ. ಎಡ ಮತ್ತು ಪ್ರಜಾಪ್ರಭುತ್ವವಾದಿ ಶಕ್ತಿಗಳು ರಾಷ್ಟ್ರೀಯ ಮಟ್ಟದಲ್ಲಿ ಸಾಕಷ್ಟು ಬಲಗೂಡಿಸಿಕೊಂಡ ನಂತರ ಮಾತ್ರವೇ ಸಮಾಜವಾದದತ್ತ ಮುನ್ನಡೆ ಸಾಧ್ಯವಾಗುತ್ತದೆ.

4. ಅದುವರೆಗೆ, ಪಶ್ಚಿಮ ಬಂಗಾಳ, ಕೇರಳ, ತ್ರಿಪುರಾದಲ್ಲಿನ ಎಡ ನೇತೃತ್ವದ ಸರಕಾರಗಳು ಕಾರ್ಮಿಕರು, ರೈತರು ಮತ್ತು ಇತರ ದುಡಿಯುವ ಜನವಿಭಾಗಗಳಿಗೆ ಪ್ರಯೋಜನಕಾರಿಯಾದ ಧೋರಣೆಗಳನ್ನು ಜ್ಯಾರಿಗೆ ತರಬಹುದು. ಒಂದು ಬಂಡವಾಳಶಾಹಿ ವ್ಯವಸ್ಥೆಯೊಳಗೆ, ಕೇಂದ್ರ ಸರಕಾರ ನವ-ಉದಾರವಾದಿ ನೀತಿಗಳನ್ನು ಹೇರುತ್ತಿರುವ ಸನ್ನಿವೇಶದಲ್ಲಿ ಎಡನೇತೃತ್ವದ ರಾಜ್ಯ ಸರಕಾರಗಳು ಕಾರ್ಮಿಕರ ಮತ್ತು ಬಡ ವಿಭಾಗಗಳ ಹಿತಾಸಕ್ತಿಗಳನ್ನು ರಕ್ಷಿಸುವ ರೀತಿಯಲ್ಲಿ ಕೈಗಾರಿಕೀಕರಣ ಕೈಗೊಳ್ಳಬೇಕಾಗುತ್ತದೆ.

ಸರಳೀಕರಣ ಬೇಡ

ಸಿಪಿಐ(ಎಂ) ಮತ್ತು ಎಡಪಕ್ಷಗಳು ಸಮಾಜವಾದಕ್ಕೆ ವಿದಾಯ ಹೇಳಿವೆ ಎಂಬ ಈ ಪತ್ರಿಕೆಗಳಿಗೆ, ಅಥವಾ ಅದರ ಸಂಪಾದಕರುಗಳಿಗೆ ಇದರಿಂದ ನಿಜವಾಗಿಯೂ ಆತಂಕವಾಗಿದ್ದರೆ ಅವರೂ ಜ್ಯೋತಿ ಬಸುರವರ ಈ ಹೇಳಿಕೆಯ ಬಗ್ಗೆ ಕಾಂಗ್ರೆಸ್ ಮತ್ತು ಬಿಜೆಪಿಯೊಂದಿಗೆ ಮತ್ತು ಅಖಿಲ ಭಾರತ ಮಟ್ಟದ ಕಾರ್ಪೋರೇಟ್ ಮಾಧ್ಯಮಗಳ ಜತೆಗೆ ಅವರ ಗೊಂದಲ ಹುಟ್ಟಿಸುವ ಪ್ರಯತ್ನಗಳಲ್ಲಿ ಕೈಜೋಡಿಬೇಕಾಗಿರಲಿಲ್ಲ. ಇಲ್ಲಿ ಸಮಾಜವಾದವೋ ಬಂಡವಾಳವಾದವೋ ಎಂಬ ಸರಳೀಕರಣದಿಂದ ಒಂದು ಗಂಭೀರ ವಸ್ತುನಿಷ್ಠ ಚಿಂತನೆಯಂತೂ ಸಾಧವಿಲ್ಲ, ಇರಲಿ, ಇನ್ನು ಕಾಂಗ್ರೆಸ್ ಮತ್ತು ಬಿಜೆಪಿಯ ಪ್ರತಿಕ್ರಿಯೆಗಳಂತೂ ಹಾಸ್ಯಾಸ್ಪದ ಎನ್ನಿಸದಿರದು. ಅವರಿಗಂತೂ ಇಂತಹ ಸರಳೀಕರಣಗಳು ಅಗತ್ಯ. ಏಕೆಂದರೆ ಅವರಿಗೆ ಸಮಾಜವಾದವೆನ್ನುವುದು ಕೇವಲ ಘೋಷಣೆ, ಅದರ ಮರೆಯಲ್ಲಿ ದೊಡ್ಡ ಬಂಡವಾಳಶಾಹಿಗಳ ಮತ್ತು ವಿದೇಶಿ ಹಣಕಾಸು ಬಂಡವಾಳದ ಹಿತಾಸಕ್ತಿಗಳನ್ನು ಈಡೇರಿಸ ಬಹುದೆಂಬುದು ಅವರ ಕಾರ್ಯತಂತ್ರ. ಇನ್ನೊಂದೆಡೆ ಆರ್.ಎಸ್.ಪಿ. ಯು ಸಮಾಜವಾದ ತನ್ನ ತಕ್ಷಣದ ಗುರಿ ಎಂದು ಘೋಷಿಸಿರುವ ಪಕ್ಷ ಎಂಬುದನ್ನು ಗಮನಿಸಬೇಕು. ಆದರೆ ಅದು ಕೂಡ ಈ ಮೂವತ್ತು ವರ್ಷಗಳಲ್ಲಿ ಸಿಪಿಐ(ಎಂ)ನ ಕಾರ್ಯಕ್ರಮದ ಅರಿವಿದ್ದೇ ಈ ಸರಕಾರಗಳಲ್ಲಿ ಭಾಗವಹಿಸಿ ಬಂಡವಾಳಶಾಹಿ ವ್ಯವಸ್ಥೆಯೊಳಗೆ ಕೆಲವು ಸುಧಾರಣೆಗಳನ್ನು, ಕಲ್ಯಾಣ ಕ್ರಮಗಳನ್ನು ಜ್ಯಾರಿಗೆ ತರುವಲ್ಲಿ ಕೈಜೋಡಿಸಿದ್ದೇಕೆ ಎಂಬ ಪ್ರಶ್ನೆ ಏಳುತ್ತದೆ.

ಪ್ರಕಾಶ್ ಕಾರಟ್‌ರವರು ಹೇಳಿರುವಂತೆ ಪಶ್ಚಿಮ ಬಂಗಾಳ, ಕೇರಳ ಮತ್ತು ತ್ರಿಪುರಾದ ಎಡನೇತೃತ್ವದ ಸರಕಾರಗಳ ದಾಖಲೆ ಸಿಪಿಐ(ಎಂ) ಪ್ರತಿಪಾದಿಸುತ್ತಿರುವ ಈ ಎಡ ಮತ್ತು ಪ್ರಜಾಸತ್ತಾತ್ಮಕ ಪರ್ಯಾಯಕ್ಕೆ ಮತ್ತು ಅಖಿಲ ಭಾರತ ಬಂಡವಾಳಶಾಹಿ ಅಭಿವೃದ್ಧಿಯ ಮಾದರಿಯ ಚೌಕಟ್ಟಿನೊಳಗೆ ಸ್ವಲ್ಪ ಮಟ್ಟಿನ ಸಾಮಾಜಿಕ ನ್ಯಾಯ ಒದಗಿಸುವ ಹೋರಾಟಕ್ಕೆ ಜನಗಳ ನಡುವೆ ಹೆಚ್ಚೆಚ್ಚು ಬೆಂಬಲ ದೊರೆಯುತ್ತಿದೆ ಎಂಬುದಕ್ಕೆ ಸಾಕ್ಷಿ ಎಂಬ ವಾಸ್ತವವನ್ನು ಇಂತಹ ಗೊಂದಲಗಳಿಂದ ಮರೆಮಾಚಲು ಸಾಧ್ಯವಿಲ್ಲ, ಅದು ಅಜ್ಞಾನದ, ಅಪ್ರಾಮಾಣಿಕತೆಯ ಪ್ರದರ್ಶನವಷ್ಟೇ ಆದೀತು. ○

ಕರ್ನಾಟಕ ರಾಜ್ಯದಲ್ಲಿ ಕಾಂಗ್ರೆಸ್ಸಿಗೆ ಬಿಜೆಪಿ ಪಕ್ಷ ನಿಜಕ್ಕೂ ಒಂದು ಪರ್ಯಾಯವೇ? ಜನಪರ ಚಳುವಳಿಯ ಮುಂದಿನ ಜವಾಬ್ದಾರಿ ಏನು?

ಕರ್ನಾಟಕದಲ್ಲಿ ಕಾಂಗ್ರೆಸಿಗೆ ಬಿಜೆಪಿ ಪರ್ಯಾಯವೇ?

ನಿತ್ಯಾನಂದಸ್ವಾಮಿ

ರಾಜ್ಯವು ಚುನಾವಣೆಯನ್ನು ಎದುರು ನೋಡುತ್ತಿದೆ. ಕೇಂದ್ರದ ಪ್ರತಿನಿಧಿಯಾಗಿರುವ ರಾಜ್ಯಪಾಲರ ಆಡಳಿತ ಮುಂದುವರಿಕೆ ಆತಂಕಕ್ಕೆ ಕಾರಣವಾಗುತ್ತಿದೆ. ಗುಜರಾತ್ ಮತ್ತು ಹಿಮಾಚಲಯ ಪ್ರದೇಶ ರಾಜ್ಯಗಳ ವಿಧಾನಸಭಾ ಚುನಾವಣೆಗಳಲ್ಲಿ ಗೆಲ್ಲಲಾಗದಿರುವುದು ಕೇಂದ್ರದಲ್ಲಿ ಅಧಿಕಾರ ನಡೆಸುತ್ತಿರುವ ಕಾಂಗ್ರೆಸ್ ಪಕ್ಷಕ್ಕೆ ಕರ್ನಾಟಕದಲ್ಲಿ ಚುನಾವಣೆಯನ್ನು ಎದುರಿಸುವ ಧೈರ್ಯ ಇಲ್ಲದಂತಾಗಿದೆ. ಕೆಲ ಕಾಲ ರಾಜ್ಯದಲ್ಲಿ ರಾಷ್ಟ್ರಪತಿ ಆಳ್ವಿಕೆಯನ್ನೇ ಮುಂದುವರೆಸಿ, ರಾಜ್ಯಪಾಲರ ಆಡಳಿತದ ಮೂಲಕ ಕೆಲವಾರು ಪಾಪುಲರ್ ಕಾರ್ಯಕ್ರಮಗಳನ್ನು ಜಾರಿಗೆ ತಂದು, ತನಗೆ ಅನುಕೂಲವಾಗುವ ಪರಿಸ್ಥಿತಿಯನ್ನು ನಿರ್ಮಾಣ ಮಾಡಲು ಕಾಂಗ್ರೆಸ್ ಪಕ್ಷ ಲೆಕ್ಕಹಾಕುತ್ತಿದೆ. ರಾಷ್ಟ್ರಪತಿ ಆಡಳಿತವನ್ನು ಮುಂದುವರೆಸುವಂತೆ ಸಲಹೆ ನೀಡಲು ಕಾಂಗ್ರೆಸ್ ನೆಪವೊಂದನ್ನು ಹುಡುಕುತ್ತಿದ್ದಂತೆ ಕಾಣುತ್ತಿದೆ.

ಇತ್ತ ಬಿಜೆಪಿ ವಿಧಾನಸಭಾ ವಿಸರ್ಜನೆಯಾದ ದಿನದಿಂದಲೇ ಕೂಡಲೇ ಚುನಾವಣೆ ನಡೆಸಬೇಕೆಂದು ಆಗ್ರಹಿಸಿಲಾರಂಭಿಸಿತ್ತು. ಯಡಿಯೂರಪ್ಪ ಸರ್ಕಾರಕ್ಕೆ ಜೆಡಿ(ಎಸ್) ಬೆಂಬಲ ನೀಡಲು ನಿರಾಕರಿಸುವುದರೊಂದಿಗೆ ಬಿಜೆಪಿಗೆ ಲಭಿಸಿದ 'ಹುತಾತ್ಮ ಪಟ್ಟ' ದ ಲಾಭ ಪಡೆಯಲು ತಕ್ಷಣವೇ ಚುನಾವಣೆ ನಡೆಯಬೇಕೆಂಬುದು ಅದರ ಲೆಕ್ಕಾಚಾರ. ಚುನಾವಣಾ ಆಯೋಗದಲ್ಲಿರುವ ಬಿಜೆಪಿ ಹಿತೈಷಿಗಳನ್ನು ಬಳಸಿಕೊಂಡು ಚುನಾವಣೆಯನ್ನು ಮೇ ತಿಂಗಳ ಒಳಗಾಗಿಯೇ ನಡೆಸಲು ಅದು ನಡೆಸಿದ ಪ್ರಯತ್ನ ಫಲಕಾರಿಯಾದಂತೆ ಕಾಣುವುದಿಲ್ಲ. ಬಿಜೆಪಿ ಪಕ್ಷದೊಳಗಿನ ಆಂತರಿಕ ಕಿತ್ತಾಟವೂ ಶೀಘ್ರ ಚುನಾವಣೆಗೆ ಒತ್ತಾಯಿಸುವ ಅದರ ಧ್ವನಿಯನ್ನು ಕ್ಷೀಣಿಸಿದೆ. ಈಗ ಅದು ರಾಜ್ಯಪಾಲರ ಆಡಳಿತದಲ್ಲಿ ಅಭಿವೃದ್ಧಿ ಕಾರ್ಯಕ್ಕೆ ಹಿನ್ನಡೆ ಉಂಟಾಗಿದೆ ಎಂದು ಆರೋಪಿಸಿ ರಾಜ್ಯಾದ್ಯಂತ ಪ್ರತಿಭಟನೆ ನಡೆಸಲು ಮುಂದಾಗಿದೆ.

ಜೆಡಿ(ಎಸ್) ಅಧ್ಯಕ್ಷರಾದ ದೇವೇಗೌಡರು ಸಹ ರಾಜ್ಯಪಾಲರನ್ನು ಭೇಟಿಯಾಗಿ ಚುನಾವಣೆಯನ್ನು ಮುಂದೂಡದಂತೆ ಮನವಿ ಮಾಡಿದ್ದಾರೆ. ಆದರೆ ದೇವೇಗೌಡರನ್ನು ಈ ವಿಷಯದಲ್ಲಿಯೂ ಯಾರೂ ನಂಬುವ ಪರಿಸ್ಥಿತಿ ಇಲ್ಲ. ಜೆಡಿ(ಎಸ್) ಈಗ ಒಡೆದ ಮನೆಯಾಗಿದ್ದು ಅದನ್ನು ಸರಿಪಡಿಸಲು ದೇವೇಗೌಡರಿಗೂ ಸಾಕಷ್ಟು ಸಮಯಬೇಕು. ಮಗ ಕುಮಾರಸ್ವಾಮಿ ಹಠಾತ್ತನೆ ಹೃದಯ ಶಸ್ತ್ರ ಚಿಕಿತ್ಸೆಗೆ ಒಳಗಾಗುವಂತಾದದ್ದು ಜೆಡಿ(ಎಸ್)ಗೆ ದೊಡ್ಡ ಆಘಾತವನ್ನು ಉಂಟು ಮಾಡಿದೆ. ಕುಮಾರಸ್ವಾಮಿ ಅವರ ಚೇತರಿಕೆಗೆ ಹಾಗೂ ಪಕ್ಷದ ಚೇತರಿಕೆಗೆ ಒಟ್ಟಾರೆಯಾಗಿ ಸಮಯಬೇಕು.

ಜನರಿಗೆ ಚುನಾವಣೆ ಬೇಕು

ಕಾಂಗ್ರೆಸ್, ಬಿಜೆಪಿ, ಜೆಡಿ(ಎಸ್) ಈ ಮೂರು ಪಕ್ಷಗಳಿಗೆ, ಅವುಗಳ ಚುನಾಯಿತ ಶಾಸಕರಿಗೆ ಈ ಚುನಾವಣೆ ಬೇಕಾಗಿರಲಿಲ್ಲ. 'ಮಧ್ಯಂತರ ಚುನಾವಣೆ ಜನತೆಯ ಮೇಲೆ ಹೊರೆ' ಎಂದು ಈ ಪಕ್ಷಗಳ ವಕ್ತಾರರು ಕಳವಳ ವ್ಯಕ್ತಪಡಿಸುತ್ತಿದ್ದಾರೆ. ಆದರೆ ಇವರಿಗೆ ಜನರ ಬಗ್ಗೆ ಇಷ್ಟೊಂದು ಕಾಳಜಿ ಹೇಗೆ ಆರಂಭವಾಯಿತು ಎಂದು ಜನಸಾಮಾನ್ಯರು ಪ್ರಶ್ನಿಸತೊಡಗಿದ್ದಾರೆ. ಚುನಾವಣೆಯು ಎಲ್ಲ ಖರ್ಚು ವೆಚ್ಚಗಳನ್ನು ಸರ್ಕಾರವೇ ನಿಭಾಯಿಸುವಂತಾಗ ಬೇಕೆಂದು ನಮ್ಮ ಚುನಾವಣೆ ಪದ್ಧತಿಗೆ ತಿದ್ದುಪಡಿಗಳನ್ನು ಒತ್ತಾಯಿಸಲಾಗುತ್ತಿರುವಾಗ ಚುನಾವಣೆಯಿಂದ ಜನರ ಮೇಲೆ ಹೊರೆ ಬೀಳುತ್ತದೆ ಎನ್ನುವ ಇವರ ವಾದದಲ್ಲಿ ಹುರುಳೆಲ್ಲಿದೆ?

ರಾಜ್ಯದ ಪ್ರಮುಖ ರಾಜಕೀಯ ಪಕ್ಷಗಳಿಗೆ ಈ ಚುನಾವಣೆ ಬೇಡವಾಗಿರುವುದಕ್ಕೆ ಬೇರೆ ಕಾರಣಗಳಿವೆ. ಕಳೆದ ಮೂರು ವರ್ಷಗಳಲ್ಲಿ ರಾಜ್ಯದಲ್ಲಿ 3 ಮೈತ್ರಿ ಸರ್ಕಾರಗಳು ಪತನಗೊಂಡಿವೆ. ಈ ಸರ್ಕಾರಗಳ ದುರ್ಮರಣದಿಂದ, ಜನತೆಗೆ ದುಃಖವಾಗಿರಲಿಲ್ಲ. ಆದರೆ ಈ ಸರ್ಕಾರಗಳು ಜೀವಂತ ಇದ್ದಾಗ ನಡೆಸಿದ ಡೊಂಬರಾಟದಿಂದ ಜನತೆಯಲ್ಲಿ ಇವರ ಬಗ್ಗೆ ಜಿಗುಪ್ಸೆ ಉಂಟಾಗಿತ್ತು. ಈ ಪಕ್ಷಗಳ ಅಧಿಕಾರದಾಹ, ಸಮಯಸಾಧಕತನ, ಭ್ರಷ್ಟಾಚಾರದಿಂದ ರೋಸಿಹೋದ ಜನತೆ, ವಿಧಾನಸಭೆ ವಿಸರ್ಜನೆಯಾದಾಗ, ಮರುಗಲಿಲ್ಲ. ಮಧ್ಯಂತರ ಚುನಾವಣೆ ಹೇರಲ್ಪಟ್ಟಿರುವುದನ್ನು ವಿರೋಧಿಸಲಿಲ್ಲ. ಈ ಹಿಂದೆ ಮೂರು ಬಾರಿ ಆದಂತೆ ಇನ್ನೊಂದು 'ಅಕ್ರಮ ಕೂಟ' ದ ಸರ್ಕಾರ ಅಸ್ತಿತ್ವಕ್ಕೆ ಬರುವ ಬದಲಾಗಿ ಇನ್ನೊಮ್ಮೆ ಚುನಾವಣೆ ನಡೆದು ಹೊಸ ಜನಾದೇಶ ಪಡೆಯಲಿ ಎಂಬುದೇ ಜನರ ಅಭಿಪ್ರಾಯವಾಯಿತು.

ಆದರೆ ಆಳುವ ವರ್ಗಗಳ ರಾಜಕೀಯ ಪಕ್ಷಗಳ ಶಾಸಕರ ಮೇಲೆ ಈ ಚುನಾವಣೆ ಬರಸಿಡಿಲಿನಂತೆ ಎರಗಿತ್ತು. ಅವರ್‍ಯಾರು ಚುನಾವಣೆಗೆ ಸಿದ್ಧರಿರಲಿಲ್ಲ. ಹೇಗಾದರೂ ಮಾಡಿ ತಮ್ಮ ಅವಧಿಯನ್ನು ಪೂರ್ಣಗೊಳಿಸಬೇಕೆಂಬುದು ಅವರ ಬಯಕೆಯಾಗಿತ್ತು. ಮೊದಲನೇಯ ಸಲ ಆಯ್ಕೆಯಾಗದವರಿಗೆ ಇನ್ನೊಮ್ಮೆ ಆಯ್ಕೆಯಾಗುವ ಗ್ಯಾರಂಟಿ ಇರಲಿಲ್ಲ. ಇತ್ತ ಅವಧಿ ಮುಗಿಸದೆ ಇರುವುದರಿಂದ ಶಾಸಕರ ನಿವೃತ್ತಿ ವೇತನಕ್ಕೂ ಕುತ್ತು! ಅವಧಿ ಪೂರ್ಣ ಮುಗಿಯದೆ ಇರುವುದರಿಂದ ಇನ್ನಷ್ಟು ದುಡ್ಡು ಮಾಡುವ ಅವಕಾಶದಿಂದ ವಂಚಿತರಾದೆವು ಎಂಬ ವೇದನೆ ಅವರದು. ಮತ್ತೊಮ್ಮೆ ಗೆದ್ದು ಬರುವುದಕ್ಕೂ ದುಡ್ಡುಬೇಕು. ಅಧಿಕಾರವನ್ನು ಬಳಸಿಕೊಂಡು ದುಡ್ಡು ಮಾಡುವುದು ಜನತೆಗೆ ಮಾಡುವ ಅನ್ಯಾಯ ಎಂದು ಮಾತ್ರ ಅವರು ಅರ್ಥಮಾಡಿಕೊಳ್ಳಲಾರರು. ಇಂತಹವರನ್ನು ಮನೆಗೆ ಕಳುಹಿಸಲು ರಾಜ್ಯದ




ಜನತೆಗೆ ಈಗ ಚುನಾವಣೆಬೇಕು.

ಪರ್ಯಾಯದ ಪ್ರಶ್ನೆ:

ರಾಜ್ಯದ ಮತದಾರರಿಗೆ ಈಗ ಪರೀಕ್ಷೆಯ ಕಾಲ. ಯಾರು ಹಿತವರು ಎನಗೆ....? ಎಂಬ ಪ್ರಶ್ನೆಗೆ ಉತ್ತರ ಹುಡುಕುವ ಕಾಲ. ನಮ್ಮ ಆಳುವ ವರ್ಗಗಳು, ಸ್ವಾತಂತ್ರ್ಯ ನಂತರ ಕಾಂಗ್ರೆಸ್ ಪಕ್ಷವನ್ನು ಜನತೆಯ ಮುಂದಿಡುತ್ತಾ ಬಂದಿದ್ದಾರೆ. ಈ ಅವಧಿಯಲ್ಲಿ ಅದರ ಬಣ್ಣ ಸಾಕಷ್ಟು ಬಯಲಾಗಿದೆ. ಅದಕ್ಕೆ ದೇಶದ ಹಿತಕ್ಕಿಂತಲೂ, ದೇಶದ ಜನತೆಯ ಹಿತಕ್ಕಿಂತಲೂ, ದೇಶದ ದೊಡ್ಡ ಬಂಡವಾಳಿಗರ ಹಿತವೇ ಮುಖ್ಯ ಮತ್ತು ಈ ದೊಡ್ಡ ಬಂಡವಾಳಗಾರರಿಗೆ ವಿಶ್ವ ಹಣಕಾಸು ಬಂಡವಾಳದ ಹಿತ ಕಾಯುವುದೇ ಮುಖ್ಯ. ಹೀಗಾಗಿ ಕೇಂದ್ರದಲ್ಲಿ ಅಧಿಕಾರ ನಡೆಸುತ್ತಿರುವ ಕಾಂಗ್ರೆಸ್ ವಿಶ್ವ ಹಣಕಾಸು ಬಂಡವಾಳದ ನಿರ್ದೇಶನಕ್ಕೆ ತಕ್ಕಂತೆ ಜನತೆಯ ಮೇಲೆ ಉದಾರೀಕರಣ, ಜಾಗತೀಕರಣದ ನೀತಿಗಳ ಹೊರೆಗಳನ್ನು ಹೇರುತ್ತಾ ಇದೆ. ಹೆಚ್ಚುತ್ತಿರುವ ರೈತರ ಆತ್ಮಹತ್ಯೆಗಳು, ಹೆಚ್ಚುತ್ತಿರುವ ನಿರುದ್ಯೋಗ, ಹೆಚ್ಚುತ್ತಿರುವ ಬೆಲೆಯೇರಿಕೆ ಈ ನೀತಿಗಳ ನೇರ ಪರಿಣಾಮವಾಗಿದೆ.





ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರದಲ್ಲಿದ್ದಾಗ ಇದನ್ನೇ ಮಾಡುತ್ತಾ ಬಂದಿದೆ. ರೈತರಿಗೆ ಸಾಲ ಸೌಲಭ್ಯವನ್ನು ನಿರಾಕರಿಸಿದೆ. ಬಡವರ ರೇಷನ್ ಕಿತ್ತುಕೊಂಡಿದೆ. ಕಾರ್ಮಿಕರ ವಿರುದ್ಧ ಬಂಡವಾಳಗಾರರ ಬೆಂಬಲಕ್ಕೆ ನಿಂತಿದೆ. ಜನತೆಯ ಮೇಲೆ ಬೆಲೆಯೇರಿಕೆಯ ಹೊರೆಯನ್ನು ಹೇರಿದೆ. ಹೀಗಾಗಿ ಕಾಂಗ್ರೆಸ್‌ನ್ನು ದೇಶದೆಲ್ಲೆಡೆ ಜನ ತಿರಸ್ಕರಿಸುತ್ತಿದ್ದಾರೆ. ಹಿಮಾಚಲ ಪ್ರದೇಶದಲ್ಲಿನ ಸೋಲು ಇತ್ತೀಚಿನ ಉದಾಹರಣೆ.





ಕಾಂಗ್ರೆಸ್‌ನ್ನು ಜನತೆ ಹೆಚ್ಚೆಚ್ಚು ತಿರಸ್ಕರಿಸುತ್ತಾ ಬಂದಂತೆ, ಕಾಂಗ್ರೆಸ್ಸನ್ನು ಬೆಂಬಲಿಸಿ ಪ್ರಯೋಜನವಿಲ್ಲ ಎಂದು ನಮ್ಮ ಆಳುವ ವರ್ಗಗಳಿಗೆ ಮನವರಿಕೆಯಾಗಿದೆ. ಆದ್ದರಿಂದ ಅವರು ಬಿಜೆಪಿ ಎಂಬ ತಮ್ಮ 2ನೇ ತಂಡವನ್ನು ಸ್ಪರ್ಧೆಗಿಳಿಸ ತೊಡಗಿದ್ದಾರೆ.

ಕಾಂಗ್ರೆಸ್ ಮತ್ತು ಬಿಜೆಪಿ ದೇಶದ ದೊಡ್ಡ ಬಂಡವಾಳಗಾರರೇ ಬೆಳೆಸುವ ಎರಡು ತಂಡಗಳು. ಒಂದೇ ನಾಣ್ಯದ ಎರಡು ಮುಖಗಳು. ಬಿಜೆಪಿಯ 6 ವರ್ಷಗಳ ಆಳ್ವಿಕೆಯಲ್ಲಿ ಅದು ಸಾಬೀತಾಗಿದೆ. ನರಸಿಂಹರಾವ್ ಸರ್ಕಾರದ ಆರ್ಥಿಕ ನೀತಿಗಳನ್ನೇ ವಾಜಪೇಯಿ ಸರ್ಕಾರ ಮುಂದುವರೆಸಿದ್ದನ್ನು ನಾವು ನೋಡಿದ್ದೇವೆ. ವಿಶ್ವ ಹಣಕಾಸು ಬಂಡವಾಳದ ಉದಾರೀಕರಣ, ಜಾಗತೀಕರಣದ ನೀತಿಗಳಿಗೆ ಬಿಜೆಪಿಯ ವಿರೋಧ ಇಲ್ಲ ಎಂಬುದನ್ನು ನೋಡಿ ಆಗಿದೆ.

ವಿಶ್ವ ಹಣಕಾಸು ಬಂಡವಾಳ ಮತ್ತು ಅದರ ಕಿರಿಯ ಪಾಲುದಾರರಾಗಿರುವ ಭಾರತದ ದೊಡ್ಡ ಬಂಡವಾಳಿಗರು ದೇಶದಲ್ಲಿ ಕಾಂಗ್ರೆಸ್ಸಿಗೆ ಪರ್ಯಾಯವಾಗಿ ಬಿಜೆಪಿಯನ್ನು ಬೆಳೆಸುತ್ತಿದ್ದಾರೆ. ಮೂರನೇ ಶಕ್ತಿಯೊಂದು ತಲೆ ಎತ್ತುವುದನ್ನು ಅವರು ಸಹಿಸುವುದಿಲ್ಲ. ರಾಜ್ಯದಲ್ಲಿ ಅಂತಹ ಮೂರನೇ ಪರ್ಯಾಯವಾಗಿ ಬೆಳೆಯಬೇಕಾದ ಶಕ್ತಿಗಳು ತೀರಾ ದುರ್ಬಲವಾಗಿವೆ. ಪಶ್ಚಿಮ ಬಂಗಾಳ, ಕೇರಳ, ತ್ರಿಪುರದಂತಹ ರಾಜ್ಯಗಳಲ್ಲಿ ಬಂಡವಾಳಗಾರರಿಗೆ ಬಿಜೆಪಿಯನ್ನು ಬೆಳೆಸುವುದು ಸಾಧ್ಯವಾಗಿಲ್ಲ. ಅಲ್ಲಿ ಕಾಂಗ್ರೆಸ್ಸಿಗೆ ಪ್ರಬಲವಾದ ಎಡಪ್ರಜಾಸತ್ತಾತ್ಮಕ ಪರ್ಯಾಯ ರೂಪುಗೊಂಡಿದೆ. ಈ ಪರ್ಯಾಯ ಶೋಷಿತ ಜನರ ಸಮರಶೀಲ ಹೋರಾಟ ಮತ್ತು ತ್ಯಾಗಬಲಿದಾನಗಳಿಂದ ರೂಪುಗೊಂಡಿದೆ. ಆ ಸಮರ ಶೀಲ ಜನತೆ ಕಂಡುಕೊಂಡ ದಾರಿ, ಕಾಂಗ್ರೆಸ್ಸಿಗೆ ನಿಜವಾದ ಪರ್ಯಾಯವಾಗಿದೆ. ಅಲ್ಲಿನ ಎಡರಂಗ ಸರ್ಕಾರಗಳ ನೀತಿಗಳು ಕಾಂಗ್ರೆಸ್ ನೀತಿಗಿಂತ ಭಿನ್ನವಾಗಿವೆ.

ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳು ದುರ್ಬಲವಾಗಿರುವ ಗುಜರಾತ್, ರಾಜಸ್ಥಾನ ಮಧ್ಯ ಪ್ರದೇಶದಂತಹ ರಾಜ್ಯಗಳು ಕಾಂಗ್ರೆಸ್ಸಿಗೆ ಪರ್ಯಾಯವಾಗಿ ಬಿಜೆಪಿಯನ್ನು ಆಯ್ಕೆ ಮಾಡುವ ದುರ್ಭಾಗ್ಯಕ್ಕೆ ಒಳಗಾಗಿವೆ. ಗುಜರಾತ್‌ನಲ್ಲಿ ಮೂರನೇ ಬಾರಿಗೆ ಬಿಜೆಪಿ ಆಯ್ಕೆಯಾಗುತ್ತಿರುವುದು ಇದೇ ಕಾರಣಕ್ಕಾಗಿ. ಅಲ್ಲಿ ಕಾಂಗ್ರೆಸ್ ಬಿಜೆಪಿಗಿಂತ ಭಿನ್ನವಾಗಿ ಜನರಿಗೆ ಕಾಣುವುದಿಲ್ಲ. ಭ್ರಷ್ಟಾಚಾರಿಗಳು, ಕ್ರಿಮಿನಲ್‌ಗಳು ಕಾಳಸಂತೆಕೋರರು, ಗುಂಡಾಗಳು ಬಿಜೆಪಿಯಲ್ಲಿ ಇರುವಂತೆ ಕಾಂಗ್ರೆಸ್‌ನಲ್ಲಿಯೂ ಇದ್ದಾರೆ. ಮೋದಿಯನ್ನು ಅವರು ಮತ್ತೆ ಮತ್ತೆ ಗೆಲ್ಲಿಸುತ್ತಾರೆ. ಏಕೆಂದರೆ ಮೋದಿ ಅವರನ್ನು ನೆಮ್ಮದಿಯಿಂದ ಬದುಕಲು ಬಿಡುವವನಲ್ಲ. 'ನಮ್ಮನ್ನು ಬದುಕಲು ಬಿಡು' ಎಂದು ಆತನಿಂದ ದೌರ್ಜನ್ಯಕ್ಕೊಳಗಾದ ಅಲ್ಪಸಂಖ್ಯಾತರು ತಮ್ಮ ಓಟುಗಳನ್ನು ಆತನ ಮುಖಕ್ಕೆ ಎಸೆದು ನಿಟ್ಟುಸಿರು ಬಿಡುತ್ತಾರೆ. ಹೀಗಾಗಿ ಅವನು ಮತ್ತೆ ಮತ್ತೆ ಗೆದ್ದು ಬರುತ್ತಾನೆ.

ಕರ್ನಾಟಕದ ಪರಿಸ್ಥಿತಿ:

ಕಾಂಗ್ರೆಸ್ಸಿಗೆ ಕರ್ನಾಟಕದಲ್ಲಿ ಬಿಜೆಪಿ ಪರ್ಯಾಯವಾಗದು. ಕರ್ನಾಟಕದ ಪರಿಸ್ಥಿತಿ ಗುಜರಾತ್ ಅಂತಹ ರಾಜ್ಯಗಳಿಂದ ಭಿನ್ನವಾಗಿದೆ. ಇಲ್ಲಿ ಕಾಂಗ್ರೆಸ್ಸಿಗೆ ವಿರುದ್ಧವಾದ ಪ್ರವೃತ್ತಿ ಬಲವಾಗಿದೆ. ಅದು ಜನತಾ ಪಕ್ಷ, ಜನತಾದಳ ಮೂಲಕ ವ್ಯಕ್ತವಾಗುತ್ತಾ ಬಂದಿದೆ. ಕಾಂಗ್ರೆಸ್ ಅದನ್ನು ನಾಶಮಾಡಲು ಶತ ಪ್ರಯತ್ನ ಮಾಡುತ್ತಾ ಬಂದಿದೆ. ಈಗ ಬಿಜೆಪಿ ಅದನ್ನು ಸ್ವಾಹ ಮಾಡಲು ಪ್ರಬಲವಾದ ಪ್ರಯತ್ನ ಮಾಡುತ್ತಿದೆ. ಕಾಂಗ್ರೆಸ್ ವಿರೋಧಿ ಮತಗಳನ್ನು ತನ್ನ ಬುಟ್ಟಿಗೆ ಹಾಕಿಕೊಳ್ಳಲು ಅದು ತಂತ್ರ ಕುತಂತ್ರಗಳಲ್ಲಿ ತೊಡಗಿದೆ. ಅಲ್ಪಸಂಖ್ಯಾತ ಮುಸಲ್ಮಾನರನ್ನೂ ಸೆಳೆಯಲು ಅದರ ಇತ್ತೀಚೆಗೆ ಪ್ರಯತ್ನ ಅದೇ ಕುತಂತ್ರದ ಭಾಗವಾಗಿದೆ.

ಕಾಂಗ್ರೆಸ್ಸಿಗೆ ಮತ್ತು ಬಿಜೆಪಿಗೆ ಮೂರನೇ ಪರ್ಯಾಯವಾಗಿ ಬೆಳೆಯಬಹುದಾಗಿದ್ದ ಜೆಡಿ(ಎಸ್) ತನ್ನ ಸಮಯಸಾಧಕತನ ಹಾಗೂ ಅಧಿಕಾರ ದಾಹದಿಂದಾಗಿ ಅವಕಾಶವನ್ನು ಕಳೆದುಕೊಂಡಿದೆ. ಮತ್ತೆ ಜನತೆಯ ವಿಶ್ವಾಸವನ್ನು ಗಳಿಸಲು ಅದು ಪ್ರಾಮಾಣಿಕ ಪ್ರಯತ್ನ ಮಾಡಬೇಕಾಗಿದೆ.

ರಾಜ್ಯದ ನೈಜ ಅಭಿವೃದ್ಧಿ ಹಾಗೂ ಎಲ್ಲ ಸಮುದಾಯಗಳ ಹಿತ ಬಯಸುವ ಎಡ ಪ್ರಜಾಸತ್ತಾತ್ಮಕ ಶಕ್ತಿಗಳು ರಾಜ್ಯದಲ್ಲಿ ಎಷ್ಟೇ ದುರ್ಬಲವಾಗಿದ್ದರೂ ಅವುಗಳ ಮೇಲೆ ಗುರುತರವಾದ ಜವಾಬ್ದಾರಿಯೊಂದು ಆವರ್ತಿಸಿದೆ. ರಾಜ್ಯದಲ್ಲಿ ಗುಜರಾತ್ ಮಾದರಿಯ ಆಡಳಿತವನ್ನು ಹೇರಲು ಬಯಸುವ ಶಕ್ತಿಗಳು ಕಾಂಗ್ರೆಸ್ ವಿರುದ್ಧದ ಅತೃಪ್ತಿಯ ಲಾಭವನ್ನು ಪಡೆಯಲು ಹೊಂಚುಹಾಕುತ್ತಿವೆ. ಗುಜರಾತ್ ಮಾದರಿ ಅದು ಕಾಂಗ್ರೆಸ್‌ಗಿಂತ ಭಿನ್ನವಿಲ್ಲ. ಹಿಂದೆ ಕರ್ನಾಟಕದಲ್ಲಿ ಎಸ್.ಎಂ.ಕೃಷ್ಣ ಮಾಡಲು ಹೊರಟಿದ್ದನ್ನೇ ಮೋದಿ ಗುಜರಾತ್‌ನಲ್ಲಿ ಮಾಡಿದ್ದಾರೆ. ಅವರೇನು ಭೂ ಸುಧಾರಣೆಗಳನ್ನು ಜಾರಿಗೆ ತಂದು ಭೂ ರಹಿತರಿಗೆ ಭೂಮಿ ಕೊಟ್ಟಿಲ್ಲ. ಅವರ ಹಿಂದೆ ತಿರುಗುತ್ತಿರುವ ನಿರುದ್ಯೋಗಿ ಯುವಕರಿಗೆ ಉದ್ಯೋಗ ಕೊಟ್ಟಿಲ್ಲ. ಅವರು ಶ್ರೀಮಂತರನ್ನು ಇನ್ನಷ್ಟು ಶ್ರೀಮಂತರನ್ನಾಗಿ ಮಾಡುವ ಅಭಿವೃದ್ಧಿಯನ್ನು ಮಾಡಿದ್ದಾರೆ. ವಿಶ್ವ ಹಣಕಾಸು ಬಂಡವಾಳದ ನಿರ್ದೇಶನದ ಅಭಿವೃದ್ಧಿಯನ್ನು ಮಾಡಿದ್ದಾರೆ. ಮೋದಿ ಮಾದರಿಯನ್ನು ಕರ್ನಾಟಕದಲ್ಲಿ ಜನ ಈಗಾಗಲೇ ತಿರಸ್ಕರಿಸಿದ್ದಾರೆ. ಇನ್ನು ಅಲ್ಪಸಂಖ್ಯಾತರನ್ನು ಬೆದರಿಸಿ ಸಾಯಿಸಿ ಮಾಡುವ ಅಭಿವೃದ್ಧಿ ಕರ್ನಾಟಕದ ಜನತೆಗೆ ಬೇಕಿಲ್ಲ.

ಮತದಾರರನ್ನು ವ್ಯವಸ್ಥಿತವಾಗಿ ಗೊಂದಲಕ್ಕೀಡು ಮಾಡಲಾಗುತ್ತಿದೆ. ಎಡ ಪ್ರಜಾಸತ್ತಾತ್ಮಕ ಶಕ್ತಿಗಳು ಈ ಗೊಂದಲವನ್ನು ನಿವಾರಿಸುವ ಕೆಲಸವನ್ನು ಮಾಡಬೇಕಾಗಿದೆ. ಜನತೆಯ ನೆಮ್ಮದಿಯನ್ನು ಕೋಮು ಸಾಮರಸ್ಯವನ್ನು ನಾಶಮಾಡುವ ಶಕ್ತಿಗಳನ್ನು ಹಿಮ್ಮೆಟ್ಟಿಸಲು ದೃಢ ನಿರ್ಧಾರದಿಂದ ಶ್ರಮಿಸಬೇಕಾಗಿದೆ.

ಅಧಿಕಾರ ಹಿಡಿಯಲು ಕೋಮುವಾದಿಗಳ ಸಂಚು

ಕರ್ನಾಟಕದಲ್ಲಿ ಕೋಮುವಾದಿಗಳು ಅಧಿಕಾರ ಹಿಡಿಯಲು ತೀವ್ರ ಯತ್ನಕ್ಕೆ ಇಳಿದಿದ್ದಾರೆ. ಕೋಮುವಾದಿಗಳ ಕೈಗೆ ಸೌಹಾರ್ದ ಕರ್ನಾಟಕ ಹೋಗದಂತೆ ಸೋಲಿಸಬೇಕಿದೆ.

ಕರ್ನಾಟಕ ರಾಜ್ಯವು ಮೊಟ್ಟಮೊದಲ ಬಾರಿಗೆ ಕೋಮುವಾದಿಗಳು ಅಧಿಕಾರ ಹಿಡಿಯುವ ಹುನ್ನಾರಗಳ ಒಂದು ಅಪಾಯಕಾರಿ ಸನ್ನಿವೇಶವನ್ನು ಎದುರಿಸುತ್ತಿದೆ. ಜೆಡಿ(ಎಸ್) ಮತ್ತು ಬಿಜೆಪಿ ಮೈತ್ರಿ ಮುರಿದು ಬಿದ್ದುದರಿಂದ ಅನಿವಾರ್ಯವಾಗಿ ವಿಧಾನ ಸಭೆ ವಿಸರ್ಜನೆಯಾಗಿ ರಾಷ್ಟ್ರಪತಿ ಆಡಳಿತ ಹೇರಲ್ಪಟ್ಟಿದೆ. ಮತ್ತು ಹೊಸ ಜನಾದೇಶ ಪಡೆಯಲು ಚುನಾವಣೆ ನಡೆಯಬೇಕಿದೆ. ಮೈತ್ರಿ ಸರ್ಕಾರದ ಪತನವು ಅದರ ಫ್ಯಾಶಿಸ್ಟ್ ಮಾದರಿಯ ದೂರಗಾಮಿ ಅಜೆಂಡಾ ಜಾರಿಯ ಯತ್ನಕ್ಕೆ ತಾತ್ಕಾಲಿಕ ತಡೆಯಾಯಿತು. ಇಂತಹ ಹಿನ್ನೆಲೆಯಲ್ಲಿ ಸ್ವಂತ ಬಲದ ಮೇಲೆಯೇ ಸರ್ಕಾರ ರಚಿಸಲು ಬಿಜೆಪಿ-ಸಂಘಪರಿವಾರ ಇಂದು ಸರ್ವರೀತಿಯಿಂದಲೂ ಆಕ್ರಮಣಕಾರಿಯಾಗಿ ಹೊರಟಿದೆ.

ಈ ಬಾರಿ ರಾಜ್ಯದಲ್ಲಿ ಬಿಜೆಪಿಗೆ ಅತ್ಯಧಿಕ ಪ್ರಮಾಣದಲ್ಲಿ ಹಣದ ಬಲವಿದೆ. ಸಾಂಪ್ರದಾಯಿಕ ಬೆಂಬಲಿಗರಲ್ಲದೇ, ಗಣಿ ಹಾಗೂ ಭೂ ಮಾಫಿಯಗಳ ವಿಪರೀತ ಹಣದ ತೊಡಗುವಿಕೆ ಇದೆ. ಅಧಿಕಾರದಲ್ಲಿ ಅದು ಪಾಲುದಾರನಾಗಿ ಪ್ರಭಾವ ಬೆಳೆಸಿಕೊಂಡಿದ್ದು ಒಂದು ಮುಖ್ಯ ಸಹಾಯಕ ಅಂಶ, ಮೇಲಾಗಿ ಜಾಗತೀಕರಣ-ಉದಾರೀಕರಣದ ಆರ್ಥಿಕ ನೀತಿಗಳ ಜಾರಿಯಲ್ಲಿ ಮುಂಚೂಣಿಯಲ್ಲಿರುವ ಕರ್ನಾಟಕವನ್ನು ಹಿಡಿದಿಟ್ಟುಕೊಳ್ಳಲು ದೇಶದ - ವಿದೇಶದ ಬಂಡವಾಳಗಾರರು ಬಿಜೆಪಿಯನ್ನು ಹೇಗಾದರೂ ಮಾಡಿ ಅಧಿಕಾರಕ್ಕೆ ತರಬೇಕೆಂದು ಹೆಣಗುತ್ತಿದ್ದಾರೆ. ಕನ್ನಡ ಹಾಗೂ ಇತರೆ ಭಾಷಾ ಪತ್ರಿಕೆ, ಟಿ.ವಿ. ಮಾಧ್ಯಮಗಳು ಇದಕ್ಕೆ ಟೊಂಕ ಕಟ್ಟಿ ನಿಂತಿವೆ. ಕೇಂದ್ರದಲ್ಲಿ ಸರ್ಕಾರ ಅಸ್ತಿತ್ವಕ್ಕೆ ಬರಲು ಕರ್ನಾಟಕದಿಂದ ಹೆಚ್ಚಿನ ಸಂಸತ್ ಸದಸ್ಯರ ಅಗತ್ಯವಿದ್ದು ಇಲ್ಲಿ ಅದಕ್ಕೆ ಹೆಚ್ಚಿನ ಅವಕಾಶಗಳಿವೆಯೆಂದು ಬಿಜೆಪಿಯು ಪರಿಗಣಿಸಿದೆ. ಆದ್ದರಿಂದಲೇ ಪ್ರಧಾನಿ ಅಭ್ಯರ್ಥಿ ಎಂದು ಬಿಂಬಿಸುತ್ತಿರುವ ಅದ್ವಾನಿಯವರ ನೇರ ಉಸ್ತುವಾರಿಯಲ್ಲಿ ಚುನಾವಣೆ ನಡೆಸಲು ಅದು ನಿರ್ಧರಿಸಿದೆ. ಯಡಿಯೂರಪ್ಪನವರ ಪ್ರಮಾಣ ವಚನದ ಸಂದರ್ಭದಲ್ಲಿ ಪ್ರಮುಖ ಕೇಂದ್ರ ನಾಯಕರ ದಂಡೇ ಅಲ್ಲಿ ಬೀಡುಬಿಟ್ಟಿದ್ದು, ಇದೇ ನಾಯಕರ ಪದೇ ಪದೇ ರಾಜ್ಯದ ಬೇಟಿಗಳು ಕೇಂದ್ರ ಬಿಜೆಪಿ ನೀಡುತ್ತಿರುವ ಪ್ರಾಮುಖ್ಯತೆಗೆ ಉದಾಹರಣೆ. ಹಾಗೆಯೇ ಇಡೀ ಆರ್.ಎಸ್.ಎಸ್ ಬಿಜೆಪಿಯನ್ನು ಅಧಿಕಾರಕ್ಕೇರಿಸುವ ದಿಕ್ಕಿನಲ್ಲಿ ಪೂರ್ಣ ತೊಡಗಿದೆ. ಈ ಅವಧಿಯ ಒಟ್ಟು ರಾಜಕೀಯ ಬೆಳವಣಿಗೆಗಳಲ್ಲಿ ಆರ್‌ಎಸ್‌ಎಸ್‌ನ ಪಾತ್ರ ಅತ್ಯಧಿಕವಾಗಿತ್ತು.

ಮಾಫಿಯಾ ಬಳಕೆ

ಬಿಜೆಪಿ ನೆಲೆ ಕುಸಿಯದಂತೆ, ಮನಶ್ಚೇತನ ತರಲು ಮತ್ತು ಹೊಸ ಪ್ರದೇಶಗಳಿಗೆ ವಿಸ್ತರಿಸಲು ಆದ್ಯತೆ ನೀಡಿದೆ. ಇತ್ತೀಚೆಗೆ ಬಂಟ್ವಾಳ ಕ್ರಾಸ್, ಸುರತ್ಕಲ್‌ನಲ್ಲಿ ಸಂಭವಿಸಿದ ಕೋಮುಗಲಭೆಗಳು ಹಳೆಯ ಕ್ಷೇತ್ರಗಳ ಉಳಿಕೆಯ ಯತ್ನವಾಗಿದ್ದರೆ ತಿಪಟೂರು, ಇಂಡಿ ಗಲಭೆಗಳು ಹೊಸ ಪ್ರದೇಶದತ್ತ ವಿಸ್ತರಣೆಯ ಉದ್ದೇಶದ್ದಾಗಿದೆ.

ತನಗೆ ಬಹುಮತ ದೊರೆತರೆ ಕರ್ನಾಟಕವನ್ನು 'ಗುಜರಾತ್‌ನ್ನಾಗಿ'ಸುವುದಾಗಿ ಬಿಜೆಪಿ ಪುನರ್ ಘೋಷಿಸಿರುವುದು ಫ್ಯಾಶಿಸ್ಟ್ ಮಾದರಿಯ ಅಜೆಂಡಾ ಜಾರಿಯೇ ಅದಕ್ಕೆ ಆದ್ಯತೆ ಎಂಬುದು ಬಯಲಾಗಿದೆ. ವಿಹೆಚ್‌ಪಿ ಯಿಂದ ಹೊರ ಹಾಕಲಾಗಿದೆಯೆಂದು ಬಿಂಬಿಸಲಾಗುತ್ತಿರುವ ಪ್ರಮೋದ್ ಮುತಾಲಿಕ್‌ನ ಶ್ರೀರಾಮ ಸೇನೆ ಇತ್ತೀಚಿಗೆ ಬಹಿರಂಗವಾಗಿ ಬಾಗಲಕೋಟೆಯಲ್ಲಿ ತ್ರಿಶೂಲ ಹಂಚಿಕೆ ಮಾಡಿದ್ದು ಅಲ್ಲದೆ ಹಿಂದೆಯೂ ಬಜರಂಗದಳ ಕರಾವಳಿ, ಹುಬ್ಬಳ್ಳಿ ವಿಜಾಪುರ ಮುಂತಾದೆಡೆಗಳಲ್ಲಿನ ತ್ರಿಶೂಲ ದೀಕ್ಷೆಯು ಜಾತ್ಯಾತೀತ ಮೌಲ್ಯಗಳಿಗೆ, ಶಾಂತಿ-ಸೌಹಾರ್ದತೆಗೆ ಗಂಭೀರ ಬೆದರಿಕೆ ಒಡ್ಡಿದೆ. ಆರ್.ಎಸ್.ಎಸ್ ಇಂತಹ ಹಲವಾರು ಸಂವಿಧಾನೇತರ ಶಕ್ತಿಗಳನ್ನು ಬೆಳೆಸುತ್ತಿದೆ, ಇದಕ್ಕೆ ಕ್ರಿಮಿನಲ್ ಹಾಗೂ ಮಾಫಿಯಾಗಳನ್ನು ಬಳಸುತ್ತಿದೆ. ವ್ಯವಸ್ಥಿತವಾಗಿ ಕಾರ್ಯ ಹಂಚಿಕೆ ಮಾಡಿದೆ.

ತ್ರಿಶೂಲ

ಧಾರ್ಮಿಕ ಹಾಗೂ ಜಾತಿಯ ಮುಖಂಡರನ್ನು, ಸಂಸ್ಥೆಗಳನ್ನು ವಿವಿಧ ರೀತಿಯಲ್ಲಿ ಬಳಸಲಾಗುತ್ತಿದೆ. ಅತಿಯಾದ ಧಾರ್ಮಿಕ ಭಾವನೆಗಳನ್ನು ಬೆಳೆಸುವುದು, ಅಂಧಶ್ರದ್ಧೆ-ಮೂಡನಂಬಿಕೆಗಳನ್ನು ಹರಡುವುದು, ಸ್ಥಳೀಯ ವಿವಾದಗಳನ್ನೆತ್ತುವುದು, ವಿರಾಟ್ ಹಿಂದೂ ಸಮಾಜೋತ್ಸವ ನಡೆಸುವುದು, ಗಲಭೆ ಹಬ್ಬಿಸುವುದು ಮತ್ತು ಅದನ್ನು ರಾಜಕೀಕರಣಗೊಳಿಸುವುದು ಹೀಗೆ ಒಂದು ಸರಣಿ ಕಾರ್ಯಗಳು ಜಾರಿಯಲ್ಲಿವೆ. ವಿವಿಧ ಜಾತಿಗಳ ಪ್ರಮುಖ ಮಠಾದೀಶರನ್ನು ಸಂಘ ಪರಿವಾರ ತನ್ನ ತೆಕ್ಕೆಗೆ ಎಳೆದುಕೊಂಡಿದೆ, ಈ ಅವಧಿಯಲ್ಲಿ ಸಿದ್ಧಗಂಗಾ, ಆದಿಚುಂಚನಗಿರಿ, ಕೊಳದ ಮಠಗಳ ಮಠಾದೀಶರನ್ನು ಸಕ್ರಿಯವಾಗಿ ತೊಡಗಿಸಿದೆ. ಅಲ್ಲದೇ ವಾಲ್ಮೀಕಿ, ಕುರುಬ ಮುಂತಾದ ಜಾತಿಗಳ ಮಠಾದೀಶರನ್ನು ಒಳಗೊಳ್ಳಲು ಪ್ರಯತ್ನಗಳು ಹೆಚ್ಚಿವೆ. ಹಲವಾರು ವೀರಶೈವ ಮಠಾದೀಶರು ಸಂಘಪರಿವಾರದ ಕಾರ್ಯಕ್ರಮಗಳಲ್ಲಿ ತೊಡಗಿಸಿಕೊಂಡಿದ್ದಾರೆ.

ಬುಡಕಟ್ಟು, ದಲಿತ ಹಿಂದುಳಿದ ವಿಭಾಗಗಳ ನಡುವೆ ಗಮನ ಕೇಂದ್ರೀಕರಿಸಲಾಗುತ್ತಿದೆ. ಶಿಕ್ಷಣ ಸಂಸ್ಥೆಗಳು, ಬುದ್ಧಿ ಜೀವಿಗಳು, ಸಾಹಿತ್ಯ-ಸಾಂಸತಿಕ ವಲಯದ ಬಳಕೆ, ಸ್ಥಳೀಯ ಪೂಜಾ ಪದ್ಧತಿ, ಜಾನಪದ ಕಲೆಗಳ ಬಳಕೆ, ಕನ್ನಡಪರ ಸಂಘಟನೆಗಳ ಬಳಕೆ, ಕೊಡಗು - ಹೈ.ಕರ್ನಾಟಕದಲ್ಲಿನ ಪ್ರತ್ಯೇಕತಾವಾದಕ್ಕೆ ಬೆಂಬಲ ಇವು ಆರ್.ಎಸ್.ಎಸ್‌ನ ವಿರಾಟ್ ಶಕ್ತಿಯ ಅಪಾಯ ತೋರಿಸುತ್ತದೆ.

ಆದರೆ ಕರ್ನಾಟಕ ಬಿಟ್ಟರೆ ದಕ್ಷಿಣ ಭಾರತದಲ್ಲಿ ಉಳಿದ ಮೂರು ರಾಜ್ಯಗಳಲ್ಲಿ ಅದೆಷ್ಟೇ ಯತ್ನಿಸಿದರೂ ಒಂದು ನೆಲೆ ದೊರೆಕಿಸಿಕೊಳ್ಳಲಾಗಿಲ್ಲ. ಎಡ ಚಳುವಳಿ ಪ್ರಜಾಸತ್ತಾತ್ಮಕ ದುರ್ಬಲವಾಗಿರುವ ಕರ್ನಾಟಕವನ್ನೆ ಸಂಘಪರಿವಾರ ಆಯ್ಕೆ ಮಾಡಿಕೊಂಡಿರುವುದು ರಾಜ್ಯದ ಜನತೆಯನ್ನು ಅಪಾಯದ ಅಂಚಿಗೆ ತಂದು ನಿಲ್ಲಿಸಿದೆ.

ಆಡಳಿತ ಯಂತ್ರದ ಬಳಕೆ :

ಬಿಜೆಪಿಯು ಆಡಳಿತದಲ್ಲಿ ಪಾಲು ಪಡೆದಿರುವುದನ್ನು ಪರಿಣಾಮಕಾರಿಯಾಗಿ ಬಳಸಲು ಸಂಘಪರಿವಾರ ತೊಡಗಿತು. ಪ್ರಮಾಣ ವಚನದ ಸರ್ಕಾರಿ ಸಮಾರಂಭದ ಸಿದ್ದತೆಗೆ ಕೈಚಾಚಿದ್ದನ್ನು ಮೊದಲ್ಗೊಂಡು ಮಂತ್ರಿಮಂಡಲದಲ್ಲಿ ಹಣಕಾಸು, ಕಂದಾಯ, ಉನ್ನತ ಶಿಕ್ಷಣ, ಮುಜರಾಯಿ, ಗ್ರಾಮೀಣ ಅಭಿವೃದ್ಧಿ ಯಂತಹ ಆಯಕಟ್ಟಿನ ಪ್ರಮುಖ ಖಾತೆಗಳನ್ನು ಬಳಸಿಕೊಂಡಿತು. ಐಎಎಸ್ ಅಧಿಕಾರಿಗಳನ್ನು ಪ್ರಭಾವಿಸಲು ಅವರಿಂದ ಶಾಸಕರಿಗೆ ತರಬೇತು, ಕರಾವಳಿ-ಕೊಡಗು, ಚಿಕ್ಕಮಗಳೂರು ನಂತಹ ಕೋಮುಗ್ರಸ್ತ ಜಿಲ್ಲೆಗಳ ಉಸ್ತುವಾರಿ, ಉನ್ನತ ಹಂತಗಳಿಂದ ಕೆಳಹಂತಗಳವರೆಗೂ ಅಧಿಕಾರಿಗಳನ್ನು ನೇಮಿಸುವುದರಲ್ಲಿ, ವಿಶ್ವ ವಿದ್ಯಾಲಯಗಳ ಕುಲಪತಿಗಳ ಸ್ಥಾನಕ್ಕೆ ಸಂಘಪರಿವಾರದ ನಿಕಟವರ್ತಿಗಳ ನೇಮಕ, ಕೆಲವು ಜಾತಿಯ ಮಠಗಳಿಗೆ ಸರ್ಕಾರಿ ಬಜೆಟ್‌ನ ಹಣ ನೀಡುವ ಮೂಲಕ ಅವುಗಳನ್ನು ಬಳಸುವ ಪ್ರಯತ್ನಗಳು ನಡೆದವು. ಬಿಜೆಪಿ ಸರ್ಕಾರ ರಚನೆಯ ಸಂದರ್ಭದಲ್ಲಿ ವೆಂಕಯ್ಯನಾಯ್ಡು ಘೋಷಿಸಿದಂತೆ ದಕ್ಷಿಣ ಕರ್ನಾಟಕದಲ್ಲಿ(ಒಕ್ಕಲಿಗ ಪ್ರಾಬಲ್ಯವಿರುವ) ನೆಲೆ ವಿಸ್ತರಿಸುವುದೇ ಬಿಜೆಪಿಯ ಆದ್ಯತೆಯಾಯಿತು.

ಬಿಜೆಪಿ ಅಧಿಕಾರದಲ್ಲಿರುವಾಗ ಬೆಂಗಳೂರು-ಮಂಗಳೂರು-ದ.ಕ.ದಲ್ಲಿ ಸಂಭವಿಸಿದ ಕೋಮುಗಲಭೆಗಳಲ್ಲಿ ಗಲಭೆಕೋರರನ್ನು ನಿಯಂತ್ರಿಸಿ, ಬಗ್ಗು ಬಡಿಯದೇ ಪೋಲಿಸರನ್ನು ಒಳಗೊಂಡು ಆಡಳಿತ ಕಾರ್ಯನಿರ್ವಹಿಸದಂತೆ ತಡೆಯಿತು, ಧಾಳಿಗೊಳಗಾದ ಅಲ್ಪಸಂಖ್ಯಾತರ ರಕ್ಷಣೆಗೂ ಆಡಳಿತ ಬರಲಿಲ್ಲ. ಹಾಗೆಯೇ ಬಾಬಾಬುಡನ್‌ಗಿರಿಯ ಮೂಲ ಸ್ವರೂಪವನ್ನು ನಾಶಗೊಳಿಸಲು ಮುಂದಾದ ಬಿಜೆಪಿಯು ಉರುಸ್ ನಡೆಯಲು ಅವಕಾಶ ಕೊಡಲಿಲ್ಲ. ಬಾಬಾಬುಡನ್ ಗಿರಿ ಹಾಗೂ ಹುಬ್ಬಳ್ಳಿ ಈದ್ಗಾ ಮೈದಾನದ ವಿಷಯದಲ್ಲಿ ಅಫಿಡೇವಿಟ್ ಸಲ್ಲಿಸುವಾಗ ತನ್ನ ಪ್ರಭಾವವನ್ನು ಬೀರಿತು. ಟಿಪ್ಪು ಸುಲ್ತಾನನ್ನು ಕನ್ನಡ ವಿರೋಧಿ ಎಂದು ಉನ್ನತ ಶಿಕ್ಷಣ ಸಚಿವ ಶಂಕರಮೂರ್ತಿಯವರೇ ಎತ್ತಿ ಕಟ್ಟುವ ಪ್ರಯತ್ನ, ಶಿಶುನಾಳ ಶರೀಫರ ಹೆಸರಿನ ಪ್ರಶಸ್ತಿ ರದ್ಧತಿ, ಅಕಾಡೆಮಿಗಳ ಅದ್ಯಕ್ಷರುಗಳ ಬದಲಾವಣೆಯಂತಹ ಯತ್ನಗಳು ನಡೆದವು.

ಈ ಸರ್ಕಾರವು ಸುರತ್ಕಲ್, ಉಳ್ಳಾಲದಂತಹ ಹಲವಾರು ಕೋಮು ಗಲಭೆಗಳಲ್ಲಿ ತೊಡಗಿದ್ದ ಬಿಜೆಪಿ ಬಜರಂಗದಳದ ನಾಯಕರ ಮೇಲಿದ್ದ ಕ್ರಿಮಿನಲ್ ರಾಜ್ಯದಾದ್ಯಂತ ಮೊಕದ್ದಮೆಗಳನ್ನು ಹಿಂತೆಗೆದುಕೊಂಡಿತು. ಅಲ್ಲದೇ ಬೆಂಗಳೂರಿನಲ್ಲಿ ಸೇತುಸಮುದ್ರಂ ಹೆಸರಿನಲ್ಲಿ ಇಬ್ಬರನ್ನೂ ಜೀವಂತ ಸುಟ್ಟ ಶ್ರೀರಾಮಸೇನೆ ಮತ್ತು ಬಜರಂಗದಳದ ಕಾರ್ಯಕರ್ತರು ಖುಲಾಸೆಗೊಳ್ಳುವಂತೆ ಆಡಳಿತದ ಮೂಲಕ ನೋಡಿಕೊಳ್ಳಲಾಯಿತು.

ಕಾರ್ಯಾಚರಣೆ

ಈ ಅವಧಿಯಲ್ಲಿ ಗಮನಾರ್ಹ ಬೆಳವಣಿಗೆಯೆಂದರೆ ಕೋಮುವಾದಿ ಶಕ್ತಿಗಳ ಬಲ ಮತ್ತು ನೆಲೆಯ ವಿಸ್ತರಣೆಗೆ ಹೆಚ್ಚಿದ ಪ್ರಯತ್ನಗಳು ಹಿಂದೆ ಎಸ್.ಎಂ.ಕೃಷ್ಣ ಸರ್ಕಾರದ ಉದಾರೀಕರಣದ ಆರ್ಥಿಕ ನೀತಿಗಳ ವಿರುದ್ಧ ಅತೃಪ್ತಿ ಮತ್ತು ಕೋಮುವಾದಿಗಳ ಬಗೆಗಿನ ಅದರ ರಾಜಿ ಮನೋಭಾವ ಹಾಗೂ ಜೆಡಿ(ಎಸ್)- ಜೆಡಿ(ಯು)ಗಳಲ್ಲಿನ ಒಡಕು ಹಾಗೂ ಕೇಂದ್ರದಲ್ಲಿ ಬಿಜೆಪಿ ನೇತೃತ್ವದ ಸರ್ಕಾರದ ಪ್ರಭಾವದಿಂದ 79 ಶಾಸಕರು, 18 ಸಂಸದರ ಬಲವನ್ನು ಬಿಜೆಪಿಯು ಪಡೆಯಿತು. ತನ್ನ ಈ ಶಕ್ತಿಯನ್ನು ಬಳಸಲು ವ್ಯವಸ್ಥಿತವಾಗಿ ಕಾರ್ಯಾಚರಣೆಗೆ ಇಳಿಯಿತು. ಹಿಂದೆ ಗುರುತಿಸಿದಂತೆ 'ತ್ರಿಶೂಲ ಕಾರ್ಯ ಸೂಚಿ'ಯಂತೆ ಗೋಳ್ವಾಲ್ಕರ್ ಶತಮಾನೋತ್ಸವದ ಆಚರಣೆ ಹೆಸರಿನಲ್ಲಿ ವಿರಾಟ್ ಹಿಂದೂ ಸಮಾಜೋತ್ಸವಗಳನ್ನು ನಡೆಸಿ ಬಿಜೆಪಿಯ ರಾಜಕೀಯ ಪ್ರಭಾವವನ್ನು ಸೈದ್ಧಾಂತಿಕವಾಗಿ ಕ್ರೋಡೀಕರಿಸಲು ಇಳಿಯಿತು. ವ್ಯಾಪಕವಾಗಿ ಕೋಮು ಭಾವನೆ ಕೆರಳುವಂತೆ ನೋಡಿಕೊಳ್ಳಲಾಯಿತು. ಆಯಾ ಪ್ರದೇಶದ ಮಠಾದೀಶರ ಬಳಕೆ, 'ಹಿಂದುಗಳ' ಹೆಸರಿನಲ್ಲಿ ಕಾಂಗ್ರೆಸ್, ಜೆಡಿ(ಎಸ್) ನಂತಹ ಪಕ್ಷಗಳ ಹಲವಾರು ಶಾಸಕರು, ನಾಯಕರುಗಳು ಇದರ ಸಿದ್ಧತೆಯಿಂದ ಹಿಡಿದು ಒಟ್ಟು ಕಾರ್ಯಕ್ರಮದಲ್ಲಿ ಸಕ್ರೀಯವಾಗಿ ಭಾಗವಹಿಸಿದ್ದಾರೆ. ಅಪಾರ ಪ್ರಮಾಣದ ಹಣದ ಖರ್ಚು ಮಾಡಲಾಯಿತು. ಇದರ ಪರಿಣಾಮವಾಗಿ ಬೆಂಗಳೂರಿನ ಶಿವಾಜಿನಗರ, ಭಾರತೀನಗರ ಮಂಗಳೂರು, ಬಂಟ್ವಾಳ ಗಳಲ್ಲಿ ಕೋಮುಗಲಭೆಗಳು ನಡೆದವು.

ಆರ್.ಎಸ್.ಎಸ್. ಬೆಳೆಯಲು ಕರಾವಳಿ ಕರ್ನಾಟಕ, ಉತ್ತರ ಕರ್ನಾಟಕ, ದಕ್ಷಿಣ ಕರ್ನಾಟಕ, ಮದ್ಯ ಕರ್ನಾಟಕ, ಹೈದ್ರಾಬಾದ್ ಕರ್ನಾಟಕದಂತಹ ಪ್ರಾದೇಶಿಕವಾಗಿ ಭಿನ್ನ ಭಿನ್ನ ತಂತ್ರಗಳನ್ನು ಅನುಸರಿಸುತ್ತಿದೆ. ಕರಾವಳಿಯುದ್ದಕ್ಕೂ ವಿಶೇಷವಾಗಿ ದ.ಕ-ಉಡುಪಿಗಳ ಜಿಲ್ಲೆಗಳಲ್ಲಿ ಗೋಸಾಗಾಟ - ಕಸಾಯಿಖಾನೆ ಪ್ರಶ್ನೆ ಎತ್ತಿಕೊಂಡು ನಿತ್ಯವೂ ಅಲ್ಪಸಂಖ್ಯಾತರ ಮೇಲೆ ಧಾಳಿಗಳು ಅವ್ಯಾಹತವಾಗಿ ಸಾಗುತ್ತಲೇ ಇವೆ. ಇದು ಅಲ್ಪಸಂಖ್ಯಾತರ, ದಲಿತರ ಇತರೆ ಹಿಂದುಳಿದ ಜನಾಂಗಗಳ ಆಹಾರ ಪದ್ಧತಿಯ ಮೇಲಿನ ಧಾಳಿಯಾಗಿದೆ. ಇದನ್ನು ರಾಜ್ಯದ ಹಲವಾರು ಜಿಲ್ಲೆಗಳಿಗೂ ಹಬ್ಬಿಸಲಾಗುತ್ತಿದೆ. ಆದಿ ಉಡುಪಿಯ ಮುಸ್ಲಿಂ ಜನಾಂಗದ ಇಬ್ಬರು ದನದ ವ್ಯಾಪಾರಿಗಳನ್ನು ಬೆತ್ತಲೆಗೊಳಿಸಿ ಅಮಾನುಷವಾಗಿ ಹಿಂಸಿಸಲಾಯಿತು. ಕರಾವಳಿಯನ್ನು ಗುಜರಾತ್‌ನ ಪ್ರಯೋಗ ಶಾಲೆಯನ್ನಾಗಿ ಮಾಡಲಾಗುತ್ತಿದೆ. ದತ್ತಯಾತ್ರೆ-ಶಾರದಾ ಭಾವಚಿತ್ರ ಮೆರವಣಿಗೆಯ ನೆಪದಲ್ಲಿ ಮಂಗಳೂರಿನಲ್ಲಿ ಸ್ಫೋಟಗೊಂಡ ಘರ್ಷಣೆಯಲ್ಲಿ ಅಲ್ಪಸಂಖ್ಯಾತರ ಹತ್ಯೆ, ಗಲಭೆಗಳು, ಕೊಲೆಯಾದ ರೌಡಿ ಪೊಳಲು ಅನಂತು ಶವ ಮೆರವಣಿಗೆ ಸಂದರ್ಭಕ್ಕೆ ಸಂಭವಿಸಿದ ಗಲಭೆಗಳು, ಪರಿಸ್ಥಿತಿಯನ್ನು ಇನ್ನೂ ಹದಗೆಡಿಸಿತು. ಉಸ್ತುವಾರಿ ಸಚಿವರಾಗಿದ್ದ ನಾಗರಾಜಶೆಟ್ಟಿಯವರು ಆಡಳಿತ ಯಂತ್ರ ವು ನಿಷ್ಪಕ್ಷಪಾತವಾಗಿ ಕೆಲಸ ಮಾಡದಂತೆ, ಪರಿವಾರದ ಗಲಭೆಕೋರರನ್ನು ರಕ್ಷಿಸುವಂತೆ ನೋಡಿಕೊಂಡರು. ಮಂಡ್ಯ, ತುಮಕೂರು, ಹುಬ್ಬಳ್ಳಿ, ಭಟ್ಕಳದ ಜಟ್ಟಿಗನಕಟ್ಟೆ, ಮುಳಬಾಗಿಲು, ಕುಂದಾಪುರದ ಶಿರೂರು, ಕೊಲ್ಲೂರು ಮುಂತಾದೆಡೆ ಅಲ್ಪಸಂಖ್ಯಾತರ ಮೇಲೆ ಧಾಳಿ- ಹಿಂಸಾಚಾರ ನಡೆದವು. ಸತತವಾಗಿ ಬಾಬಾಬುಡನ್ ಗಿರಿಯ ವಿವಾದದಂತೆ ಹಂಪಿಯ ಹೊನ್ನೂರ್ ಸಾಬ್ ವಲಿ ದರ್ಗಾ-ಈರಣ್ಣ ದೇವಸ್ಥಾನದ ವಿವಾದವನ್ನೂ, ಕೋಲಾರದ ಅಂತರ್ ಗಂಗೆಯನ್ನೂ ಹೊಸದಾಗಿ ಸೇರಿಸಿ ವಿಪರೀತ ವಿವಾದ ಬೆಳೆಸುತ್ತಿರುವುದು ಹೊಸದಾದ ಬೆಳವಣಿಗೆಗಳು.

ಅಲ್ಲದೇ ರಾಜ್ಯದ ಹಲವಾರು ಚರ್ಚ್, ಮಸೀದಿ ಪ್ರಾರ್ಥನಾ ಸ್ಥಳಗಳು ಹಾಗೂ ಪಾದ್ರಿಗಳ ಮೇಲೆ ಈಗಲೂ ಧಾಳಿಗಳನ್ನೂ ನಡೆಸಲಾಗುತ್ತಿದೆ. ಇದಲ್ಲದೇ ಶಿವರಾತ್ರಿ- ಯುಗಾದಿಯಂತಹ ಹಬ್ಬಗಳನ್ನೂ ಸಾಮೂಹಿಕ ವಿವಾಹಗಳನ್ನು ಸಂಘಪರಿವಾರ-ಬಿಜೆಪಿ ಬಳಸಿಕೊಳ್ಳುತ್ತೇವೆ. ವಿಶೇಷವಾಗಿ ರಾಮಚಂದ್ರಾಪುರ ಮಠದ ಮೂಲಕ ಭಾರಿ ಪ್ರಚಾರದೊಂದಿಗೆ 'ಗೋಪೂಜೆ'ಯ ಹೆಸರಿನಲ್ಲಿ ಧಾರ್ಮಿಕ ಮನೋಭಾವ ದುರ್ಬಳಕೆ ಮಾಡಿ ಅಲ್ಪಸಂಖ್ಯಾತರು, ದಲಿತರ-ವಿರುದ್ಧ ತಣ್ಣನೆಯ ದ್ವೇಷವನ್ನೂ ಬೆಳೆಸಲಾಗುತ್ತಿದೆ. ತಾವು ಬೆಳೆಯಲು ಮೊಗವೀರರು, ಪಟ್ಟೇಗಾರರು, ಮುಂತಾದ ನಿರ್ದಿಷ್ಟ ಜಾತಿಗಳನ್ನು ಸೆಳೆಯಲು ಸತತ ಪ್ರಯತ್ನ ಮಾಡುತ್ತಾ ಬಂದಿವೆ. ಇತ್ತೀಚಿನ ವರ್ಷಗಳಲ್ಲಿ ವಾಲ್ಮೀಕಿ, ಕುರುಬ, ಲಿಂಗಾಯತರಲ್ಲಿನ ಉಪಜಾತಿಗಳನ್ನು ತಲುಪಲು ಯತ್ನಿಸಿ ಭಾಗಶಃ ಯಶಸ್ವಿಯಾಗುತ್ತಿದ್ದಾರೆ. ಒಕ್ಕಲಿಗರನ್ನು ಸೆಳೆಯಲು ಜೆಡಿ(ಎಸ್)ನೊಂದಿಗೆ ಮೈತ್ರಿ ಸರ್ಕಾರವಿರುವಾಗ ವಿಶೇಷವಾಗಿ ಪ್ರಯತ್ನಿಸಲಾಗಿದೆ. ಈಗಲೂ ಮುಸ್ಲಿಂರನ್ನು ಸೆಳೆಯಲು ಬಿಜೆಪಿ ಪ್ರಯತ್ನಿಸುತ್ತಿದೆ. ಅಲ್ಲದೇ ಹಲವು ಪ್ರಮುಖ ಉದ್ಯಮಿಗಳನ್ನು ಬಿಜೆಪಿಗೆ ತರಲು ಯತ್ನಗಳು ನಡೆದಿವೆ.

ಪುಟ 14ಕ್ಕೆ



ಸೌಹಾರ್ದ ಕರ್ನಾಟಕಕ್ಕೆ ಕಿಚ್ಚು ಹಚ್ಚಲು ಬಿಡಬೇಕೆ?






ತ್ರಿಶೂಲ ಕಾರ್ಯಾಚರಣೆಗೆ ಜೊತೆ ಗಣಿ-ಭೂ ಮಾಫಿಯಾದ ಕಾಂಚಾಣ

ನೆಲದ ಪಿಸುಮಾತು

ಕೆ.ನೀಲಾ



"....ಜನ ನಮಗ ಸುಮ್ನೇ ಇಟ್ಟಿಲ್ಲ ಕೊಟ್ಟಿಲ್ಲ. ತಮ್ಮ ಕಷ್ಟಾನೂ ನಮ್ಮ ಮುಂದ ಹೇಳ್ಕೊಂಡಾರ. ಭಾಳ ಮಂದಿ ಬಡವ್ರು ಇದಾರ. ಅವ್ರಿಗಿ ರೇಷನ್ ಕಾರ್ಡಿಲ್ಲ, ವಾಸಕ್ಕ ಒಂದು ಚೆಂದಾನ ಮನೆ ಇಲ್ಲ. ಬೆಳೆದ ಮಕ್ಕಳಿಗೆ ನೌಕರಿ ಇಲ್ಲ. ಮತ್ತೆ ಕುಮಾರಸ್ವಾಮಿ ಸರ್ಕಾರ ಸಾರಾಯಿ ಬಂದ್ ಮಾಡ್ತೀವಿ ಅಂತ ಹೇಳಿ ಬಂದ್‌ನೂ ಮಾಡಿದ ಮ್ಯಾಲ ಕಷ್ಟ ತಪ್ಪಿಲ್ಲ. ಬದಲಿಗೆ ದುಪ್ಪಟ್ಟಾಗ್ಯಾದ ಅಂತೆಲ್ಲ ತಮ್ಮ ನೋವು ತೋಡಿಕೊಂಡಾರ...." ಸರಸ್ವತಿ ತುಂಬ ಗಂಭೀರತೆಯಿಂದ ಹೇಳುತ್ತಿದ್ದಳು.

ಒಡಲ ನುಡಿ ಹೋರಾಟದ ಕಿಡಿ

ಚೆನ್ನದ ಗಣಿಯ ಊರು ...ಟ್ಟಿಯಲ್ಲಿ ಪಕ್ಷದ ಜಿಲ್ಲಾ ...ಮ್ಮೇಳನವು ಮೂರು ದಿನಗಳ ಕಾಲ ...ಡಿದು ಸಂಜೆಯ ಇಳಿ ಹೊತ್ತಲ್ಲಿ ಧ್ವಜ ...ರೋಹಣ ಮಾಡಿ, ಸಂಗಾತಿಗಳು ಘೋಷಣೆ ...ಳಗಿಸಿದರು. ಸೂಫಿ-ಸಂತರ ಶ್ರೀಮಂತ ...ಡು ರಾಯಚೂರು ಜಿಲ್ಲೆಯಲ್ಲಿ ...ೋಮುವಾದಕ್ಕೆ ಬರಲು ಬಿಡಬಾರದು. ಈ ...ಲ್ಲೆಯ ಸಮಗ್ರ ಅಭಿವೃದ್ಧಿಗಾಗಿ ಪಾಳೇಗಾರಿ ...ಮೀನ್ದಾರಿ ಶಕ್ತಿಗಳ ವಿರುದ್ಧ ದುಡಿವ ವರ್ಗದ ...ಳುವಳಿ ಕಟ್ಟಲು ಪ್ರತಿನಿಧಿಗಳು ಚರ್ಚಿಸಿ ...ರ್ಣಯ ಮಾಡಿದ್ದರು. ಹಟ್ಟಿ ಚಿನ್ನದ ಗಣಿಯ ...ಾಸಗೀಕರಣಕ್ಕೆ ತೀವ್ರ ಪ್ರತಿರೋಧ ...ಕ್ತಪಡಿಸಿದರು. ಒಟ್ಟು ಮೂರು ದಿನಗಳ ...ಮ್ಮೇಳನ, ಬಹಿರಂಗಸಭೆಯು ಅತ್ಯಂತ ...ತ್ಸಾಹದಿಂದ ಕೂಡಿತ್ತು. ಬೀದಿಗಳು ಕೆಂಪು ...ಾರಿ ಮತ್ತು ಬಾವುಟಗಳಿಂದ ರಂಗಾಗಿದ್ದವು. ...ೋಡೆ ಬರಹಗಳು ಅರಿವಿನ ಬೆಳಕೊತ್ತು ...ಳಗುತ್ತಿದ್ದವು. ತುಂಬ ಸಣ್ಣ ಶಕ್ತಿಯಲ್ಲಿ ಇಷ್ಟೆಲ್ಲಾ ...ಾಯಿಸಲು ಸಾಧ್ಯವಾದದ್ದು ಹೇಗೆ? ನನಗೆ ...ಶ್ನೆ ಕಾಡುತ್ತಿತ್ತು. ಅನೇಕ ಜನ ಪುರುಷ ...ಂಗಾತಿಗಳು ನಿರಂತರ ಶ್ರಮಿಸಿದ್ದು ನನ್ನ ...ಮನಕ್ಕಿತ್ತು. ಆದರೆ ತುಂಬ ಹೊಸಬರಾಗಿರುವ ...ಹಿಳಾ ಸಂಗಾತಿಗಳ ಶ್ರಮ ಮಾತ್ರ ನನಗೆ ...ರಗು ಮತ್ತು ಉತ್ಸಾಹ ಮೂಡಿಸಿತು.

...ವರಲ್ಲೂ ಕೂಲಿ ಮಾಡುವ ಹೆಂಗಸರು...

...ಸ್ವರ್ಣ ಮಂದಿರದ ಹೊರ ಬಯಲಿನಲ್ಲಿ ...ೊಡ್ಡ ಜಮಖಾನೆ ಹಾಸಿ ನಾವು ಹೆಂಗಸರೆಲ್ಲ ...ರಸ್ಪರ ಮಾತಾಡಲು ಕುಳಿತೆವು. ದೊಡ್ಡ ...ೋಗುಣಿಗಳು ಮತ್ತು ರಾಶಿ ತಟ್ಟೆಗಳನ್ನು ...ೊಳೆದು ಹೈರಾಣಾದ ನಾಲ್ಕು ಜನ ಮಧ್ಯ ...ಯಸ್ಸಿನ ಹೆಣ್ಣು ಮಕ್ಕಳು ಬಂದು ಕುಳಿತರು. ...ರಗಟ್ಟಲೇ ಮನೆ ಮನೆ ತಿರುಗಿ ಕಾಳು ಕಡಿ ...ತ್ತು ಹಣವನ್ನು ಸಂಗ್ರಹಿಸಿದ ಅಕ್ಕಂದಿರು ತಮ್ಮ ...ಮೃದ್ಧ ಅನುಭವಗಳನ್ನು ಹಂಚಿಕೊಳ್ಳಲು ...ತ್ಸುಕರಾಗಿದ್ದರು. ಬಿಸಿಯೂಟದ ...ಯಂದಿರರು ಸಂಭ್ರಮದ ಇನ್ನೊಂದು ...ಸರಂತೆ ಉಲ್ಲಸಿತರಾಗಿ ಕೂತಿದ್ದರು. ಸಮ್ಮೇಳನ ...ಯಶಸ್ಸಿಗೆ ಹೆಚ್ಚು ಶ್ರಮಿಸಿದ್ದು ಮಹಿಳಾ ...ಂಗಾತಿಗಳು ಎಂದು ವಂದನಾರ್ಪಣೆಯ ...ಮಯದಲ್ಲಿ ಸಂಗಾತಿಗಳು ಹೇಳಿದ್ದು ...ನಪಾಯ್ತು. ಕಳೆದೆರಡು ವರ್ಷಗಳಿಂದ ...ಹಿಳೆಯರು ಮಹಿಳಾ ಶೌಚಾಲಯಕ್ಕಾಗಿ, ...ಉದ್ಯೋಗ ಖಾತ್ರಿ ಕಾಯ್ದೆ ಜಾರಿಗಾಗಿ ...ಂಘರ್ಷಾತ್ಮಕ ಹೋರಾಟ ಮಾಡಿದ್ದು ಹೌದು. ...ದರೆ ಸಿಪಿಐ(ಎಂ) ಪಕ್ಷದ ಸಮ್ಮೇಳನದ ...ಯಶಸ್ಸಿಗಾಗಿ ಹಗಲಿರುಳು ಶ್ರಮಿಸಲು ...ಮುಂದಾಗಿದ್ದು ಖಂಡಿತ ಎದೆ ತುಂಬಿ ಬರುವ ...ಂಗತಿಯೇ.

ಇಳಕಲ್ ಸೀರೆ ಉಟ್ಟ ನಡು ವಯಸ್ಸಿನ ...ಪೈರ್ಯಸ್ಥೆ ದ್ಯಾವಮ್ಮ ಮಕ್ಕಳು, ಮೊಮ್ಮಕ್ಕಳು, ...ೂಸೆ ಇರುವ ತುಂಬಿದ ಮನೆಯ ಒಡತಿ. ದುಡಿವ ವಯಸ್ಸಿನಲ್ಲಿ ಹಗಲಿರುಳು ದುಡಿದು ಈಗ ಮಗ ಮನೆಯ ಉಸ್ತುವಾರಿ ವಹಿಸಿ ತಾಯಿಯನ್ನು ನಿಶ್ಚಿಂತೆಗೊಳಿಸಿದ್ದಾನೆ. ಮೊಮ್ಮಕ್ಕಳನ್ನಾಡಿಸಿಕೊಂಡು ಮನೆಯ ಪಡಸಾಲೆಯಲ್ಲಿ ದಿನದೂಡಲು ಮನಸ್ಸಿಲ್ಲದ ದ್ಯಾವಮ್ಮ 'ಬಡವರ ಸಲುವಾಗಿ ದುಡಿವ ಪಾರ್ಟಿಗೆ ಕೆಲಸ ಮಾಡ್ತೀನ್ರೀ' ಅಂತ ಕೆಂಪು ಬಾವುಟದೊಂದಿಗೆ ಬಂದಿರುವಳು. ಈಗಾಗಲೇ ಗ್ರಾಮ ಪಂಚಾಯತ್‌ನ ಸದಸ್ಯೆಯಾದ ಸರಸ್ವತಿ ಮತ್ತು ಸಣ್ಣ ವಯಸ್ಸಿನವಳಾದರೂ ಪ್ರಬುದ್ಧ ಚಿಂತನೆಯ ಲಕ್ಷ್ಮೀಯೊಡಗೂಡಿ ದ್ಯಾವಮ್ಮ ಹಾಗೂ ಹತ್ತು ಜನ ಮಹಿಳೆಯರು ಸಭೆ ನಡೆಸಿ ನಿಧಿ ಸಂಗ್ರಹಕ್ಕೆ ಇಳಿದೇ ಬಿಟ್ಟರು. ಸರಸ್ವತಿಯ ಕುಟುಂಬ ಪೂರ್ತಿ ಬೆಂಬಲಿಸಿದ್ದು ಸಂತಸದ ವಿಷಯವೇ ಬಿಸಿಯೂಟದ ಅಕ್ಕ 'ನಮ್ಮಪ್ಪ ಅಲ್ಲ್ಯಾಕ, ಇಲ್ಲ್ಯಾಕ? ಅಂತ ಹಿಂದೇ ಬರವ್ಲು. ಆದ್ರ ಪಾರ್ಟಿ ಕೆಲಸಂದ್ರ ನನ ಉಸಿರಿದ್ದಂಗ, ಬ್ಯಾಡಂದರ ಬಿಡಂಗಿಲ್ಲಂಗೆ ಅಂದಿನ್ರಿ... ಸಿಪಿಐ(ಎಂ) ಪಾರ್ಟಿ ಹೋರಾಟ ಮಾಡ್ತಿದ್ದಿಲ್ಲಂದ್ರ ನಮ್ಮ 'ಬಿಸಿಯೂಟ' ಸಾವ್ಕಾರರಿಗೆ ಕೊಡ್ತಿದ್ದರು.. ನಾವೇ ನಾರಾ ನೆಮ್ಮದಿಲಿಂದ ಬದುಕ್ತಿದ್ದೀವಿ ಅಂದ್ರ ಅದಕ್ಕ ಪಾರ್ಟಿ ಕಾರಣ ಐತ್ರೀ..' ಅಂತ ಹೆಮ್ಮೆಯಿಂದ ಹೇಳುವಾಗ ಉಳಿದವರ ಕಣ್ಣಂಗಳದಲ್ಲಿ ಸ್ವಾಭಿಮಾನದ ಹೊಳಪಿತ್ತು. ನಾನವರಿಗೆ ಕೇಳಿದೆ, 'ರೊಕ್ಕ ಮತ್ತ ಧಾನ್ಯ ಸಂಗ್ರಹ ಮಾಡುವಾಗ ನಿಮ್ಮ ಅನುಭವವೇನು....?' ಆಗ ನೋಡಿ, ಒಂದು ಆಯಾಸವೇ ಇಲ್ಲದ ಕುಲುಕುಲು ನಗು ಅಲೆ ಅಲೆಯಾಗಿ ಹರಡಿತು. ಎಲ್ಲರಿಗೂ ಏನೆಲ್ಲ ಮಾತಾಡುವ ಉಮೇದು.

ನಸಿಕ್ಯಾಗ ಎದ್ದು

"ನಸಿಕ್ಯಾಗ ಎದ್ದು, ಬಡಬಡಾ ಮನಿ ಕೆಲ್ಸ ಮಾಡಿ, ಎಲ್ರೂ ಒಂದ್ ಕಡಿಗೆ ಸೇರ್ತಿದ್ದೇವು. ಕರಪತ್ರ ಮತ್ತ ಒಂದು ಕೆಂಪು ಬಾವುಟ ಎತ್ಕೊಂಡು ಮನಿ ಮನಿಗೆ ಹೋಗ್ತಿದ್ದೇವು. ಒಂದ್ ಮನಿಗಿ ಹೋದಾಗ ಆ ಮನಿಯಾಕಿ ಯಾರೋ ಭಿಕ್ಷಾ ಬೇಡವ್ರು ಬಂದಿರಬೇಕು ಅಂದುಕೊಂಡು ಅರ್ಧ ರೊಟ್ಟಿ ಹಿಡ್ಕೊಂಡು ಬಂದಳು" ನಾನು ನಡುವಿಗೆ ಬಾಯಿ ಹಾಕಿ ಕೇಳಿದೆ, "ನಿಮಗ ಸಿಟ್ ಬಂತೇನು...? ಅದಕ್ಕೆ ಅವರು ಹೇಳಿದರು. ನಗುತ್ತಲೇ, ಇಲ್ರೀ... ನಾವು ಆಕಿಗೆ ಸಹನೆಯಿಂದಲೇ ತಿಳಿಸಿ ಹೇಳಿದೆವು. ನಾವು ಸಹಾಯ ಕೇಳ್ತಿರಾದು ನಮ್ಮ ಸ್ವಂತಕ್ಕಲ್ಲ. ಎಲ್ಲ ತಾಲ್ಲೂಕಿನಿಂದ ಜನ ನಮ್ಮೂರಿಗೆ ಬರ್‍ತಾರ. ಅವರಿಗೆ ಊಟ-ತಿಂಡಿ ಮಾಡಿಸಿ ಅತಿಥಿ ಸತ್ಕಾರ ಮಾಡಾದು ನಮ್ಮ ಕರ್ತವ್ಯ, ಮತ್ತ ಅವ್ರೆಲ್ಲ ದುಡಿಯಾ ಮಂದಿ ಸಲುವಾಗಿ ಹೋರಾಟ ಮಾಡವ್ರು ಅಂತ ತಿಳಿಸಿ ಹೇಳಿದೆವು' ನಾನು ಕುತೂಹಲದಿಂದ ಕಣ್ಣರಳಿಸಿ ಕೇಳಿದೆ. 'ಆಮೇಲೆ'?

ಯಲ್ಲಮ್ಮ ಮುಂದುವರೆಸಿದಳು.

"ಮತ್ತೇನು... ನೂರರಾಗ ಎಪ್ಪತ್ತರಷ್ಟು ಮಂದಿ," ನೀವು ಚಲೋ ಕೆಲಸ ಮಾಡ್ತಿದ್ದಿರಿ. ತಗೋರಿ ನಮ್ದು ಹತ್ತ ರೂಪಾಯಿ ಅಂತ ರೊಕ್ಕ ಕೊಟ್ರು, ಎಷ್ಟೋ ಮನಿಯೊಳಗ ನಮಗ ರೊಕ್ಕ ಸಿಗಲಿಲ್ಲ. ಯಾಕಂದ್ರ ಆ ಹೆಣಮಕ್ಕಳ ಕೈಯಾಗ ರೊಕ್ಕ ಇರಲಿಲ್ಲ. ಆಗೆಲ್ಲ ಒಂದು ಹಿಡಿ ಅಕ್ಕಿ, ಜೋಳ, ಬೇಳಿ, ಸಜ್ಜಿ ಕೊಟ್ಟಾರ. ನಾವು ಜೊತಿಗೊಂದೊಂದು ಚೀಲ ತಗೊಂಡು ಹೋಗ್ತಿದ್ದೇವು. ಜನಾ ಏನ್ ಕೊಟ್ರೂ ನಾವು ಪಡಿತಿದ್ದೇವು".

"....ಜನ ನಮಗ ಸುಮ್ನೇ ಇಟ್ಟಿಲ್ಲ ಕೊಟ್ಟಿಲ್ಲ. ತಮ್ಮ ಕಷ್ಟಾನೂ ನಮ್ಮ ಮುಂದ ಹೇಳ್ಕೊಂಡಾರ. ಭಾಳ ಮಂದಿ ಬಡವ್ರು ಇದಾರ. ಅವ್ರಿಗಿ ರೇಷನ್ ಕಾರ್ಡಿಲ್ಲ. ವಾಸಕ್ಕ ಒಂದು ಚೆಂದಾನ ಮನೆ ಇಲ್ಲ. ಬೆಳೆದ ಮಕ್ಕಳಿಗೆ ನೌಕರಿ ಇಲ್ಲ. ಮತ್ತೆ ಕುಮಾರಸ್ವಾಮಿ ಸರ್ಕಾರ ಸಾರಾಯಿ ಬಂದ್ ಮಾಡ್ತೀವಿ ಅಂತ ಹೇಳಿ ಬಂದ್‌ನೂ ಮಾಡಿದ ಮ್ಯಾಲ ಕಷ್ಟ ತಪ್ಪಿಲ್ಲ. ಬದಲಿಗೆ ದುಪ್ಪಟ್ಟಾಗ್ಯಾದ ಅಂತೆಲ್ಲ ತಮ್ಮ ನೋವು ತೋಡಿಕೊಂಡಾರ...." ಸರಸ್ವತಿ ತುಂಬ ಗಂಭೀರತೆಯಿಂದ ಹೇಳುತ್ತಿದ್ದಳು. "ಯಾಕ? ಸಾರಾಯಿ ನಿಲ್ಲಸಿದ್ದಕ್ಕ ಹೆಣ್ಣು ಮಕ್ಕಳಿಗಿ ಖುಷಿ ಆಗಲಿಲ್ಲ..." ನಾನು ಕೇಳಿದೆ.

"ಇಲ್ಲ ಕಾಮ್ರೇಡ್, ಬಂದ್ ಮಾಡಿವಿ ಅಂತ ಪ್ರಚಾರ ತಗೊಂಡಾರ. ಖರೆ ಅಂದ್ರೆ, ಈಗ ಹಳ್ಳಿಯೊಳಗ ಬಾಟಲಿ ಮಾರ್‍ತಿದ್ದಾರ. ದುಬಾರಿದ್ದು, ಬಿಡಿಯಾಗಿನೂ ಮಾರ್‍ತಿದ್ದಾರ ಗ್ಲಾಸು, ಅರ್ಧಗ್ಲಾಸಿನಂತೆ. ಮೊದಲಾದ್ರ 15-20 ರೂಪಾಯಿ ಅಟೇ ಖರ್ಚಾಗ್ತಿತ್ತು. ಈಗ 50-60 ರೂಪಾಯಿ ಅಲ್ಲೇ ಹೋಗ್ತದ. ಹೆಣ್ಮಕ್ಕಳ ಕಷ್ಟ ಬಾಣಲಿಯಿಂದ ಬೆಂಕಿಗಿ ಬಿದ್ದಂಗ ಆಗ್ಯಾದ... ಇದನ್ನ ಹೆಂಗಾದ್ರೂ ನಿಲ್ಲಿಸ್ರಿ ಅಂತಾರ...." ಸರಸ್ವತಿ ಹೇಳುತ್ತಲೇ ಇದ್ದಳು. ಈ ಮಾತು ಸುಳ್ಳಲ್ಲ. ಜೆಡಿ(ಎಸ್) ಬಿಜೆಪಿಗಳು ಹಗಲು ಸುಳ್ಳಿನ ಸರಮಾಲೆ ಹೆಣೆದದ್ದು ಈಗ ನಿಚ್ಚಳವಾಗಿದೆ. ಮಹಿಳೆಯರ ಮತ ಕಸಿಯಲು ಸಾರಾಯಿ ಬಂದ್ ಅಂದರು. ಲಿಂಗಾಯತರ ಮತ ಕಸಿಯಲು ಮಠಾಧೀಶರ ಮಗ್ಗುಲಿಗೆ ಕೂತು ಯಡಿಯೂರಪ್ಪ ಹಣೆಗೆ ಢಾಳಾಗಿ ವಿಭೂತಿ ಪೂಸಿಕೊಳ್ಳುತ್ತಿದ್ದಾನೆ. ಬೊಕ್ಕಸ ಕೊಳ್ಳೆ ಹೊಡೆದು ಬೈಸಿಕಲ್ ಕೊಡುವ ನಾಟಕ. ಅಷ್ಟೇ ಯಾಕೆ ಪರಿಶಿಷ್ಟ ಜಾತಿ-ಪಂಗಡದ ಜನವಿಭಾಗವೇ ಅಧಿಕವಿರುವ ರಾಯಚೂರು ಜಿಲ್ಲೆಯ ರೈತ ಸಮುದಾಯವನ್ನು ದಿಕ್ ತಪ್ಪಿಸಲು ಲಿಂಗಸ್ಗೂರಲ್ಲಿ 'ರೈತ ಸಮಾವೇಶ' ಮಾಡಿದ ಬಿಜೆಪಿ, ರಾಜನಾಥಸಿಂಗ್ ಕೃಷಿ ಮಂತ್ರಿಯಾಗಿದ್ದಾಗ ರೈತರ ಆತ್ಮಹತ್ಯೆ ಮಾಡಿಕೊಂಡಿದ್ದು ಯಾರಿಗೆ ಗೊತ್ತಿಲ್ಲ...? ಆದರೂ ಜನರ ಕಣ್ಣಲ್ಲಿ ಮಣ್ಣೆರಚಲು ಛದ್ಮವೇಷದೊಂದಿಗೆ ಮತ್ತೆ ಮತ್ತೆ ಬರುತ್ತಲೇ ಇದ್ದಾರೆ. ಜನರ ನಡುವಿಗೆ ಹೋದಾಗ ಸತ್ಯಗಳೆಲ್ಲ ನಿಚ್ಚಳವಾಗಿ ಕಾಣುತ್ತವೆ. ಆಳುವ ವರ್ಗದ ಸುಳ್ಳು ಆಶ್ವಾಸನೆಗಳು, ದಗಲ್ಬಾಜಿ ದಂಧೆಗಳು ಜನಸಾಮಾನ್ಯರ ಬದುಕು ಹೇಗೆ ಘಾಸಿಗೊಳಿಸಿವೆ ಎಂಬುದು ಗೊತ್ತಾಗುತ್ತದೆ.

ಹೆಣ್ಣು ಮಕ್ಕಳು ತಮಗರಿವಿಲ್ಲದೆ ತುಂಬ ಮಹತ್ವದ ಸಂಗತಿಗಳನ್ನು ಅನಾವರಣಗೊಳಿಸುತ್ತಿದ್ದರು. ಇಂಥ ಹೋರಾಟ ಮಾಡುವ ನಿರ್ಣಯ ಕೈಗೊಂಡ ಸಿಪಿಐ(ಎಂ)ನ ಸಮ್ಮೇಳನಕ್ಕೆ ಈ ತಾಯಂದಿರು, ಸಂಗ್ರಹಿಸಿದ ನಿಧಿ-ಕಾಳು ಎಷ್ಟು ಗೊತ್ತೇ...? ಕೇವಲ ಐದು ದಿನಗಳಲ್ಲಿ ಎರಡು ಚೀಲ ಅಕ್ಕಿ, ಅರ್ಧ ಚೀಲ ಸಜ್ಜೆ, ಅರ್ಧ ಚೀಲ ಜೋಳ, 10 ಕೆ.ಜಿ.ಬೇಳೆ, ಒಂದು ಸಾವಿರ ರೂಪಾಯಿ! ದುಡಿವ ಜನರಿಗೆ ನಮ್ಮ ಸಂದೇಶ ತಲುಪಿಸಿ ಸಂಗ್ರಹಿಸಿದ ಈ ಮೊತ್ತ ಸಿಪಿಐ(ಎಂ) ಪಕ್ಷದ ಘನತೆ ಹೆಚ್ಚಿಸಿದೆ. ನಿಜದ ನೆಲೆ ಇದೇ ಅಲ್ಲವೇ? ಈ ಮಹಿಳಾ ಸಂಗಾತಿಗಳಿಗೊಂದು ಲಾಲ್‌ಸಲಾಂ ಹೇಳಲೇಬೇಕು.

'ಹಸಿವಿಗನ್ನುವನಿಕ್ಕಿ ವಿಷವನಿಳುಹುವ' ಸಿಪಿಐ(ಎಂ) ಎಂಬ ಗಾರುಡಿಗನ ಸಿದ್ಧಾಂತದ ಬಾವುಟವೆತ್ತಿ ಸಂಗಾತಿಗಳು ಮೆರವಣಿಗೆ ಹೊರಟರು. ಸಂಭ್ರಮದಿಂದ ಮಹಿಳಾ ಸಂಗಾತಿಗಳು ಇನ್‌ಕ್ವಿಲಾಬ್ ಜಿಂದಾಬಾದ್ ಹೇಳುತ್ತಿದ್ದರು.

ಹ್ಹ...ಹ್ಹಾ...ಹ್ಹಾ...

ಹೀಗೊಂದು ಬುಶ್ ಜೋಕು

ಐದು ಪ್ರಶ್ನೆಗಳು

ಬುಶ್ ಒಂದು ಪ್ರೈಮರಿ ಸ್ಕೂಲ್ ಗೆ ಹೋಗಿದ್ದರಂತೆ. ಇರಾಕ್ ಯುದ್ಧದ ಬಗ್ಗೆ ಭಾಷಣ ಮಾಡಲು. ಭಾಷಣದ ನಂತರ ಪ್ರಶ್ನೋತ್ತರ ಇತ್ತಂತೆ. ಒಬ್ಬ ಹುಡುಗ ಕೈ ಎತ್ತಿದ. ಬುಶ್ ಕೇಳಿದರು 'ಏನಪ್ಪಾ ನಿನ್ನ ಹೆಸರು?'. ಬಾಬ್ ಎಂದ ಅವನು.

'ನನ್ನದು ಮೂರು ಪ್ರಶ್ನೆಗಳಿವೆ.

ವಿಶ್ವ ಸಂಸ್ಥೆಯ ಬೆಂಬಲವಿಲ್ಲದೆ ಇರಾಕ್ ಮೇಲೆ ಆಕ್ರಮಣ ಮಾಡಿದ್ದು ಯಾಕೆ ?

ಅಲ್ ಗೋರ್ ಗೆ ಹೆಚ್ಚು ಓಟು ಸಿಕ್ಕಿದಾಗ ನೀವು ಅಧ್ಯಕ್ಷರಾದದ್ದು ಹೇಗೆ ?

ಒಸಾಮಾ ಬಿನ್ ಲಾಡೆನ್ ಗೆ ಏನಾಯಿತು ?' ಎಂದ ಬಾಬ್.

ಆಗ ಸ್ಕೂಲ್ ಬೆಲ್ ಆಯಿತು. ಇಂಟರವಲ್ ನಂತರ ಪುನಃ ಸೇರೋಣ ಅಂದರಂತೆ ಬುಶ್. ಇಂಟರವಲ್ ನಂತರ 'ಹಾಂ..ಎಲ್ಲಿದ್ದೀವಿ ..ಪ್ರಶ್ನೋತ್ತರ ತಾನೆ ? ಯಾರದಾದರೂ ಪ್ರಶ್ನೆ ಇದೆಯಾ ?' ಎಂದರು. ಬೇರೊಬ್ಬ ಹುಡುಗ ಕೈ ಎತ್ತಿದ. ಬುಶ್ ಕೇಳಿದರು 'ಏನಪ್ಪಾ ನಿನ್ನ ಹೆಸರು ?'. ಸ್ಟೀವ್ ಎಂದ ಅವನು. 'ಹಾಂ..ಏನಪ್ಪಾ ನಿನ್ನ ಪ್ರಶ್ನೆ?' ಬುಶ್ ಎಂದರು.

'ನನ್ನದು ಐದು ಪ್ರಶ್ನೆಗಳಿವೆ.

ವಿಶ್ವ ಸಂಸ್ಥೆಯ ಬೆಂಬಲವಿಲ್ಲದೆ ಇರಾಕ್ ಮೇಲೆ ಆಕ್ರಮಣ ಮಾಡಿದ್ದು ಯಾಕೆ ?

ಅಲ್ ಗೋರ್ ಗೆ ಹೆಚ್ಚು ಓಟು ಸಿಕ್ಕಿದಾಗ ನೀವು ಅಧ್ಯಕ್ಷರಾದದ್ದು ಹೇಗೆ?

ಒಸಾಮಾ ಬಿನ್ ಲಾಡೆನ್ ಗೆ ಏನಾಯಿತು?

ಇಂಟರ್‌ವಲ್ ಬೆಲ್ 20 ನಿಮಿಷ ಬೇಗ ಯಾಕಾಯಿತು ?

ಮತ್ತೆ ಬಾಬ್ ಎಲ್ಲಿ ?'

ಕರ್ನಾಟಕದ ಮಾಧ್ಯಮ ಕ್ಷೇತ್ರದ ಬೆಳವಣಿಗೆ

ವೀಕ್ಷಕರನ್ನು ಹುಡುಕುತ್ತಾ ಬಂಡವಾಳಿಗರ ಬಂಧನದಲ್ಲಿ

ಬರತ್‌ಚಂದ್ರ

ಹೊಸ ಹೊಸ ಟಿ.ವಿ. ಚಾನೆಲ್‌ಗಳು, ಪತ್ರಿಕೆಗಳು ಆರಂಭಗೊಳ್ಳುತ್ತಾ ಹೆಚ್ಚು ಹೆಚ್ಚು ವೀಕ್ಷಕರನ್ನು ತಲುಪುತ್ತಿರುವುದು ಸ್ವಾಗತಾರ್ಹವೇ ಆದರೂ ಈ ಮಾಧ್ಯಮಗಳ ಧೋರಣೆಗಳು ಜನವಿರೋಧಿ ದೃಷ್ಟಿ ಪ್ರಶ್ನಾರ್ಹವಾಗಿದೆ.

ಮಾಧ್ಯಮ ಕ್ಷೇತ್ರದಲ್ಲಿ ಇತ್ತೀಚಿನ ಎರಡು-ಮೂರು ವರ್ಷಗಳ ಬೆಳವಣಿಗೆ ಬಹಳ ವೇಗದ್ದು ಮತ್ತು ಗಮನಾರ್ಹ ವಾದದ್ದು. ಕರ್ನಾಟಕದಲ್ಲಿ ಮಾತ್ರವಲ್ಲ, ಇಡೀ ದೇಶ ಮತ್ತು ಜಗತ್ತಿನಲ್ಲಿ ಕೂಡಾ. ಎಲ್ಲಾ ಮಾಧ್ಯಮಗಳ ವಿಸ್ತಾರ - ಸಂಖ್ಯೆಯಲ್ಲಂತೂ - ಕಣ್ಣಿಗೆ ಹೊಡೆದು ಕಾಣುವಂಥದ್ದು. ಅದೇ ರೀತಿ ಮಾಧ್ಯಮಗಳಿಗೆ ಜನ ಮಾರು ಹೋದ ಅಥವಾ ಅದರ 'ಬಳಕೆದಾರರಾದ' ರೀತಿ ಸಹ. ಇದು ಹಿಂದಿನಿಂದ ಪ್ರಬಲವಾಗಿದ್ದ ಮುದ್ರಣ (ದಿನ/ವಾರ ಪತ್ರಿಕೆಗಳು, ಮ್ಯಾಗಝೀನ್ ಗಳು) ಮತ್ತು ಎಲೆಕ್ಟ್ರಾನಿಕ್ (ರೇಡಿಯೋ, ಟೀವಿ) ಮಾಧ್ಯಮಗಳ ಮಟ್ಟಿಗೆ ಮಾತ್ರ ನಿಜವಲ್ಲ. ಹೊಸ ಮಾಧ್ಯಮಗಳಾಗಿ ಹೊಮ್ಮಿರುವ - ವೆಬ್ ಪತ್ರಿಕೆ, ವೆಬ್ ಸೈಟುಗಳು, ಬ್ಲಾಗು - ಇವುಗಳ ಬಗೆಗೂ ನಿಜ. ಎಲ್ಲಾ ಮಾಧ್ಯಮಗಳಲ್ಲೂ ಹೊಸ ಪ್ರಕಾಶನಗಳು ಮಾತ್ರವಲ್ಲ, ಅವುಗಳ ಒಟ್ಟು ಪ್ರಸಾರದಲ್ಲೂ ಹೆಚ್ಚಳ ಕಂಡಿದೆ. ಈ ಅವಧಿಯಲ್ಲಿ ಭಾರೀ ವೇಗದ ಬೆಳವಣಿಗೆಗಳು ಕಂಡದ್ದು ಎಲೆಕ್ಟ್ರಾನಿಕ್ ಮಾಧ್ಯಮಗಳಲ್ಲಿ. ನಗರ ಪ್ರದೇಶಗಳಲ್ಲಿ ಎಫ್.ಎಂ. ರೇಡಿಯೋ ವೇಗವಾಗಿ ಬೆಳೆದಿದೆ. ಕೇವಲ ಎರಡು ಇದ್ದ ಬೆಂಗಳೂರಿನ ಎಫ್.ಎಂ. ರೇಡಿಯೋ ಸ್ಟೇಶನ್ ಗಳ ಸಂಖ್ಯೆ ಆರು-ಏಳಕ್ಕೆ ಜಿಗಿದಿದೆ. ನಗರದ ಯುವ ಜನರನ್ನು ಗಮನಾರ್ಹವಾಗಿ ಸೆಳೆದಿದೆ. ಆಟೋ-ಬಸ್ಸು ಸೇರಿದಂತೆ ಎಲ್ಲಾ ವಾಹನಗಳಲ್ಲಿ ಎಲ್ಲೆಲ್ಲೂ ಎಫ್.ಎಂ. ರೇಡಿಯೋ ಸಂಗೀತ ಮತ್ತು ರೇಡಿಯೋ ಗೆಳೆಯ-ಗೆಳತಿಯರ ಅವಿರತ ಹರಟೆಯು ಕೊರೆತ ಕೇಳಬರುತ್ತದೆ. ಹೆಚ್ಚಿನ ಮೊಬೈಲುಗಳಲ್ಲೂ ಎಫ್.ಎಂ. ರೇಡಿಯೋ ಲಭ್ಯವಾಗಿದ್ದು ಅದರ ಜನಪ್ರಿಯತೆ, ಸಾರ್ವತ್ರಿಕತೆಗೆ ಕುಮ್ಮಕ್ಕು ಸಿಕ್ಕಿದೆ. ಮೂರು ಹೊಸ ಕನ್ನಡ ಟೀವಿ ವಾಹಿನಿಗಳು (ಟೀವಿ-9, ಝಿ-ಕನ್ನಡ, ಕಸ್ತೂರಿ) ಪ್ರಸಾರ ಆರಂಭಿಸಿವೆ. ಇದರಿಂದ ಹೊಸ ಪೈಪೋಟಿ ಮತ್ತು ಬದಲಾವಣೆಗಳು ಬಂದಿವೆ.

ಟೀವಿ ವಾಹಿನಿಗಳ ತಾಳಕ್ಕೆ ಕುಣಿದ ಪತ್ರಿಕೆಗಳು

ಟೈಮ್ಸ್ ಆಫ್ ಇಂಡಿಯಾ ಗುಂಪು ಕನ್ನಡ ದೈನಿಕ ಆರಂಭಿಸಿದ್ದು, ತಮ್ಮ ಇಂಗ್ಲೀಷ್ ಪತ್ರಿಕೆಯ ಕನ್ನಡ ಭಾಷಾಂತರ ಕಾಪಿಯಂತೆ ತಂದು ವೇಗವಾಗಿ ದೊಡ್ಡ ಪ್ರಸಾರ ಪಡೆಯಲು ಮಾಡಿದ ಪ್ರಯತ್ನ ವಿಫಲವಾದದ್ದು, ಆದರೂ ಕನ್ನಡದ ಅತಿ ದೊಡ್ಡ ದೈನಿಕವಾಗುವ ಛಲ ಬಿಡದೆ 'ವಿಜಯ ಕರ್ನಾಟಕ' ಕೊಂಡುಕೊಂಡದ್ದು - ಈ ಅವಧಿಯಲ್ಲಿ ಪತ್ರಿಕೆಗಳ ಕ್ಷೇತ್ರದಲ್ಲಿ ಪ್ರಮುಖ ಬೆಳವಣಿಗೆ. ಲಂಕೇಶ್ ಮಕ್ಕಳ ನಡುವೆ ನಕ್ಸಲ್-ಪರ ಸಂಪಾದಕೀಯ ನೀತಿ ಬಗ್ಗೆ ಭಿನ್ನಾಭಿಪ್ರಾಯ ತಲೆದೋರಿ ಲಂಕೇಶ್ ಪತ್ರಿಕೆ ಎರಡಾದದ್ದು ಇನ್ನೊಂದು ಗಮನಾರ್ಹ ಬೆಳವಣಿಗೆ. ಸಂಜೆ-ಮಧ್ಯಾಹ್ನದ ಪತ್ರಿಕೆಗಳ ಪ್ರಕಾಶನ - ವಿಸ್ತರಣೆ ಹೊಸ ಬೆಳವಣಿಗೆ. ಆದರೂ ಹೊಸ ದಿನ-ವಾರಪತ್ರಿಕೆಗಳ ಹುಟ್ಟುವ ಮತ್ತು ಪ್ರಸಾರ ಹೆಚ್ಚಳದ ವೇಗ ಕಡಿಮೆಯಾಗಿದೆ. ಒಟ್ಟಾರೆಯಾಗಿ ಮುದ್ರಿತ ಮಾಧ್ಯಮಕ್ಕಿಂತ ಎಲೆಕ್ಟ್ರಾನಿಕ್ ಮಾಧ್ಯಮದ ವಿಸ್ತಾರದ ವೇಗ ಮತ್ತು ಪ್ರಭಾವ ಹೆಚ್ಚಾಗಿದೆ.

ಸುದ್ದಿ ಮತ್ತು ಪ್ರಸಕ್ತ ವಿದ್ಯಮಾನಗಳು ಯಾವುದೇ ಮಾಧ್ಯಮದಲ್ಲಾಗಲಿ (ಪತ್ರಿಕೆ, ಟೀವಿ ವಾಹಿನಿ, ವೆಬ್ ತಾಣ) ಅತ್ಯಂತ ಹೆಚ್ಚಿನ ಆಸಕ್ತಿ ಹುಟ್ಟಿಸುವ, ಗಮನ ಸೆಳೆಯುವ ಅಂಶವಾಗಿರುವುದು - ಇನ್ನೊಂದು ಬೆಳವಣಿಗೆ. ವೈವಿಧ್ಯಮಯ ಮನರಂಜನಾ ಕಾರ್ಯಕ್ರಮ ಇರುವ ಟೀವಿಯಲ್ಲೂ ಅತ್ಯಂತ ಹೆಚ್ಚು ನೋಡುಗರನ್ನು ಆಕರ್ಷಿಸುವಂಥದು - ಸುಮಾರು ಶೇ.31 - ಸುದ್ದಿ ಮತ್ತು ಪ್ರಸಕ್ತ ವಿದ್ಯಮಾನಗಳೇ ಎಂದು ಪ್ರೇಕ್ಷಕರ ಕಳೆದ ವಾರ್ಷಿಕ ಸಮೀಕ್ಷೆ ತಿಳಿಸಿದೆ. ಸುದ್ದಿಗೆ ಮೀಸಲಾದ ಚಾನೆಲ್ ಟೀವಿ ಚಾನೆಲ್ ಗಳು ಅತ್ಯಂತ ವೇಗವಾಗಿ ಬೆಳೆದಿವೆ (ಉದಾ: ಕರ್ನಾಟಕದಲ್ಲಿ ಟೀವಿ-9). ಭಾರತೀಯ ಭಾಷೆಗಳ ದೈನಿಕಗಳು ಮುದ್ರಣ ಮಾಧ್ಯಮದಲ್ಲಿ ಅತ್ಯಂತ ದೊಡ್ಡ ಹೆಚ್ಚಳ ಕಂಡ ವಿಭಾಗ. ಮಾಧ್ಯಮಗಳ ವಿಸ್ತಾರ, ಸಾಕ್ಷರತೆಯ ವಿಸ್ತಾರ - ಮುಖ್ಯವಾಗಿ ಸಣ್ಣ ಪಟ್ಟಣಗಳು ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ತೀವ್ರ ರಾಜಕೀಯಕರಣಕ್ಕೆ ಕುಮ್ಮಕ್ಕು ಕೊಟ್ಟಿದೆ. ಎಲ್ಲಾ ಪ್ರದೇಶಗಳಲ್ಲಿ ಮಾಧ್ಯಮಗಳಲ್ಲಿ ಆಸಕ್ತಿ, ವಿಸ್ತಾರಕ್ಕೂ ಕಾರಣವಾಗಿದೆ. ಇತ್ತೀಚಿಗಿನ ರಾಜ್ಯದ ರಾಜಕೀಯ ಬಿಕ್ಕಟ್ಟು ಸಹ ಇದಕ್ಕೆ ಪೂರಕವಾಯಿತು. ದೃಶ್ಯ ಮಾಧ್ಯಮಗಳು ಒಟ್ಟಾರೆಯಾಗಿ ಮಾಧ್ಯಮದ ಧೋರಣೆ, ಶೈಲಿ, ಧಾಟಿ, ಸಾರ ನಿರ್ಧರಿಸುತ್ತಾ ಎಲ್ಲಾ ಮಾಧ್ಯಮಗಳ ಪ್ರಧಾನ ಧಾರೆಯಾಗಿರುವುದು ಪ್ರಮುಖ ಬೆಳವಣಿಗೆ. ಸುದ್ದಿ ಮತ್ತು ಪ್ರಸಕ್ತ ವಿದ್ಯಮಾನಗಳಲ್ಲೂ ಹಿಂದೆ ದಿನ-ವಾರ ಪತ್ರಿಕೆಗಳಿಗೆ ಇದ್ದ ಪ್ರಭಾವ ಮತ್ತು ಯಜಮಾನಿಕೆ ಹೋಗಿ, ಅವು ಟೀವಿಯ ಹಿಂಬಾಲಕ ಆಗುವ ಸ್ಥಿತಿ ಬಂದಿದೆ.

ಸುದ್ದಿಯೇ ಮನರಂಜನೆ,
ಮನರಂಜನೆಯೇ ಸುದ್ದಿ!



ಸಂಪಾದಕೀಯ ಪುಟ ಸೇರಿದಂತೆ ಎಲ್ಲಾ ಪುಟಗಳೂ (ಜಾಹೀರಾತನ್ನು ಮೀರಿ) ಮಾರುಕಟ್ಟೆಯ ನಿಯಂತ್ರಣಕ್ಕೆ ಬಂದಿವೆ. ಎಲ್ಲಾ ಪುಟಗಳು ಒಂದಲ್ಲ ಒಂದು ರೀತಿಯ ಮಾರಾಟಕ್ಕಿವೆ. ಇದು ಟೀವಿಯ ಮಟ್ಟಿಗೂ ನಿಜ.

ಹೊಸ ಫಿಲಂ ಬಿಡುಗಡೆಯಾಗುವಾಗ ಹಲವು ದಿನಗಳ ಕಾಲ ಅದರ ಜಾಹೀರಾತು ಅಲ್ಲದೆ ಸುದ್ದಿಯಲ್ಲೂ ಅದರ ನಟ-ನಟಿಯರು, ನಿರ್ದೇಶಕರು ಇತ್ಯಾದಿಯಾಗಿ ದೊಡ್ಡ ರೀತಿಯಲ್ಲಿ ಕಾಣಿಸಿಕೊಳ್ಳುವುದು ಇದಕ್ಕೆ ಉದಾಹರಣೆ. ಯಾವುದು ಜಾಹಿರಾತು, ಯಾವುದು ಸುದ್ದಿ ಅಥವಾ ಕಾರ್ಯಕ್ರಮ ಅಂತ ಸಂದೇಹ ಬರುವಷ್ಟು ಇದು ಹಬ್ಬಿದೆ. ಯಾವುದು ಸುದ್ದಿ ಎನ್ನುವುದರಲ್ಲೂ ತೀವ್ರ ಬದಲಾವಣೆಯಾಗಿದೆ. ಪ್ರಸಿದ್ಧರ- ಶ್ರೀಮಂತರ ಜೀವನ ವೈಭವ, ಖಾಸಗಿ ಬದುಕಿನ (ಪ್ರೇಮ, ವಿರಸ, ಡೈವೋರ್ಸು) ವಿವರಗಳು, ಫ್ಯಾಶನ್ ಪರೇಡ್ ಈಗ ದೊಡ್ಡ ಸುದ್ದಿ. ರೈತರ ಪ್ರತಿಭಟನೆ-ಧರಣಿ ಸುದ್ದಿಯಾಗುವುದು ಟ್ರಾಫಿಕ್ ಜಾಮ್ ಅಥವಾ ಹಿಂಸೆ ನಡೆದಾಗ ಮಾತ್ರ. ಆಗಲೂ ರೈತರು ಯಾಕೆ ಪ್ರತಿಭಟನೆ ಮಾಡುತ್ತಿದ್ದರು ಎಂಬುದು ಸುದ್ದಿ ಅಲ್ಲ.

ಸುದ್ದಿಯ (ಅಥವಾ ಯಾವುದೇ ಕಾರ್ಯಕ್ರಮದ) ಸಾರಕ್ಕಿಂತ ಅದನ್ನು ಆಕರ್ಷಕ ರೀತಿಯಲ್ಲಿ ಹೇಳುವುದಕ್ಕೆ ಒತ್ತು. ಸುದ್ದಿಯ ರಾಜಕೀಯ-ಸಾಮಾಜಿಕ ಸಾರ ತೆಗೆದು 'ಮನರಂಜನೆ'ಯಾಗಿಸಲಾಗಿದೆ. ಸುದ್ದಿ ಈಗ ದೊಡ್ಡ ಮನರಂಜನೆ. ಕ್ರೈಮ್, ಗ್ಲಾಮರ್ ಸುದ್ದಿಗಳು ಮಾತ್ರವಲ್ಲ, ಎಲ್ಲಾದರಲ್ಲೂ ರೋಚಕಗೊಳಿಸುವುದು ಮತ್ತು ಸಂಭ್ರಮೀಕರಣಗಳ ಅತಿರೇಕ 'ಅನಿವಾರ್ಯ'. ಅದು ಭಯೋತ್ಪಾದಕರ ಬಾಂಬ್ ದಾಳಿಯಾಗಿರಲಿ, ಗಂಭೀರ ರಾಜಕೀಯ ಬೆಳವಣಿಗೆ ಆಗಿರಲಿ. ತಾರಾ ಮದುವೆ ಆಗಲಿ. ಪ್ರತಿ ನಿಮಿಷ, 24 ಗಂಟೆ, ಏಳೂ ದಿನ ಏನಾದರೂ ರೋಚಕತೆ, ಸಂಭ್ರಮ ಇರಲೇಬೇಕು. ಇಲ್ಲದಿದ್ದರೆ ಅದನ್ನು ಇವರೇ 'ಸೃಷ್ಟಿಸಲೂ' ಹಿಂಜರಿಯುವುದಿಲ್ಲ. ಈ ಎಲ್ಲದರ ಭರಾಟೆಯಲ್ಲಿ ಸುದ್ದಿಯ ಎಲ್ಲಾ ಮಗ್ಗಲುಗಳ ಪರಿಚಯ, ಆ ಬಗ್ಗೆ ವಿಶ್ಲೇಷಣೆ, ಸಮಗ್ರ ಚಿತ್ರಣದ ಪ್ರಶ್ನೆಯೇ ಇಲ್ಲ.

'ಮೀಸಲಾತಿ-ವಿರೋಧ ಸಮಾನತೆಗೆ ಹೋರಾಟ'

ಅಧಿಕಾರರೂಢ ಜೆಡಿಎಸ್-ಬಿಜೆಪಿ ಕೂಟದ ಬಿಕ್ಕಟ್ಟನ್ನು 'ಬಿಜೆಪಿಗೆ ಅಧಿಕಾರ ಹಸ್ತಾಂತರದ' ಪ್ರಕರಣವಾಗಿಸಿ, ಮಾಧ್ಯಮಗಳು ಅದರಲ್ಲೂ ಟೀವಿ ವಾಹಿನಿಗಳು ಪ್ರಸ್ತುತ ಪಡಿಸಿದ ರೀತಿ ಅವು ಮುಟ್ಟಿರುವ ಪಾತಾಳ ತಳದ ಸೂಚನೆ ನೀಡುತ್ತವೆ. ಈ ಬಿಕ್ಕಟ್ಟಿನ 'ಸರ್ಕಸ್' ಮತ್ತು 'ಪ್ರಹಸನ' ರೀತಿಯ ಕವರೇಜ್ ನಲ್ಲಿ ಅಸಹ್ಯಕರ ಪೈಪೋಟಿ ನಡೆಯಿತು. ಅದನ್ನು ಎಂದೂ ಮುಗಿಯದ ಧಾರಾವಾಹಿಯಂತೆ ಬಿಂಬಿಸಿದವು. ದೃಶ್ಯ ಮಾಧ್ಯಮದ ತಾಳಕ್ಕೆ ಎಲ್ಲಾ ಮಾಧ್ಯಮಗಳು ಕುಣಿದವು. ಭಾನಾಮತಿ, ನಿಗೂಢ ರಹಸ್ಯ-ಪವಾಡಗಳ ಬಗೆಗಿನ ಟೀವಿ ಧಾರಾವಾಹಿಗಳು ರೋಚಕತೆ-ಸಂಭ್ರಮೀಕರಣಗಳ ಮೇರೆ ಮೀರಿ ಅತ್ಯಂತ ಅವೈಜ್ಞಾನಿಕ ದೃಷ್ಟಿಕೋನ ಹರಡುವಲ್ಲಿ ತಲ್ಲೀನವಾಗಿವೆ. ಈ ಧಾಟಿ ಪತ್ರಿಕೆಗಳಿಗೂ ಹಬ್ಬಿದೆ. ಒಟ್ಟಾರೆಯಾಗಿ ಓದುಗ/ನೋಡುಗರ ಪೆದ್ದೀಕರಣಕ್ಕೆ (dumbing down) ಮಾಧ್ಯಮಗಳು ಭಗೀರಥ ಪ್ರಯತ್ನ ನಡೆಸಿವೆ.

ಆಳರಸರಿಗೆ ಪ್ರಿಯವಾದ ದೃಷ್ಟಿಕೋನವೊಂದೇ ಸರಿಯಾದ್ದು, ಅದರಲ್ಲೂ ಅತ್ಯಂತ ಜನವಿರೋಧಿ, ಪ್ರಜಾಸತ್ತಾತ್ಮಕವಲ್ಲದ ಪ್ರತಿಗಾಮೀ ಧೋರಣೆಯನ್ನು ಅತ್ಯಂತ ಸಹಜ ಎಂದು ಬಿಂಬಿಸುವ ಧೋರಣೆ ಬಲವಾಗಿದೆ. ದೆಹಲಿಯ ಮೆಡಿಕಲ್ ಇನಸ್ಟಿಟ್ಯೂಟನಲ್ಲಿ ನಡೆದ ಮೀಸಲಾತಿ-ವಿರೋಧಿ ಚಳುವಳಿ ಅದಕ್ಕೆ ದೇಶದಲ್ಲಿ ದೊರೆತ 'ಬೆಂಬಲ'ವನ್ನು, 'ಸಮಾನತೆಗೆ ಹೋರಾಟ' ಎಂದು ಭಾರೀ ಸಂಭ್ರಮದಿಂದ ಯಾವುದೇ ಮುಲಾಜಿಲ್ಲದೆ ವಸ್ತುನಿಷ್ಠ ದೃಷ್ಟಿಕೋನವಿಲ್ಲದೆ ಬೆಂಬಲಿಸಿದ ಮಾಧ್ಯಮಗಳ ವೈಖರಿ ಈ ಅವಧಿಯ ಅತ್ಯಂತ ಆತಂಕಕಾರಿ ಬೆಳವಣಿಗೆ. ಆಳರಸರ ಮತ್ತೂ ಈ ಮಾಧ್ಯಮಗಳ ಒಡೆಯರ ಮೂಗಿಗೆ ನೇರವಿಲ್ಲದ ಯಾವುದೇ ದೃಷ್ಟಿಕೋನದ ಬಗ್ಗೆ ಒಂದೋ ಜಾಣ ಕಿವುಡು-ಮೌನ ಅಥವಾ ಏಕಪಕ್ಷೀಯ ದಾಳಿ-ಟೀಕೆ ಸರ್ವೇ ಸಾಮಾನ್ಯವಾಗಿದೆ. ವಸ್ತುನಿಷ್ಠ ಚರ್ಚೆ ಹಿಂದೆ

ಪುಟ 12 ಕ್ಕೆ

ಸೈಬರ್ ಲೋಕದಲ್ಲಿ ಕನ್ನಡದ ಕಲರವ

ಇಂಟರನೆಟ್ ನಲ್ಲಿ ಕನ್ನಡ ಪ್ರಕಾಶನಗಳು ಇದೇ ಅವಧಿಯಲ್ಲಿ ದೊಡ್ಡ ರೀತಿಯಲ್ಲಿ ಕಾಣಿಸಿಕೊಂಡಿವೆ. ಯಾಹೂ, ರಿಡಿಫ್, ಸಮಾಚಾರ್, ವೆಬ್ ದುನಿಯಾ, ಭಾಷಾ ಇಂಡಿಯಾ ಮುಂತಾದ ರಾಷ್ಟ್ರೀಯ-ಜಾಗತಿಕ ಪ್ರಮುಖ ವೆಬ್ ಸೈಟುಗಳ ಕನ್ನಡ ಅವತರಣಿಕೆ ಬಂದಿವೆ. ಅಲ್ಲದೆ ಕನ್ನಡದಲ್ಲಿ ಹಲವು ವೆಬ್ ಪತ್ರಿಕೆಗಳು, ಸಾಹಿತ್ಯ-ಸಂಸ್ಕತಿ, ವಿಶಿಷ್ಟ ವಿಷಯಗಳಿಗೆ ಮೀಸಲಾದ ವೆಬ್ ತಾಣಗಳು (ಉದಾ: ಸಂಪದ, ದಟ್ಸ್-ಕನ್ನಡ, ವಿಶ್ವಕನ್ನಡ, ಕಣ್ಣುಡಿ) ಆರಂಭವಾಗಿ ವಿಸ್ತಾರಗೊಂಡು ಓದುಗರನ್ನು ಆಕರ್ಷಿಸುತ್ತಿವೆ. ಕನ್ನಡ ಮತ್ತು ಇತರ ಭಾಷೆಗಳ (ಇಂಗ್ಲೀಷ್, ಹಿಂದಿ ಇತ್ಯಾದಿ) ಡಿಕ್ಷನರಿಗಳು, ಪದಕೋಶ, ವಿಕಿಪೀಡಿಯಾ (ಓದುಗರೇ ಬರೆಯುತ್ತಾ ಬೆಳೆಯುತ್ತಾ ಹೋಗುವ ಇಂಟರ್ ನೆಟ್ ವಿಶ್ವಕೋಶ), ಕನ್ನಡದಲ್ಲಿ ಇಂಟರನೆಟ್ ನಲ್ಲಿ ಹುಡುಕುವಿಕೆ (ಗೂಗಲ್, ಕ್ವಿಲ್ ಪ್ಯಾಡ್) - ಮುಂತಾದ ಬೆಳವಣಿಗೆಗಳು ಸೈಬರ್ ಲೋಕದಲ್ಲೂ ಕನ್ನಡದ ಕಲರವ ಕೇಳುವಂತೆ ಮಾಡಿದೆ.

ಹಲವಾರು ಬ್ಲಾಗುಗಳು (ದಿನಾ ಜಗತ್ತಿನ ಆಗು-ಹೋಗುಗಳಿಗೆ ಸ್ಪಂದಿಸುವ, ತಮ್ಮ ಹಸಿ-ಬಿಸಿ ಅನ್ನಿಸಿಕೆ-ಅನುಭವಗಳನ್ನು ಇಂಟರನೆಟ್ ನಲ್ಲಿ ಯಥಾವತ್ತಾಗಿ ಹಂಚಿಕೊಳ್ಳುವ, ಸಂಪಾದಕರ ಕತ್ತರಿಗೆ ಅವಕಾಶ ಇರದ ಸ್ವತಂತ್ರ ಬರವಣಿಗೆ-ಪ್ರಕಾಶನದ ಹೊಸ ಪ್ರಕಾರ). ಸಂಪದ ಆರಂಭಿಸಿದ 'ಪ್ಲಾನೆಟ್ ಕನ್ನಡ' ತಾಣ ಇದಕ್ಕೆ ದೊಡ್ಡ ರೀತಿಯಲ್ಲಿ ಕುಮ್ಮಕ್ಕು ಕೊಟ್ಟಿದ್ದು ಕನ್ನಡ ಬ್ಲಾಗುಗಳ ಮಹಾಪೂರವೇ ಬಂದಿದೆ. ಯು.ಆರ್. ಅನಂತಮೂರ್ತಿ, ಕೆ.ವಿ.ನಾರಾಯಣ ಅವರಂಥ ಹಿರಿಯ ಲೇಖಕರ (ಉದಾ: ಋಜುವಾತು, ಪದಗತಿ) ಬ್ಲಾಗುಗಳು ಮತ್ತು ಹಲವು ಯುವ ಲೇಖಕರು ಬರೆಯುವ ಬ್ಲಾಗು-ಕೂಟಗಳು (ಉದಾ: ಅವಧಿ) ಇದಕ್ಕೆ ಉದಾಹರಣೆಗಳು. ಬ್ಲಾಗುಗಳು ವಿಕಸಿತ ದೇಶಗಳಲ್ಲಿ ದೈತ್ಯ ಮಾಧ್ಯಮಗಳಿಗೆ ಸವಾಲು ಹಾಕುವಷ್ಟು ಬದಲಿ ಮಾಧ್ಯಮಗಳಾಗಿ ಬೆಳೆದಿವೆ. ಈ ದೇಶಗಳಲ್ಲಿ ಸುದ್ದಿ-ವಿಶ್ಲೇಷಣೆಗಳಿಗೆ ಜನ ಬ್ಲಾಗುಗಳ ಬಳಿ ಮೊದಲು ಹೋಗುತ್ತಾರಂತೆ. ಕರ್ನಾಟಕದಲ್ಲೂ ಇಂತಹ ಬೆಳವಣಿಗೆಯ ಸಾಧ್ಯತೆಯತ್ತ ಮೊದಲ ಹೆಜ್ಜೆ ಹಾಕಿದಂತಾಗಿದೆ. ○

ಅಪೌಷ್ಟಿಕತೆ ನಿವಾರಿಸುವ ಅಂಗನವಾಡಿ ಮೇಲೆ ಧಾಳಿ

ಎಸ್. ವರಲಕ್ಷ್ಮಿ

...ಸ್ಥೆಯ ಮಾನವ ಅಭಿವೃದ್ಧಿ ವರದಿಯ ಪ್ರಕಾರ ಅತಿ ಹೆಚ್ಚು ಅಪೌಷ್ಟಿಕತೆಯ ವಿಚಾರದಲ್ಲಿ ನಾವು ಬಾಂಗ್ಲಾದೇಶ ಮತ್ತು ನೇಪಾಳಗಳ ಜೊತೆಯಲ್ಲಿ ಸ್ಥಾನ ಹಂಚಿಕೊಂಡಿದೆ. ದೇಶದ ಅರ್ಧದಷ್ಟು ಮಕ್ಕಳು ಅಪೌಷ್ಟಿಕತೆಯಿಂದ ಬಳಲುತ್ತಿದ್ದಾರೆ. ಕಳೆದ ಐದು ವರ್ಷಗಳಿಂದ ಸತತವಾಗಿ ವಿವಿಧ ಸರ್ಕಾರಗಳು ಅನುಸರಿಸಿಕೊಂಡು ಬಂದಿರುವ ನವ ಉದಾರವಾದಿ ಆರ್ಥಿಕ ನೀತಿಗಳ ಪರಿಣಾಮವಾಗಿ ನಿರ್ದಿಷ್ಟವಾಗಿ ಮಕ್ಕಳ ಪೌಷ್ಟಿಕತೆಯ ಮಟ್ಟದಲ್ಲಿ ನಿಧಾನಗತಿಯ ಚಲನೆ ಬಂದಿದೆ.

ಈ ನೀತಿಗಳ ಪರಿಣಾಮವಾಗಿ ಸಾಮೂಹಿಕ ಬಡತನ, ನಿರುದ್ಯೋಗ, ಅನಕ್ಷರತೆ, ಅಜ್ಞಾನ.ಲಿಂಗಭೇದ ಇತ್ಯಾದಿಗಳು ಮಕ್ಕಳ ಅಪೌಷ್ಟಿಕತೆಗೆ ಮೂಲಕಾರಣವಾಗಿವೆ. ಈ ಮೂಲಭೂತ ಸಮಸ್ಯೆಗಳಿಗೆ ಪರಿಹಾರವಿಲ್ಲದೆ ಸಮಗ್ರ ಅಭಿವೃದ್ಧಿಯ ಮಕ್ಕಳ ಹಕ್ಕನ್ನು ಸಾಧಿಸಲು ಸಾಧ್ಯವಾಗದು. ಅಪೌಷ್ಟಿಕತೆಯನ್ನು ಹೊಡೆದೋಡಿಸಿ ದೈಹಿಕವಾಗಿ ಮತ್ತು ಮಾನಸಿಕವಾಗಿ ಸದೃಢವಾದ ಭಾವಿ ಜನಾಂಗವನ್ನು ನಿರ್ಮಾಣ ಮಾಡಲು, ದುಡಿಯಲು ಯೋಗ್ಯರಿರುವವರೆಲ್ಲರಿಗೂ ಉದ್ಯೋಗ, ಆಹಾರದ ಭದ್ರತೆ, ಶಿಕ್ಷಣ ಮತ್ತು ಸರ್ವರಿಗೂ ಆರೋಗ್ಯವನ್ನು ಖಾತರಿ ಪಡಿಸುವ ರೀತಿಯಲ್ಲಿ ಪ್ರಭುತ್ವದ ಮಧ್ಯ ಪ್ರವೇಶವಿಲ್ಲದೆ ಸಾಧಿಸಲಾಗದು.

ಅದೇ ಸಮಯದಲ್ಲಿ, ಕಳೆದ 35 ವರ್ಷಗಳಿಂದ ಸಮಗ್ರ ಶಿಶು ಅಭಿವೃದ್ಧಿ ಸೇವಾ ಯೋಜನೆಯು ದುರ್ಬಲ ಮಕ್ಕಳಿಗೆ ಪೌಷ್ಟಿಕತೆ, ಶಿಶು ವಿಹಾರ ಮತ್ತು ಆರೋಗ್ಯ ಶಿಕ್ಷಣ ಇತ್ಯಾದಿಗಳನ್ನು ತಾಯಂದಿರಿಗೆ ನೀಡುವ ಮೂಲಕ ಅಗತ್ಯ ರಕ್ಷಣೆಯನ್ನು ಒದಗಿಸುತ್ತಾ ಬಂದಿದೆ. 1975ರ ಅಕ್ಟೋಬರ 2ರಂದು ಪ್ರಾಯೋಗಿಕವಾಗಿ ಮೊದಲುಗೊಂಡ ಈ ಯೋಜನೆಯು ಮಹಿಳೆಯರು ಮತ್ತು ಮಕ್ಕಳಿಗೆ ಅಪೂರ್ವ ಸೌಕರ್ಯವನ್ನು ಒದಗಿಸುವ ವಿಶ್ವದಲ್ಲಿಯೇ ಅತಿ ದೊಡ್ಡ ಮತ್ತು ವಿಶಿಷ್ಟ ಯೋಜನೆಯಾಗಿದೆ.

UNICEF, AIIMS, NCOER, ಖಿೋಜನಾ ಆಖಿೋಗವು ನಡೆಸಿರುವ ಅನೇಕ ಅಧ್ಯಖಿುನಗಳ ಪ್ರಕಾರ ಅಪೌಷ್ಟಿಕತೆ ಅದರಲ್ಲೂ ತೀವ್ರ ಅಪೌಷ್ಟಿಕತೆ ಕಡಿಮೆ ಮಾಡುವಲ್ಲಿ ಮತ್ತು ಶಿಶು ಮರಣ ಮತ್ತು ಪ್ರಸವ ಮರಣದ ಪ್ರಮಾಣ ಕೆಳಗಿಳಿಸುವಲ್ಲಿ ಈ ಖಿೋಜನೆಖಿು ಸಕಾರಾತ್ಮಕ ಪಾತ್ರ ವಹಿಸಿದೆ ಎಖಿದು ಅಭಿಪ್ರಾಖಿು ಪಟ್ಟಿದೆ.

ಮೂಲತಃ 1995-96ರ ಅಖಿತ್ಯದೊಳಗೆ JCDSನ್ನು ಸಾರ್ವತ್ರಿಕಗೊಳಿಸುವ ಖಿೋಜನೆಯಿತ್ತು. ಆದರೆ



1996ರವರೆಗೆ ಮಖಿಜೂರು ಮಾಡಿದ 5614 ಖಿೋಜನೆಗಳಲ್ಲಿ 4200 ಮಾತ್ರ 8ನೇ ಖಿೋಜನೆಖಿು ಅಖಿತ್ಯದ ವೇಳೆಗೆ ಕಾಖಿರ್ುಗತಗೊಖಿಡಿದ್ದವು. 9ನೇ ಖಿೋಜನೆಖಿು ಅಖಿತ್ಯದೊಳಗೆ ಅದನ್ನು ಸಾರ್ವತ್ರಿಕಗೊಳಿಸಲು, NDA ಸರ್ಕಾರ ಅಗತ್ಯ ನಿಧಿಗಳನ್ನು ಮಖಿಜೂರು ಮಾಡುವ ಆಸಕ್ತಿ ತೋರಲಿಲ್ಲ. 10ನೇ ಖಿೋಜನೆಗೆ ಸಾರ್ವತ್ರೀಕರಣದ ಗುರಿಯಿದೆ. 0 - 6 ವಖಿೋಮಿತಿಖಿು 16 ಕೋಟಿ ಮಕ್ಕಳಲ್ಲಿ 5.43 ಕೋಟಿ ಮಕ್ಕಳನ್ನು ಮಾತ ಖಿಳಗೊಳ್ಳುವ ನಿರೀಕ್ಷೆಯಿದೆ.

28 ನವೆಖಿಬರ 2001ರಖಿದು ಸುಪ್ರೀಖಿ ಕೋರ್ಟ್ ಖಪ್ರತಿಖಿೊಖಿದು ಜನವಸತಿಗೆ ಪ್ರದೇಶದಲ್ಲಿ ಖಿಖಿದು ಅಖಿಗನವಾಡಿ ಕೇಖಿದ್ರ ಕಾಖಿರ್ುನಿರ್ವಹಿಸುವಖಿತೆ ನೋಡಿಕೊಳ್ಳ ಬೇಕೆಖಿದು ಕೇಖಿದ್ರ ಹಾಗೂ ರಾಜ್ಯ ಸರ್ಕಾರಗಳಿಗೆ ನಿರ್ದೇಶನ ನೀಡಿತ್ತು. ಅಲ್ಲದೇ 6 ವರ್ಷದ ಕೆಳಗಿನ ಪ್ರತಿ ಮಗುವಿಗೆ ಹಾಗೂ ಎಲ್ಲಾ ಗರ್ಭಿಣಿ ಮತ್ತು ಬಾಣಖಿತಿಖಿುರಿಗೆ, ಅವರು ಬಡತನ ರೇಖೆಖಿು ಮೇಲಿರಲಿ ಅಥವಾ ಕೆಳಗಿರಲಿ, ಎಲ್ಲರಿಗೂ ಪೂರಕ ಪೌಷ್ಟಿಕಾಖಿಶ ಖಿದಗಿಸಬೇಕು ಎಖಿದು ನಿರ್ದೇಶನ ನೀಡಿತ್ತು.

ಏಪ್ರಿಲ್ 2004 ರಲ್ಲಿ ಸುಪ್ರೀಖಿ ಕೋರ್ಟ್ ವಿಳಖಿಬವಿಲ್ಲದೆ JCDSನ್ನು ಸಾರ್ವತ್ರಿಕಗೊಳಿಸ ಬೇಕೆಖಿದೂ ಮತ್ತೆ ದೃಢಪಡಿಸಿತು. UPA ಸರ್ಕಾರ ಅದನ್ನು ಸಾರ್ವತ್ರಿಕಗೊಳಿಸಲು ವಚನಬದ್ಧವಾಗದೆ ಎಖಿದೂ ತನ್ನ ಸಾಮಾನ್ಯ ಕನಿಷ್ಠ ಕಾಖಿರ್ುಕ್ರಮದಲ್ಲಿ ಹೇಳಿದೆ.

11ನೇ ಪಖಿಚವಾರ್ಷಿಕ ಖಿೋಜನೆಖಿು ವರದಿಖಿುಲ್ಲಿ National family health survey (NFHS-3) ಪ್ರಕಾರ 46% ಕಡಿಮೆ ತೂಕ, 80% ಅನಿಮಿಕ್, 23% ಮಕ್ಕಳಿಗೆ ಮಾತ್ರ ಹುಟ್ಟಿದ ಖಿಖಿದು ಘಖಿಟೆಗೆ ತಾಯಿಖಿು ಹಾಲು ಸಿಗುತ್ತಿದೆ. 46% ಮಕ್ಕಳಿಗೆ ಮಾತ್ರ 6 ತಿಖಿಗಳ ತನಕ ತಾಯಿಖಿು ಮೊಲೆಹಾಲು ಸಿಗುತ್ತದೆ.

12-23 ತಿಖಿಗಳ ಮಕ್ಕಳಲ್ಲಿ 44% ಮಕ್ಕಳಿಗ ಮಾತ್ರ ರೋಗ ನಿರೋಧಕ ಖಿಷಧಿ ಹಾಗೂ ಅರ್ಧದಷ್ಟು ತಾಖಿುಖಿದಿರಿಗೆ ರೋಗ ನಿರೋಧಕ ಖಿಷಧಿಗಳು ದೊರೆಖಿುತ್ತವೆ.

ಖಿಖಿದು ಸಾವಿರಕ್ಕೆ 57 ಮಕ್ಕಳು ಖಿಖಿದು ವರ್ಷ ಆಗುವ ಮೊದಲೇ ಸಾವನ್ನಪ್ಪುತ್ತಾರೆ.

ಇದನ್ನು ಹಖಿತ ಹಖಿತವಾಗಿ ತಡೆಖಿುಲು 2004-2005, 2005-2006 ರಲ್ಲಿ ಸುಮಾರು 2.5 ಲಕ್ಷ ಅಖಿಗನವಾದಿ ಕೇಖಿದ್ರಗಳನ್ನು ಹೊಸದಾಗಿ ದೇಶಾದ್ಯಖಿತ ತೆರೆಖಿುಲಾಗಿದೆ. JCDS ನ ಬಲವರ್ಧನೆಗಾಗಿ ಅಗತ್ಯ ಹಣ ಖಿದ-ಸದಿದ್ದರೂ 3142 ಕೋಟಿ ಹಣವನ್ನು ಸರ್ಕಾರ 2005-2006 ರಲ್ಲಿ ವ್ಯಖಿು ಮಾಡುತ್ತಿದೆ.

ಕರ್ನಾಟಕ ರಾಜ್ಯ ಅಖಿಗನವಾಡಿ ನೌಕರರ ಸಖಿಘಟನೆಖಿು ಬೇಡಿಕೆ 12 ಸಾವಿರ ಕೋಟಿ ಬೇಕು ಮತ್ತು ಈ ಹಣವನ್ನು ವ್ಯಖಿುಮಾಡುವುದು ಮಕ್ಕಳ ಅಭಿವೃದ್ಧಿಗೆ ಹಣ ಹೂಡಿಕೆಖಿುನ್ನು ದೇಶದ ಖಿಖಿದು ಅಪೇಕ್ಷಣೀಖಿು ಸಾಮಾಜಿಕ ಹೂಡಿಕೆ ಎಖಿದು ಕಾಣುವುದಷ್ಟೆ ಅಲ್ಲ ಪ್ರತಿಖಿೊಖಿದು ಮಗುವು ತನ್ನ ಪೂರ್ಣ ಸಾಮರ್ಥ್ಯವನ್ನು ಸಾಧಿಸುವಖಿತೆ ಬದುಕುಳಿಖಿುವ, ರಕ್ಷಣೆಖಿು ಹಾಗೂ ಅಭಿವೃದ್ಧಿಖಿು ಹಕ್ಕುಗಳ ಈಡೇರಿಕೆ ಎಖಿದು ಕಾಣಬೇಕು.

JCDS ಖಿೋಜನೆಖಿು ಬಲವರ್ಧನೆಗಾಗಿ ಹಲವು ವರ್ಷಗಳ ಹೋರಾಟದ ಫಲವಾಗಿ ಈಗ 11ನೇ ಪಖಿಚ ವಾರ್ಷಿಕ ಹೋಜನೆಖಿುಲ್ಲಿ Working group ಅನ್ನು ರಚಿಸಿ JCDS ಬಗ್ಗೆ ಸಖಿಪೂರ್ಣ ಅಭ್ಯಾಸ ಮಾಡಿ JCDS ಪರವಾದ ವರದಿ ಬರುತ್ತಿದೆ.

ಇಖಿತಹ ಸಮಖಿುದಲ್ಲಿ ಕರ್ನಾಟಕದಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಖಿು ಕಾಖಿರ್ು

ದರ್ಶಿಗಳು JCDS ಬಲವರ್ಧನೆಗಾಗಿ ಬಾಲವಿಕಾಸ ಸಮಿತಿಗಳನ್ನು ರಚಿಸಬೇಕು, ಈ ಸಮಿತಿಖಿು ಗ್ರಾಮ ಪಖಿಚಾಯ್ತಿ ಸದಸ್ಯರು, ಸ್ತ್ರೀಶಕ್ತಿ ಮತ್ತು ಸಲಹಾಸಮಿತಿಯಿಖಿದ ತಲಾ 4 ಜನರನ್ನು ಸೇರಿಸಿ ಕೊಖಿಡಖಿತೆ ಸಮಿತಿ ಮಾಡುವುದು. ಈ ಸಮಿತಿ ಅಖಿಗನವಾಡಿ ಕೇಖಿದ್ರಕ್ಕೆ ಮಕ್ಕಳು ಬರುವ ಹಾಗೆ, ಕೇಖಿದ್ರಕ್ಕೆ ಹಣಕಾಸು ಸಹಾಖಿು,

ಗರ್ಭಿಣಿ-ಬಾಣಖಿತಿಖಿುರಿಗೆ ಆರೋಗ್ಯ ಸಖಿಬಖಿಧಿತ ನೆರವುಗಳನ್ನು ನೀಡುವುದು ಎಖಿದಿದೆ. ಈ ರೀತಿಖಿು ಸಮಿತಿ ಮಾಡಬೇಕೆಖಿದೂ ಕೇಖಿದ್ರ ಸರ್ಕಾರದ ನಿರ್ದೇಶನವಿದ್ದರೂ, ರಾಜ್ಯದಲ್ಲಿ ಈ ಸಮಿತಿ ಅಖಿನನವಾಡಿ ನೌಕರ್ರರ ಮೇಲಿನ ಸಖಿಪೂರ್ಣ ಮೇಲ್ವಚಾರಣೆಖಿು ಹಕ್ಕನ್ನು ಕೊಟ್ಟಿದೆ.

ಈ ಧೋರಣೆ ಸಖಿಪೂರ್ಣ ನೌಕರ ವಿರೋಧಿ ಧೋರಣೆ ಏಕೆಖಿದರೆ ರಾಜ್ಯದಲ್ಲಿ ನೌಕರರು ಈಗಾಗಲೇ ಮಾನಹಿಖಿಸೆಗಳು, ದೈಹಿಕ ಹಲ್ಲೆಗಳು, ಅತ್ಯಾಚಾರದ ಪ್ರಖಿುತ್ನಗಳನ್ನು ಎದುರಿಸುತ್ತಿದ್ದು, ಇಲಾಖೆಯಿಖಿದ ಬರುವ ಸಖಿಬಳ 3-4 ತಿಖಿಗಳಿಗೊಮ್ಮೆ ತೆಗೆದುಕೊಳ್ಳುವಖಿತಹ ಪರಿಸ್ಥಿತಿ ಇರುವಾಗ ಇವರ ಮೇಲೆ ಅಧಿಕಾರವನ್ನು

ಚಲಾಯಿಸಲಿಕ್ಕೆ ಸಮುದಾಖಿುಕ್ಕೆ ಜವಾಬ್ದಾರಿ ನೀಡಿದರೆ ಇವರ ಪರಿಸ್ಥಿತಿ ಎಷ್ಟು ಭಖಿುಾನಕ ವಾಗುತ್ತದೆ , ಹಾಗೆಖಿುೇ ಇವರ ಮೇಲ್ವಿಚಾರಣೆಗೆ ರಾಜ್ಯದಲ್ಲಿ ನಿರ್ವಹಿಸಲು ಇಲಾಖೆಖಿು ತಾಲ್ಲೂಕು ಮಟ್ಟದ CDPO ಗಳು ಮತ್ತು ಮೇಲ್ವಿಚಾರಕಿಖಿುರ ಕೆಲಸ ಏನು ಎಖಿಬ ಪ್ರಶ್ನೆ ಬರುತ್ತದೆ.

ಆದ್ದರಿಖಿದ, ಮೇಲ್ವಿಚಾರಣೆ ಖಿುನ್ನು ಬಾಲವಿಕಾಸ ಸಮಿತಿಗೆ ಕೊಡಬಾರದೆಖಿದೂ ಆಗ್ರಹವಿದೆ. ಹಾಗೆಖಿುೇ, ಅಖಿಗನವಾಡಿ ಕೇಖಿದ್ರಗಳಿಗೆ ಸ್ವಖಿತ ಕಟ್ಟಡ ಇಲ್ಲದಿದ್ದವರು ಹತ್ತಿರದ ಪ್ರಾಥಮಿಕ ಶಾಲೆಗಳಲ್ಲಿ ಬಿಸಿಖಿುೂಟವನ್ನು ತೆಗದುಕೊಳ್ಳಬೇಕೆಖಿಬ ಸುತ್ತೋಲೆಖಿುನ್ನು ಕಳುಹಿಸಲಾಗಿದೆ. ಇಲಾಖೆಗೆ ಅಖಿಗ ನವಾಡಿ ಕೇಖಿದ್ರಗಳ ಮುಖ್ಯ ಕೆಲಸವನ್ನು ಕನಿಷ್ಠ ಪ್ರಜ್ಞೆಖಿುೂ ಇಲ್ಲದ ಅಧಿಕಾರಿ ವರ್ಗವನ್ನು ಪ್ರಶ್ನಿಸಲು ಅಖಿಗನವಾಡಿ ನೌಕರರು ಮತ್ತೊಮ್ಮೆ ಸಿಡಿದೇಳಬೇಕಾಗಿದೆ.


ವೀಕ್ಷಕರನ್ನು ಹುಡುಕುತ್ತಾ...

ಪುಟ 11 ರಿಂದ

ಸರಿದಿದೆ. ಪ್ರಜಾಸತ್ತಾತ್ಮಕ-ಪ್ರಗತಿಪರ-ಎಡ ಕಣ್ಣೋಟಕ್ಕೆ ಮಾಧ್ಯಮಗಳಲ್ಲಿ ಅವಕಾಶ-ಜಾಗ ಹಿಂದೆಂದಿಗಿಂತಲೂ ಕಡಿಮೆಯಾಗಿದೆ. ಮಾತ್ರವಲ್ಲ ಅದರ ಮೇಲೆ ತೀವ್ರ ಪ್ರಹಾರ ಮಾಧ್ಯಮಗಳ ದಿನಚರಿಯಾಗಿ ಬಿಟ್ಟಿದೆ. ಸಿಂಗೂರು, ನಂದಿಗ್ರಾಮ, ಅಣು ಒಪ್ಪಂದದ ಸಂದರ್ಭದಲ್ಲಿ ನಡೆದ ಏಕಪಕ್ಷೀಯ ವಾದಗಳು ಮತ್ತು ದಾಳಿಗಳು ಇದಕ್ಕೆ ಉದಾಹರಣೆ. ಈ ಪ್ರಕರಣಗಳಲ್ಲಿ ಕೆಲವು ಇಂಗ್ಲೀಷ್ ಟೀವಿ ಸುದ್ದಿ ವಾಹಿನಿಗಳು ತಮ್ಮ ಕನಿಷ್ಟ ವಸ್ತುನಿಷ್ಟೆ, ಪ್ರಾಮಾಣಿಕತೆಗಳ ಮುಖವಾಡವೆಲ್ಲ ಕಳಚಿಬಿಟ್ಟವು.

ಆತಂಕಕಾರಿ ಬೆಳವಣಿಗೆಗಳು, ಮುಂದೇನು ?

ಕೋಮುವಾದ-ಜಾಗತೀಕರಣದ ಪರವಾಗಿ ಮುಕ್ತ ಪ್ರಚಾರ, ಮಾಧ್ಯಮಗಳಲ್ಲಿ ಇನ್ನಷ್ಟು ಹೆಚ್ಚು ಆಗಿದೆ. ಕರ್ನಾಟಕದಲ್ಲಂತೂ ಬಿಜೆಪಿಯ ಅಧಿಕಾರಾವಧಿ ಬಳಸಿ ಕೇಸರೀಕರಣ ಉಬ್ಬರ ಕಂಡು ಬಂತು. ಹಿಂದೆ ಸೆಕ್ಯುಲರ್ ಪಾಳಯದಲ್ಲಿದ್ದ ಸಂಯುಕ್ತ ಕರ್ನಾಟಕ ಮತ್ತು ಸಂಘಿ ಡೈರೆಕ್ಟರ್ ಗಿರಿಯಲ್ಲಿ ... ಚಾನೆಲ್ ಬಂದನಡು ಕೇಸರೀಕರಣದ ಈ ... ಸಂಗು ಒಡಿಸುವ ಸಂಕೇತಗಳು. ಎಲ್ಲಾ ಮಾಧ್ಯಮಗಳಲ್ಲಿ ಸುಮಾರು ಹತ್ತು ತಿಂಗಳ ಕಾಲ 'ಅಧಿಕಾರ ಹಸ್ತಾಂತರ' ಮುಖ್ಯ ರಾಜಕೀಯ ... ವಸ್ತುವಾಗುವಂತೆ ಮತ್ತು ಅದರಿಂದ ಬಿಜೆಪಿ ರಾಜಕೀಯ ಅನುಕೂಲ ಗಿಟ್ಟಿಸುವಂತೆ ಆರೆಸ್ಸೆಸ್ ನ ವ್ಯವಸ್ಥಿತ ಪ್ರಯತ್ನಕ್ಕೆ ಯಶಸ್ಸು ಸಹ ಆತಂಕಕಾರಿ ಬೆಳವಣಿಗೆ. ಮಾಧ್ಯಮಗಳನ್ನು ಕೊಂಡುಕೊಳ್ಳಲು (ಸುದ್ದಿ, ಅನುಕೂಲ ಟಿಪ್ಪಣಿ ಗಿಟ್ಟಿಸಲು) ಪಟ್ಟಭದ್ರ ಹಿತಾಸಕ್ತಿ (ಉಧಾ: ಗಣಿ, ಭೂಮಿ ಮುಂತಾದ ಲಾಬಿ)ಗಳ ಮತ್ತು ಅವುಗಳ ರಾಜಕೀಯ ಪ್ರಭುಗಳ ಪ್ರಯತ್ನ ಸಹ ಅಷ್ಟೇ ಆತಂಕಕಾರಿ. ರಾಜ್ಯದ ಎಲ್ಲಾ ಕೇಬಲ್ ನೆಟ್ ವರ್ಕನ್ನು ಮಾಜಿ ಮು.ಮ. ಕುಮಾರಸ್ವಾಮಿಯವರ ಕಂಪನಿ 'ಅಮೋಘ' ಕೊಂಡದ್ದು ಮಾಧ್ಯಮಗಳಲ್ಲಿ ಗುತ್ತೇದಾರಿ ಬೆಳವಣಿಗೆಯ ಅಪಾಯದ ಮುನ್ಸೂಚನೆ.



ಮಾಧ್ಯಮಗಳಲ್ಲಿ ಮತ್ತು ಬಹುತೇಕ ಪತ್ರಕರ್ತರಲ್ಲಿ ವ್ಯಾಪಕವಾದ ಭ್ರಷ್ಟಾಚಾರ ಮತ್ತು ಜಾತೀವಾದ ಇನ್ನೊಂದು ಅಪಾಯಕಾರಿ ಬೆಳವಣಿಗೆ.

ಮುಖ್ಯಧಾರೆಯ ಮಾಧ್ಯಮಗಳ ಈ ನಕಾರಾತ್ಮಕ ಬೆಳವಣಿಗೆಗಳ (ಕೇಸರೀಕರಣ, ಆಳರಸರ ದೃಷ್ಟಿಕೋನ ಹೇರುವ, ವಸ್ತುನಿಷ್ಟತೆಗೆ ದೂರವಾಗಿರುವ, ನೈಜ ಚರ್ಚೆಯಿಂದ ದೂರವಾದ, ಅವೈಜ್ಞಾನಿಕ ಧೋರಣೆಯ) ಪರಿಣಾಮಗಳನ್ನು ತಡೆಯುವುದು ಹೇಗೆ? ಅದರ ವಿರುದ್ಧ ಪ್ರತಿರೋಧ ತೋರುವುದು ಹೇಗೆ ? ಮುದ್ರಿತ ಮಾಧ್ಯಮ ಇನ್ನೂ ಅಷ್ಟು ಪೆದ್ದೀಕರಣಕ್ಕೆ ಒಳಗಾಗದ ಮಾಧ್ಯಮ. ಅದು ದೃಶ್ಯ ಮಾಧ್ಯಮದ ಕುರುಡು ಅನುಕರಣೆ ಮಾಡದೆ, ಓದುಗರನ್ನು ಒಳಗೊಳ್ಳಬಲ್ಲ ಭಾಷೆ, ಆಕರ್ಷಕ ಶೈಲಿ ಬೆಳೆಸುತ್ತಲೇ ವಿಷಯ-ಸಮಗ್ರತೆ-ಆಳಕ್ಕೆ ಪ್ರಾಮುಖ್ಯತೆ ಕೊಡುವ ಹೊಸ ಧಾಟಿ ಹಮ್ಮಿಕೊಳ್ಳಬೇಕು. ಜನಶಕ್ತಿಯಂತಹ ಪ್ರಗತಿಪರ -ಪ್ರಜಾಸತ್ತಾತ್ಮಕ ಪತ್ರಿಕೆಗಳು ಇಂತಹ ಹೊಸ ಹಾದಿ ತುಳಿದು ಮಾದರಿಯಾಗಬೇಕು. ಇಂತಹ ಪತ್ರಿಕೆಗಳ ಗುಣಮಟ್ಟ-ಪ್ರಸಾರ-ಪ್ರಭಾವ ವೇಗವಾಗಿ ಹೆಚ್ಚುವಂತೆ ಶ್ರಮಿಸಬೇಕು. ದೃಶ್ಯ ಮಾಧ್ಯಮದಲ್ಲೂ ಪ್ರಗತಿಪರ- ಪ್ರಜಾಸತ್ತಾತ್ಮಕ- ವಸ್ತುನಿಷ್ಟ ಧೋರಣೆಗೆ ಅವಕಾಶಕ್ಕೆ ಹೋರಾಟ ಮುಂದುವರೆಯ ಬೇಕು. ಇದಕ್ಕಾಗಿ ಎಲ್ಲಾ ಭಾಷೆಗಳಲ್ಲೂ ಕೇರಳದ ಕೈರಾಲಿ ಮಾದರಿಯ ವಾಹಿನಿಗಳ ಸ್ಥಾಪನೆಗೆ ಪ್ರಯತ್ನ ನಡೆಯಬೇಕು.

ವೆಬ್-ಪತ್ರಿಕೆಗಳು, ಬ್ಲಾಗುಗಳು, ರೇಡಿಯೋ ಮುಂತಾದ ಸುಲಭ ಖರ್ಚಿನ ಇಲೆಕ್ಟ್ರಾನಿಕ್ ಮಾಧ್ಯಮಗಳ ಸೃಜನಾತ್ಮಕ ಬಳಕೆ ಸಾಧ್ಯ. ಸದ್ಯಕ್ಕೆ ಇದು ಹೆಚ್ಚು ಸಮಾನ ಅವಕಾಶ ಇರುವ ಕ್ಷೇತ್ರ. ಈ ಮಾಧ್ಯಮಗಳ ವಿಸ್ತಾರಕ್ಕೆ ಹಾಗೂ ಜನಪ್ರಿಯಗೊಳಿಸಲು ಶ್ರಮಿಸಬೇಕು. ಇಂಟರನೆಟ್ ಈಗ ವಿಕಸಿತ ದೇಶಗಳಲ್ಲಿ ಒಂದು ಬದಲಿ ಸಾಮೂಹಿಕ ಮಾಧ್ಯಮ ಆಗಿದೆ. ಆದರೆ ಇಂಟರ್‌ನೆಟ್ ವ್ಯಾಪಕತೆ ಇಂಡಿಯಾದಲ್ಲಿ ಇನ್ನೂ ಸೀಮಿತವಾಗಿದೆ. ಮೊಬೈಲ್ ಫೋನ್ ಮೂಲಕ ಇಂಟರನೆಟ್ ವೇಗದ ವಿಸ್ತಾರ ಕಾಣುವ ಸಾಧ್ಯತೆ ಇದೆ. ಮೊಬೈಲ್ ವಿಸ್ತಾರ ಮತ್ತು ತಂತ್ರಜ್ಞಾನದ ವಿಕಾಸಗಳಿಂದ ಅದು ಇನ್ನೊಂದು ಹೊಸ (ರೇಡಿಯೋ, ಟೀವಿ, ಪೇಪರ್, ಪುಸ್ತಕ, ಸಂದೇಶ ಎಲ್ಲವನ್ನೂ ಒಳಗೊಂಡ) ಸಾಮೂಹಿಕ ಮಾಧ್ಯಮ ಆಗುವ ಸಾಧ್ಯತೆ ಇದೆ. ಈ ಹೊಸ ಮಾಧ್ಯಮದಲ್ಲಿ ಮೊದಲ ವೇಗದ ಪ್ರವೇಶ ಮತ್ತು ಸೃಜನಾತ್ಮಕ ಬಳಕೆಗೆ ಪ್ರಗತಿಪರ- ಪ್ರಜಾಸತ್ತಾತ್ಮಕ ಶಕ್ತಿಗಳು ಮುಂದಾಗಬೇಕು. ಇದರ ಎಲ್ಲಾ ಸಾಧ್ಯತೆಗಳನ್ನು ದುಡಿಸಿಕೊಳ್ಳಬೇಕು. ಉಳ್ಳವರ ಮಾಧ್ಯಮ ಗೂಳಿಯ ಕೊಂಬು ಹಿಡಿದು ಮಣಿಸಲು ಸಿದ್ಧವಾಗಬೇಕು.



ರಾಮ ರಾಮ... 'ಹೀಗೂ ಉಂಟೆ'

ಮಂದ ಬೆಳಕಿನ ಹಿನ್ನೆಲೆಯಲ್ಲಿ ನಿಂತಿರೋ ನಾರಾಯಣ ಸ್ವಾಮಿ ಎಂಬ ಒಬ್ಬ ಮನುಷ್ಯ ಜರ್ಕಿನ್ ನಂತಹ ಒಂದು ತೋಳಿಲ್ಲದ ಜಾಕೆಟ್ ತೊಟ್ಟು, 'ಮನುಷ್ಯನ ತಿಳುವಳಿಕೆಗೆ ನಿಲುಕದ ಒಂದು ನಿಗೂಢ ಶಕ್ತಿ ಇದೆ. ವಿಜ್ಞಾನ ವಿವರಿಸಲಾರದ ಒಂದು ಅದ್ಭುತ ಶಕ್ತಿ ಇದೆ' ಎಂಬರ್ಥದ ಮಾತುಗಳನ್ನು ಹತ್ತು ಹತ್ತು ಸೆಕೆಂಡಿಗೂ ಒಮ್ಮೆ ಚಿಟ್ಟೆ ರೆಕ್ಕೆ ಬಿಡಿಸಿ ಮತ್ತೆ ಜೋಡಿಸಿ ಕುಳಿತುಕೊಳ್ಳುವಂತೆ ತನ್ನ ಕೈಗಳನ್ನು ವಿಚಿತ್ರವಾಗಿ ಎತ್ತುತ್ತಾ ಇಳಿಸುತ್ತಾ ಆಡಲು ಶುರು ಮಾಡಿದರೆಂದರೆ ಅದು ಟಿವಿ 9 ಎಂಬ ಟಿವಿ ಛಾನಲ್‌ನ 'ಹೀಗೂ ಉಂಟೆ' ಕಾರ್ಯಕ್ರಮ ಅಂತ ನೀವು ಧಾರಾಳವಾಗಿ ತೀರ್ಮಾನಕ್ಕೆ ಬರಬಹುದು.


ಕನ್ನಡ ಟಿ.ವಿ. ಚಾನೆಲ್‌ಗಳಲ್ಲಿ ಸದ್ಯಕ್ಕೆ ಪ್ರಸಾರವಾಗುತ್ತಿರುವ ಧಾರಾವಾಹಿ ಮತ್ತಿತರ ಕಾರ್ಯಕ್ರಮಗಳ ನಡುವೆ ಈ 'ಹೀಗೂ ಉಂಟೆ' ಅತ್ಯಂತ ಹೆಚ್ಚು ವೀಕ್ಷಕರು ನೋಡುವ ಕಾರ್ಯಕ್ರಮವಂತೆ!!!

ಮೊನ್ನೆ ಜನವರಿ 14 ರಂದು ಮಧ್ಯಾಹ್ನ ಇದೇ ನಾರಾಯಣಸ್ವಾಮಿ ಟಿವಿ ಪರದೆ ಮೇಲೆ ಬಂದು, ಆರು ಗಂಟೆಗಳ ಕಾಲ ಸತ್ತೇ ಹೋಗಿದ್ದ ಮನುಷ್ಯ ಮತ್ತೆ ಬದುಕಿ ಬರುತ್ತಾನೆ, ಪಾಳ್ಯ ಗ್ರಾಮದಲ್ಲಿ ಭಯಾನಕ ನರಬಲಿ. ವೈದ್ಯಕೀಯ ಲೋಕಕ್ಕೊಂದು ಇದು ಸವಾಲು ಅಂತ ಪದೇ ಪದೇ ಕೂಗೋದನ್ನ ನೋಡಿದ ಮೇಲೆ ಆ ಕಾರ್ಯಕ್ರಮವನ್ನು ನೋಡದೆ ಇರೋದಕ್ಕೆ ಆಗಲಿಲ್ಲ.

ಪಾಳ್ಯ ಅನ್ನೋ ಗ್ರಾಮ

ಚಾಮರಾಜನಗರದಲ್ಲಿ, ಪಾಳ್ಯ ಅಂತ ಒಂದು ಗ್ರಾಮ. ಅಲ್ಲಿ ನಾಯಕ ಸಮುದಾಯಕ್ಕೆ ಸೇರಿದ ಜನರಲ್ಲಿ ಒಂದು ಆಚರಣೆ. ಊರಿನ ಸೀಗ ಮಾರಮ್ಮ, ಹೊಳೆಗೆರೆ ಹುಚ್ಚಮ್ಮನಿಗೆ ಅವರು ಭಕ್ತಿ ತೋರುವ ಪರಿಯೇ ಕಾರ್ಯಕ್ರಮದ ಕೇಂದ್ರ ಬಿಂದು.

ನಾಯಕ ಸಮುದಾಯದ ಹಿರಿಯರಲ್ಲಿ ಯಾರನ್ನ ನರ ಬಲಿ ಕೊಡಬೇಕು ಅಂತ ಮೊದಲೇ ತೀರ್ಮಾನಿಸಲಾಗುತ್ತದೆ. ಸ್ನಾನ, ಮಡಿ, ಪೂಜೆ, ಪುನಸ್ಕಾರಗಳ ನಂತರ ನರ ಬಲಿಗೆ ಸಿದ್ಧವಾಗಿರುವ ವ್ಯಕ್ತಿಯನ್ನು ಬಾರಿ ಜನ ಜಾತ್ರೆಯ ನಡುವೆ ಮೆರವಣಿಗೆಯಲ್ಲಿ ಕರೆ ತರಲಾಗುತ್ತದೆ. ಮತ್ತೆ ಪೂಜಾಶಾಸ್ತ್ರಗಳ ನಂತರ ತಮ್ಮಡಿ ಎಂದು ಕರೆಯಲಾಗುವ ಪೂಜಾರಿ ಬಲಿಯ ಎದೆಯ ಮೇಲೆ ಕಾಲಿಟ್ಟು, ದೇವಿಗೆ 'ಬಲಿ' ಅರ್ಪಿಸುತ್ತಾರೆ. ಆ ವ್ಯಕ್ತಿ 'ಸತ್ತೇ ಹೋಗುತ್ತಾನೆ'. ಆತ ಸತ್ತಿದ್ದಾನೆ ಅನ್ನುವುದಕ್ಕೆ ಹಲವು ಸಾಕ್ಷಿಗಳು. ಆತನ ಮುಖವೊಂದನ್ನು ಬಿಟ್ಟು ದೇಹದ ಉಳಿದ ಭಾಗವನ್ನು ಪೂರ್ತಿಯಾಗಿ ಕಂಬಳಿ ಇತ್ಯಾದಿಗಳಿಂದ ಮುಚ್ಚಲಾಗುತ್ತದೆ. ಸತ್ತು ಹೋದ ಮುಖಕ್ಕೆ ನೀರಿನಲ್ಲಿ ಕಲಸಿದ ಅರಿಶಿನ ವನ್ನು ಕಣ್ಣು, ಮೂಗು, ಬಾಯಿ ಎನ್ನದೆ ಎಲ್ಲಾ ಕಡೆ ಧಾರಾಳವಾಗಿ ಮೆತ್ತಲಾಗುತ್ತದೆ. ಹೇಗೂ ಹೆಣ ಉಸಿರಾಡಬೇಕಿಲ್ಲದಿರುವುದರಿಂದ ಏನೂ ತೊಂದರೆ ಇಲ್ಲ!



ಆ ಮನುಷ್ಯ ಸತ್ತೇ ಹೋಗಿದ್ದಾನೆ ಅನ್ನುವುದಕ್ಕೆ ಮತ್ತೆ ಸಾಕ್ಷಿ ಏನೆಂದರೆ, ಜನ ಜಾತ್ರೆಯ ನಡುವೆ ಆ ಹೆಣವನ್ನು ಹೊತ್ತೊಯ್ಯಲಾಗುತ್ತದೆ. ಹೊತ್ತೊಯ್ಯುವಾಗ ಗಾಳಿಯಲ್ಲಿ ಹೆಣವನ್ನು ಮೇಲೆ ಎಸೆದು ಎಸೆದು, ಗಾಳಿಗೆ ತೂರಲಾಗುತ್ತದೆ. ಎಷ್ಟೆಂದರೂ ಹೆಣ ತಾನೇ, ಏನೂ ಆಗಲಾರದು. ಆ ಹೆಣ ಅಷ್ಟೇ, ಸ್ವಲ್ಪವೂ ಮಿಸುಕಾಡದು. ಹೇಗೂ ಅದು ಹೆಣ ತಾನೇ?

ಈ ಮಧ್ಯೆ ಹಲವಾರು ವ್ಯಕ್ತಿಗಳು, ಸರ್ಕಾರಿ ವೈದ್ಯರೂ, ಆ ವ್ಯಕ್ತಿ ಬದುಕಿಲ್ಲ ಎಂದೂ ಆತನ ದೇಹದಲ್ಲಿ ನಾಡಿಮಿಡಿತ ಇಲ್ಲವೆಂದೂ, ಆತ ಉಸಿರಾಡುತ್ತಿಲ್ಲ ಎಂದೂ ದೃಢಪಡಿಸುತ್ತಾರೆ. ಹೀಗೆ ಆರು ಗಂಟೆಗಳ ಕಾಲ ಕಳೆದ ಮೇಲೆ ದೇವಿಯ ತೀರ್ಥ. ಆ ಹೆಣವನ್ನು ಹೊಳೆಗೆರೆ ಹುಚ್ಚಮ್ಮನ ಮುಂದೆ ತಂದು ಇಟ್ಟು ಆ ಹೆಣದ ಮುಖದ ಮೇಲೆ ತೀರ್ಥ ಚುಮುಕಿಸಿದ ಕೂಡಲೇ ಆ ಹೆಣಕ್ಕೆ ಜೀವ ಬರುತ್ತದೆ!! ಅಬ್ಬ ಎಂತಹ ಪವಾಡ. ಹೆಣ ಕಣ್ಣು ಬಿಟ್ಟು ಎದ್ದು ಬಿಡುತ್ತದೆ.

ಹೊಳೆಗೆರೆ ಹುಚ್ಚಮ್ಮನಿಗೆ ನಾವೂ ಅಂದರೆ ಟಿ.ವಿ. ವೀಕ್ಷಕರೂ ಕೂಡ ಅಡ್ಡ ಬಿದ್ದು ಕಡ್ಡಿ ಕರ್ಪೂರ ಹಚ್ಚಬೇಕು. ಹಾಗಿದೆ ಕಾರ್ಯಕ್ರಮದ ನಿರೂಪಣೆ. ಮುಗ್ಧ ವೀಕ್ಷಕರ ವಿವೇಚನಾ ಶಕ್ತಿಗೆ ಮಂಕು ಹಿಡಿಸುವಂತಹ ನಿರೂಪಣೆ. ಟಿ.ವಿ.9 ನ ಉದ್ದೇಶವೂ ಇದೇ ಇರಬಹುದೇ? ಹೌದು ಅನಿಸುತ್ತದೆ.

ಇಲ್ಲಿ ಏನು ನಡೆದಿದೆ ಎಂದು ಕೊಂಚ ವಿಮರ್ಶಾ ದೃಷ್ಟಿಯಿಂದ ನೋಡಿದರೆ ಇವರು ಕಟ್ಟಿರುವ (ಮೂಢ)ನಂಬಿಕೆಯ ಕಟ್ಟಡದ ಇಟ್ಟಿಗೆಗಳು ತರಗಲೆಗಳಂತೆ ಹಾರಿ ಹೋಗುತ್ತವೆ.

ಮೊದಲನೆಯದಾಗಿ ನರಬಲಿ, ನರ ಬಲಿ ಅಂತ ಎಷ್ಟೇ ನಿರೂಪಕ ಬೊಬ್ಬಿಟ್ಟರೂ ತಮ್ಮಡಿಯು 'ಬಲಿಯ' ಪ್ರಾಣ ತೆಗೆಯುವುದನ್ನೇನೂ ತೋರಿಸುವುದಿಲ್ಲ. ಬಲಿ ಕೊಡಲಾಯಿತು ಎಂದಷ್ಟೇ ಹೇಳಲಾಗುತ್ತದೆ. ವ್ಯಕ್ತಿಯು ಸತ್ತೇ ಹೋಗಿದ್ದಾನೆ ಉಸಿರಾಡುತ್ತಿಲ್ಲ, ನಾಡಿಬಡಿತ ಇಲ್ಲ ಅಂತ ಸರ್ಟಿಫಿಕೇಟ್ ಕೊಟ್ಟರಲ್ಲ ಸರ್ಕಾರಿ ವೈದ್ಯ ಮಹಾಶಯ, ಆತ ಈ ಪವಾಡದ ಸತ್ಯಾಸತ್ಯತೆಯನ್ನು ಪರೀಕ್ಷಿಸಲು ಬಂದ ಸತ್ಯ ಶೋಧಕನೇನೂ ಅಲ್ಲ. ಇದೇ ಊರಿನಲ್ಲಿ ಹುಟ್ಟಿ ಬೆಳೆದ ಇದೇ ಸೀಗ ಮಾರಮ್ಮ, ಹೊಳೆಗೆರೆ ಹುಚ್ಚಮ್ಮಂದಿರ ಭಕ್ತ. ಈಗ ವೈದ್ಯ ಗ್ರಾಮ ದೇವತೆಗೆ ವಿರುದ್ಧವಾಗಿ, ನೆರೆದ ಸಹಸ್ರಾರು ಭಕ್ತರ ನಂಬಿಕೆಯ ವಿರುದ್ಧ ಮಾತನಾಡುವ ಧೈರ್ಯ ಹೇಗಾದರೂ ಬಂದೀತು? ಆದರೆ ವ್ಯಕ್ತಿ ಸತ್ತಿದ್ದಾನೆಯೇ? ಸತ್ತಿದ್ದಾನೆಯೇ? ಎಂಬ ನಿರೂಪಕನ ಪ್ರಶ್ನೆಗೆ, ಮರು ಪ್ರಶ್ನೆಗೆ ವೈದ್ಯ 'ಅಲ್ ಮೋಸ್ಟ್' ಸತ್ತ ಹಾಗೆ ಅಂತ ಪದೇ ಪದೇ ಹೇಳುತ್ತಿದ್ದ. ಅಂದರೆ 'ಬಹುತೇಕ' ಸತ್ತ ಹಾಗೆ; ಆದರೆ ಸತ್ತಿಲ್ಲ.



ಬಲಿ ಕೊಡುವ ಈ 'ನರ' ನಿಗೆ ಹಬ್ಬಕ್ಕೆ ಒಂದು ತಿಂಗಳಿನಿಂದಲೂ ಮಡಿ, ಪಥ್ಯವಂತೆ. ಒಂದು ತಿಂಗಳ ಕಾಲ ಮುದ್ದೆ, ಅನ್ನ, ಸಾರು ಏನೂ ತಿನ್ನುವಂತಿಲ್ಲ. ದಿನಕ್ಕೆ ಒಂದೇ ಹೊತ್ತು ಮಾತ್ರ ಸ್ವಲ್ಪ ಎಂಥದೋ ಸೊಪ್ಪನ್ನು ಬೇಯಿಸಿ ಕೊಡಲಾಗುತ್ತದಂತೆ. ನಾಡಿ ಬಡಿತ ಕಡಿಮೆಯಾಗಿ, ಉಸಿರಾಟ ನಿಂತೇಹೋಗಿದೆ ಅನಿಸಲು ದೇಹ ಶಕ್ತಿ ಕಳೆದು ದುರ್ಬಲವಾದದ್ದೇ ಕಾರಣವಲ್ಲವೇ? ಉಸಿರಾಟ, ಎದೆಯ ಏರಿಳಿತ ಕಾಣದಂತೆ ಕಂಬಳಿಗಳನ್ನು ಮುಚ್ಚಿ ಸುತ್ತಲಾಗಿದೆಯಲ್ಲವೇ?. ಇನ್ನು ಮೂಗು ಬಾಯಿ ಬಂದ್ ಮಾಡುವ ಬಗ್ಗೆ. ಅರಿಶಿನ ಮೆತ್ತಿ ಬಾಯಿ ಬಂದ್ ಮಾಡಿದ್ದದ್ದು ನಿಜವೇ. ಆದರೆ ಮೂಗು ಬಂದ್ ಆಗಿರಲಿಲ್ಲ ಎಂಬುದು ಟಿ.ವಿ. ನೋಡಿದ ಯಾರಿಗೂ ಎದ್ದು ಕಾಣುತ್ತಿತ್ತು. ಆದರೂ ನಿರೂಪಕ ಬಾಯಿ ಮೂಗು ಎಲ್ಲಾ ಬಂದ್ ಆಗಿದೆ ಅಂತ ಪದೇ ಪದೇ ಬೊಂಬಡ ಬಜಾಯಿಸುತ್ತಿದ್ದುದು ಮಾತ್ರ ವಿಚಿತ್ರವಾಗಿತ್ತು.

ಇನ್ನೂ ಅಘಾತಕಾರಿ ಅಂಶವೆಂದರೆ ಈ 'ನಿಗೂಢ ಪವಾಡ' ವನ್ನು 'ಭಯಾನಕ, ಭೀಕರ, ಕುತೂಹಲಕರ' ಮಾಡಲು ಬಳಸಿರುವ ತಂತ್ರ. ಕಾಡು ಮನುಷ್ಯರ ನರಬಲಿಗೆ ಸಂಬಂಧಿಸಿದ ಯಾವುದೋ ಇಂಗ್ಲೀಷ್ ಚಲನಚಿತ್ರದ ದೃಶ್ಯಗಳನ್ನು ಬಳಸಿಕೊಳ್ಳಲಾಗಿದೆ. ಇನ್ನು ನೆರಳು, ಕತ್ತಲೆ, ಅಸ್ಪಷ್ಟತೆ, ಎದೆ 'ಜಲ್ಲೆನಿಸುವ' ಸಂಗೀತವನ್ನು ಬಳಸುವುದು ಇದ್ದೇ ಇದೆ.

ಇಲ್ಲಿ ಇನ್ನೊಂದು ದುರಂತವಿದೆ, ಹಿಂದೆ ಯಾವುದೋ ಒಬ್ಬ ಬಲಿ ನೇಮ, ನಿಷ್ಠೆ, ಸರಿಯಾಗಿ ಪಾಲಿಸದೇ ಹೋಗಿದ್ದಕ್ಕೆ ಸತ್ತವನು ಮತ್ತೇ ತೀರ್ಥ ಚುಮುಕಿಸಿದಾಗಲೂ ಏಳದೇ ಕೊನೆಗೂ ಸತ್ತೇ ಹೋದನಂತೆ. ಆತನನ್ನು ಹೂಳಲಾಯಿತಂತೆ. ಇದಾದ ಮೂರು ತಿಂಗಳ ನಂತರ ದೇವಿಯ ಆಜ್ಞೆಯಂತೆ ಮತ್ತೆ ಹೆಣವನ್ನು ಅಗೆದು ತೆಗೆಯಲಾಯಿತಂತೆ. ಹೆಣ ಏನೊಂದು ಚೂರು ಕೆಡದಂತೆ ಹಾಗೆ ಇತ್ತಂತೆ. ಪೂಜೆ ಮಾಡಿ ಮುಖದ ಮೇಲೆ ತೀರ್ಥ ಹಾಕಿದ ಕೂಡಲೇ ಆತ ಎದ್ದು ಕಣ್ಣುಬಿಟ್ಟನಂತೆ.

ಈ ಅಂತೆ ಕಂತೆಯನ್ನು ಬಾಯಿಮಾತಿನಲ್ಲಿ ನಿರೂಪಕ ಹೇಳಿದ್ದರೂ ಆಗುತ್ತಿತ್ತು. ಆದರೆ ಹಾಗೆ ಮಾಡದೇ ಕೃತಕವಾಗಿ ಚಿತ್ರೀಕರಿಸಿದ ಈ ಘಟನೆಗಳ ದೃಶ್ಯಾವಳಿಗಳನ್ನು ಊರ ಹಬ್ಬದ ನೈಜ ಘಟನಾವಳಿಗಳೊಂದಿಗೆ ತೋರಿಸಲಾಯಿತು. 'ಮರುಸೃಷ್ಟಿ' ಅಂತ ಟಿವಿ ಪರದೆ ಮೇಲೆ ಮೂಲೆಯಲ್ಲಿ ಅಕ್ಷರಗಳು ಕಂಡು ಬಂದರೂ ಅನಕ್ಷರಸ್ಥರಿಗೆ, ಹೆಚ್ಚು ವಿದ್ಯಾಭ್ಯಾಸ, ತಿಳುವಳಿಕೆ ಇಲ್ಲದವರಿಗೆ ಅದು ಅರ್ಥವಾಗುವುದೇ? ಅದೆಲ್ಲಾ ಯಾರಿಗೆ ಬೇಕಾಗಿದೆ. ಉತ್ತಮ ಸಮಾಜಕ್ಕಾಗಿ ಟಿವಿ 9 ಎಂದು ಈ ಚಾನಲ್‌ನ ಘೋಷಣೆ ಸಾರುತ್ತದೆ. ಅದನ್ನು ನಾವು ನಂಬಬಹುದೇ?

ನೋಡಲಾಗದು ಶರಣಂಗೆ
ನೋಡದೆಯೂ ಇರಲಾಗದು
ಮಾಡಲಾಗದು ಶರಣಂಗೆ
ಮಾಡದೆಯೇ ಇರಲಾಗದು
ಆಡಲಾಗದು ಶರಣಂಗೆ
ಆಡದೆಯೇ ಇರಲಾಗದು

ಲಾಭ ನಷ್ಟದ ತಃಖ್ತೆಯಲ್ಲ ; ಪ್ರೀತಿಯ ಬಂಧನ

ಎಂಬ ಬಸವಣ್ಣನ ವಚನಗಳೊಂದಿಗೆ ಜನಶಕ್ತಿ ವಾರಪತ್ರಿಕೆಯ ಸಂಪಾದಕ ಎಸ್.ವೈ.ಗುರುಶಾಂತರವರು ಮಂಗಳೂರಿನಲ್ಲಿ ನೂತನ ವಧು-ವರರನ್ನು ಹಾರ್ದಿಕವಾಗಿ ಶುಭಾಶಯ ಕೋರಿ ಮಾತುಗಳನ್ನು ನಿಲ್ಲಿಸಿದಾಗ ಸುಮಾರು 700 ಕ್ಕೂ ಮಿಕ್ಕಿದ ಸಭೆಯಲ್ಲಿ ರೋಮಾಂಚನ ಮತ್ತು 'ಶೂನ್ಯತೆ' ಆವರಿಸಿತು. ತದೇಕಚಿತ್ತದಿಂದ ಭಾಷಣವನ್ನು ಆಲಿಸುತ್ತಿದ್ದ ಜನ ಸಮೂಹ ಇನ್ನು ಕೆಲ ಮಾತುಗಳಿಗಾಗಿ ತವಕಪಡುತ್ತಿದ್ದದ್ದು ಕಾಣ ಬರುತ್ತಿತ್ತು. ಮಂಗಳೂರಿನ ಹೊರವಲಯ ಕಾವೂರಿನಲ್ಲಿ 13.01.2008ರಂದು ಡಿವೈಎಫ್‌ಐನ ನಾಯಕ ದಯಾನಂದ ಶೆಟ್ಟಿ ಮತ್ತು ಸರಿತಾರವರು ಸತಿಪತಿಗಳಾದ ಸನ್ನಿವೇಶದಲ್ಲಿ ಜರುಗಿದ ಸರಳ ಸಮಾರಂಭದಲ್ಲಿ ಎಸ್.ವೈ.ಗುರು ಶಾಂತ್‌ರವರು ರಾಜ್ಯದ ಸಿಪಿಐ(ಎಂ) ಮತ್ತು ಇತರ ಪ್ರಗತಿಪರ ಪ್ರಜಾಸತ್ತಾತ್ಮಕ ಶಕ್ತಿಗಳ ಪರವಾಗಿ ಮಾಡಿದ ಸುಮಾರು 15 ನಿಮಿಷಗಳ ಕಾಲದ ಹಾರೈಕೆಯ ಭಾಷಣ ಎಲ್ಲರ ಗಮನ ಸೆಳೆಯಿತು.

ಸರಳ ವಿವಾಹ ವಿರಳವಾಗಿದೆ ಎಂಬ ವಿಶಿಷ್ಟ ಪದಸಂಕುಲದೊಂದಿಗೆ ಸಭೆಯ ಗಮನವನ್ನು ತನ್ನತ್ತ ಕೇಂದ್ರೀಕರಿಸಿಕೊಂಡು ಎಸ್.ವೈ.ಗುರುಶಾಂತ್ ರವರು ಬಸವಣ್ಣರ ಹಲವಾರು ವಚನಗಳನ್ನು ಸಮಕಾಲೀನ ಸನ್ನಿವೇಶದಲ್ಲಿ ಮದುವೆ ಎಂಬ ವ್ಯವಸ್ಥೆ ಪಡೆದುಕೊಂಡಿರುವ ಅರ್ಥವನ್ನು ಒರೆಗೆ ಹಚ್ಚಿದರು. ಮುಂದುವರಿದು ಮಾತನಾಡಿದ ಅವರು ಪ್ರಕೃತಿ ದತ್ತವಾದ ಹೆಣ್ಣು ಗಂಡಿನ ಸಂಬಂಧಗಳೆಲ್ಲವನ್ನು ಲಾಭ ನಷ್ಟದ ತಃಖ್ತೆಯಲ್ಲಿ ನಿರ್ಧರಿಸುವ ಜಾಯಾಮಾನದ ಬಗ್ಗೆ ವಿವಿಧ ಉದಾಹರಣೆಗಳ ಮೂಲಕ ವಿಶ್ಲೇಷಿಸಿದರು. ಕರಾವಳಿಯಲ್ಲಿ ವರದಕ್ಷಿಣೆಯ ಕಬಂದ ಬಾಹುವಿನ ಬಗ್ಗೆ ವಿಶೇಷವಾಗಿ ಉಲ್ಲೇಖಿಸುತ್ತಾ, ಬಂಟ ಸಮುದಾಯದ ಹೆಣ್ಣು ಹೆತ್ತ ಕುಟುಂಬಗಳ ಆಕ್ರಂದನದ ಬದುಕನ್ನು ವರ್ಣಿಸುವಾಗ ಸಮಾರಂಭದಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ಭಾಗವಹಿಸಿದ ಜನತೆ ಮೌನ ಸಮ್ಮತಿಯ ಮೂಲಕ ತಲೆದೂಗಿದರು. ಹೆಣ್ಣುಭ್ರೂಣ ಹತ್ಯೆಯ ಬಗ್ಗೆಯೂ ವಿವರ ಚೆಲ್ಲಿದರು.



ಒಟ್ಟಿನಲ್ಲಿ ಮದುವೆ ಸಮಾರಂಭದ ಶುಭ ಹಾರೈಕೆಯ ಸೈದ್ಧಾಂತಿಕ ಮಂಥನವನ್ನು ಜನತೆಗೆ ಉಣಬಡಿಸಿದಂತಾಯಿತು.

ಸರಳ, ಸಾಂಕೇತಿಕವಾಗಿ ಒಂದೆರಡು ನಿಮಿಷದಲ್ಲಿ ಮುಗಿದಂತಹ ಮದುವೆಯ ವಿಧಿ ವಿಧಾನ ಮತ್ತು ತುಳುನಾಡಿನ ಸಾಂಸ್ಕೃತಿಕ ಹಿನ್ನೆಲೆಯ ಕೆಲವು ಹಾಡುಗಳ ಕಾರ್ಯಕ್ರಮ ಎಲ್ಲರಿಗೂ ಹೊಸ ದೃಷ್ಟಿಕೋನವನ್ನು ನೀಡಿದ ಘಟನೆಯಾಯಿತು. ಸಿಪಿಐ(ಎಂ)ನ ಹಲವಾರು ನಾಯಕರುಗಳ ಡಿವೈಎಫ್‌ಐನ ಹಲವಾರು ನಾಯಕರುಗಳು ಪ್ರಗತಿಪರ ಸಾಹಿತಿ, ಚಿಂತಕರುಗಳು, ಕಾರ್ಮಿಕ ನಾಯಕರುಗಳು ಈ ಸಮಾರಂಭದಲ್ಲಿ ಭಾಗವಹಿಸಿ ಶುಭಾಶಯ ಅರ್ಪಿಸಿದರು. ಈ ಸಂದರ್ಭದ ಸವಿ ನೆನಪಿಗಾಗಿ ನವದಂಪತಿಗಳು ಜನಶಕ್ತಿಗೆ 250.00 ರೂ.ಗಳ ದೇಣಿಗೆ ನೀಡಿದರು

- ವಿವೇಕಾನಂದ

ಪ್ರಧಾನಿ ಚೈನಾ ಭೇಟಿ : ಬಹು ಧ್ರುವೀಯತೆಯೆಡೆಗೆ ಮಹತ್ವದ ಹೆಜ್ಜೆ

ಭಾರತದ ಪ್ರಧಾನಿ ಡಾ.ಮನಮೋಹನ್‌ಸಿಂಗ್ ಅವರ ಇತ್ತೀಚಿನ ಚೀನಾ ಭೇಟಿಯು ಹಲವು ದೃಷ್ಟಿಯಿಂದ ಭಾರೀ ಯಶಸ್ವಿಯಾಗಿದೆ. ಈ ಭೇಟಿಯಿಂದಾಗಿ ಏಷ್ಯಾದ ಎರಡು ಬೃಹತ್ ರಾಷ್ಟ್ರಗಳ ನಡುವಿನ ಸಂಬಂಧಗಳು ಮತ್ತಷ್ಟು ಸಕಾರಾತ್ಮಕ ಮುನ್ನಡೆ ಸಾಧಿಸಿವೆ. ಈ ಸಂದರ್ಭದಲ್ಲಿ ಹೊರಡಿಸಲಾದ ದಾಖಲೆಯು ಈ ಭೇಟಿಯನ್ನು "21ನೇ ಶತಮಾನಕ್ಕಾಗಿ ಭಾಗೀದಾರರ ಕಣ್ಣೋಟ" ಎಂದು ವಿಶ್ಲೇಷಿಸಿದೆ.

ಭಾರತದ ಪ್ರಧಾನಿಯ ಈ ಮಹತ್ವದ ಭೇಟಿಯ ಸಂದರ್ಭದಲ್ಲಿ ಒಟ್ಟು 10 ದ್ವಿಪಕ್ಷೀಯ ಒಪ್ಪಂದಗಳಿಗೆ ಎರಡು ದೇಶಗಳು ಸಹಿ ಹಾಕಿವೆ. ಅದರಲ್ಲಿ ಪ್ರಮುಖವಾಗಿ ಪರಸ್ಪರ ರೈಲ್ವೆ ಸಂಪರ್ಕವನ್ನು ವಿಸ್ತರಿಸುವುದು, ವಸತಿ, ಭೂ ಸಂಪನ್ಮೂಲ, ಸಾಂಸ್ಕೃತಿಕ ವಿನಿಮಯ, ಭೂವಿಜ್ಞಾನಕ್ಕೆ ಸಂಬಂಧಿಸಿ, ಸಾಂಪ್ರದಾಯಿಕ ವೈದ್ಯಕೀಯ ಪದ್ಧತಿ ಕುರಿತು ಕೃಷಿ ಮತ್ತು ಭಾರತದ ತಂಬಾಕನ್ನು ಚೈನಾಗೆ ರಫ್ತು ಮಾಡುವ ಅಂಶಗಳು ಸೇರಿವೆ. ಈ ಒಪ್ಪಂದಗಳಲ್ಲದೆ ಎರಡು ದೇಶಗಳ ನಡುವೆ ಬರುವ ದಿನಗಳಲ್ಲಿ ಉನ್ನತ ರಾಜಕೀಯ ಸಂಬಂಧಗಳನ್ನು ವೃದ್ಧಿಗೊಳಿಸುವ ಒಪ್ಪಂದಕ್ಕೆ ಎರಡೂ ದೇಶಗಳು ಒಪ್ಪಂದಕ್ಕೆ ಬಂದಿವೆ ಮತ್ತು 2009 ಇಸ್ವಿಯಲ್ಲಿ ಭಾರತದ ರಾಷ್ಟ್ರಪತಿಗಳು ಚೀನಾಕ್ಕೆ ಭೇಟಿ ನೀಡಬೇಕೆಂಬ ಆಹ್ವಾನವನ್ನು ಚೈನಾ ನೀಡಿದ್ದರೆ, ಅದೇ ವೇಳೆಗೆ ಚೈನಾದ ರಾಷ್ಟ್ರೀಯ ಪಿಪಲ್ಸ್ ಕಾಂಗ್ರೆಸ್‌ನ ಅಧ್ಯಕ್ಷರು ನಮ್ಮಲ್ಲಿಗೆ ಭೇಟಿ ನೀಡಬೇಕೆಂಬ ಆಹ್ವಾನವನ್ನು ಭಾರತ ನೀಡಿದೆ. ಅಲ್ಲದೆ ಎರಡು ದೇಶಗಳ ವಿದೇಶಾಂಗ ಸಚಿವರುಗಳು ಈ ವರ್ಷದ ಕೊನೆಯಲ್ಲಿ ಪರಸ್ಪರ ಭೇಟಿ ನೀಡುವ ಬಗ್ಗೆ ಒಮ್ಮತಕ್ಕೆ ಬರಲಾಗಿದೆ.

'ಭಾಗಿದಾರರ ಕಣ್ಣೋಟ'

ಈ ಭೇಟಿಯ ಸಂದರ್ಭದಲ್ಲಿ ಹೊರ ತಂದಿರುವ "ಇಂಡೋ ಚೈನಾ ಭಾಗೀದಾರರ ಕಣ್ಣೋಟ" ಎಂಬ ದಾಖಲೆಯೂ ಜಾಗತೀಕವಾಗಿ ಡಬ್ಲ್ಯೂಟಿಒ ಹವಾಗುಣ ಬದಲಾವಣೆ ಸೇರಿದಂತೆ ಹಲವಾರು ವಿಚಾರಗಳಲ್ಲಿ ಸರ್ವಸಮ್ಮತ ಅಭಿಪ್ರಾಯವನ್ನು ವ್ಯಕ್ತಪಡಿಸಿದೆ. ದ್ವಿಪಕ್ಷೀಯ ಸಂಬಂಧದ ಕುರಿತಂತೆ ಪ್ರಮುಖವಾಗಿ ಪ್ರದೇಶವಾರು ವಾಣಿಜ್ಯ ಒಪ್ಪಂದಕ್ಕೆ ಒತ್ತು ನೀಡಲಾಗಿದೆ ಮತ್ತು ವಿಶೇಷವಾಗಿ ವಿಶ್ವಸಂಸ್ಥೆಯ ಭದ್ರತಾ ಮಂಡಳಿಯಲ್ಲಿ ಭಾರತ ಪ್ರಮುಖ ಪಾತ್ರ ವಹಿಸಬೇಕೆಂಬ ಅಭಿಪ್ರಾಯಕ್ಕೆ ಮತ್ತು ನಾಗರೀಕ ಅಣುಶಕ್ತಿ ವಿಚಾರದಲ್ಲಿ ದ್ವಿಪಕ್ಷೀಯ

ಗಡಿವಿವಾದ ಪರಿಹರಿಸುವ ನಿಟ್ಟಿನಲ್ಲಿ ಹೆಚ್ಚಿನ ಪ್ರಗತಿ ಕಾಣದಿದ್ದರೂ ಇತರೇ ವಿಷಯಗಳಲ್ಲಿ ಆಗಿರುವ ಮುನ್ನಡೆ ಗಮನಾರ್ಹವಾದುದು

ಮಾತುಕತೆ ನಡೆಸಬೇಕೆಂಬ ಭಾರತದ ನಿಲುವಿಗೆ ತನ್ನ ಬೆಂಬಲ ವ್ಯಕ್ತಪಡಿಸಿದೆ.

ಆದಾಗ್ಯೂ ಈ ದಾಖಲೆಯು ಎರಡೂ ದೇಶಗಳ ನಡುವಿನ ಗಡಿವಿವಾದಕ್ಕೆ ಸಂಬಂಧಿಸಿ ಯಾವುದೇ ಮಹತ್ವದ ನಿರ್ಣಯಕ್ಕೆ ಬರುವ ಸೂಚನೆಯನ್ನೇನೂ ನೀಡಿಲ್ಲ. ಆ ಬಗ್ಗೆ ದಾಖಲೆಯು ಹೀಗೆ ಹೇಳಿದೆ "ನ್ಯಾಯಯುತ, ಸಮಂಜಸ ಮತ್ತು ಪರಸ್ಪರ ಒಪ್ಪುವ ಪರಿಹಾರ" ಇದು 2005ರಲ್ಲಿ ಅಂಗೀಕರಿಸಲಾದ ರಾಜಕೀಯ ನೀತಿಗೆ ಮತ್ತು ಆ ಮಾರ್ಗದರ್ಶಿ ತತ್ವಕ್ಕೆ ಅನುಗುಣವಾಗಿರುತ್ತದೆ ಎಂದು ಸ್ಪಷ್ಟಪಡಿಸಿದೆ. ಇದರಿಂದಾಗಿ ಎರಡೂ ದೇಶಗಳ ನಡುವಿನ ಸಂಬಂಧ ಸುಧಾರಣೆಗಾಗಿ ಎದುರು ನೋಡುತ್ತಿದ್ದವರಿಗೆ ಈ ಸಮಯದಲ್ಲಿ ನಿರಾಶೆಯಾಗಿರಬಹುದು. ಆದರೆ ಬಹಳ ಮುಖ್ಯವಾಗಿ ನಾವು ತಿಳಿದುಕೊಳ್ಳಬೇಕಾದುದ್ದು ಗಡಿವಿಚಾರದಲ್ಲಿ ಇನ್ನೂ ಎರಡು ದೇಶಗಳ ನಡುವೆ ಸಾಕಷ್ಟು ದ್ವಿಪಕ್ಷೀಯ ಮಾತುಕತೆಗಳು ನಡೆಯಬೇಕಿದೆ. ಆದರೆ ಅದೇ ವೇಳೆಗೆ ಇತರೆ ರಂಗಗಳಲ್ಲಿ ಎರಡೂ ದೇಶಗಳ ನಡುವಿನಲ್ಲಿ ಮತ್ತಷ್ಟು ಸಹಕಾರ ಗಟ್ಟಿಗೊಳಿಸುವ ಪ್ರಕ್ರಿಯೆ ನಡೆಯಬೇಕಿದೆ. ಚೈನಾವು ಹಿಂದಿನ ಸೋವಿಯತ್ ರಷ್ಯಾದೊಂದಿಗೆ ಇದ್ದು ತನ್ನ ಗಡಿವಿವಾದವನ್ನು ಬಗೆಹರಿಸಿಕೊಳ್ಳಲು ಏಳು ದಶಕಗಳನ್ನು ತೆಗೆದುಕೊಂಡಿತ್ತು ಎಂಬ ಸಂಗತಿಯನ್ನು ನಾವು ನೆನಪಿಸಿಕೊಳ್ಳಬೇಕಿದೆ.

ವೃದ್ಧಿಸಿದ ಆರ್ಥಿಕ ಸಹಕಾರ

ಈ ಹಿನ್ನೆಲೆಯಲ್ಲಿ ಈ ಎರಡೂ ದೇಶಗಳ ನಡುವಿನ ಆರ್ಥಿಕ ಸಹಕಾರ ಮತ್ತಷ್ಟು ಬಲಗೊಳ್ಳುವುದು ಅಗತ್ಯವಾಗಿವೆ. ಅಲ್ಲಿ ನಡೆದ ಶೃಂಗಸಭೆಯಲ್ಲಿ ಭಾರತದ ಪ್ರಧಾನಿಯ ನೇತೃತ್ವದಲ್ಲಿ ಪಾಲ್ಗೊಂಡ ವಾಣಿಜ್ಯ ನಿಯೋಗದೊಂದಿಗೆ ಚೈನಾದ 300ಕ್ಕಿಂತ ಅಧಿಕ ಸರ್ಕಾರಿ ಪ್ರತಿನಿಧಿಗಳು, ವಾಣಿಜ್ಯ ಪ್ರತಿನಿಧಿಗಳು ಪಾಲ್ಗೊಂಡಿದ್ದರು.

ಈ ಹಿಂದೆ 2010ರೊಳಗಾಗಿ 40 ಬಿಲಿಯನ್ ದ್ವಿಪಕ್ಷೀಯ ವಾಣಿಜ್ಯ ವ್ಯವಹಾರ ನಡೆಸಬೇಕೆಂಬ ಗುರಿಯನ್ನು ಎರಡೂ ದೇಶಗಳು ಇಟ್ಟುಕೊಂಡಿದ್ದರೂ ಅದನ್ನು 2007ರಲ್ಲೇ ತಲುಪಲಾಗಿದೆ. ಈ ಭೇಟಿಯ



ಸಂದರ್ಭದಲ್ಲಿ 2010ರೊಳಗಾಗಿ 60 ಬಿಲಿಯನ್ ಗುರಿಯನ್ನು ಎರಡೂ ಕಡೆಗಳಿಂದಲೂ ಹೊಂದಲಾಗಿದೆ ಎಂದು ಘೋಷಿಸಲಾಗಿದೆ.

ಹಲವಾರು ನಿರ್ಬಂಧಗಳ ಹೊರತಾಗಿಯೂ, ರಕ್ಷಣಾತ್ಮಕ ಅಂಶಗಳ ಹೊರತಾಗಿಯೂ ಈ ಆರ್ಥಿಕ ಬೆಳವಣಿಗೆ ಸಾಧಿಸಿರುವುದನ್ನು ಗಮನಿಸಿದರೆ ಎರಡು ದೇಶಗಳ ನಡುವಿನ ಆರ್ಥಿಕ ಸಹಕಾರಕ್ಕೆ ಸಾಕಷ್ಟು ಫಲವತ್ತತೆ ಇದೆ ಎಂಬುದು ಗೊತ್ತಾಗುತ್ತಿದೆ. ಈ ಹಿನ್ನೆಲೆಯಲ್ಲಿ ಭಾರತವೂ ತನ್ನ ವೀಸಾ ನಿರ್ಬಂಧಕ್ಕೆ ಸಂಬಂಧಿಸಿ ಮತ್ತು ಜಾಗತಿಕವಾಗಿ ಟೆಂಡರ್‌ನಲ್ಲಿ ಭಾಗವಹಿಸುವ ಅರ್ಹತೆ ಹೊಂದಿದ್ದಾಗ್ಯೂ ಭಾರತದಲ್ಲಿ ಹಲವಾರು ಚೈನಾದ ಕಂಪನಿಗಳನ್ನು ತನ್ನ "ಕಪ್ಪು ಪಟ್ಟಿ"ಯಲ್ಲಿ ಸೇರಿಸಿರುವುದನ್ನು ಹಿಂತೆಗೆಯಲು ಗಂಭೀರವಾಗಿ ಚಿಂತಿಸಬೇಕಿದೆ. (ಕೇರಳದ ಸೀಪೋರ್ಟ್‌ನ ಟೆಂಡರ್‌ನಲ್ಲಿ ಚೈನಾದ ಆಫ್‌ಶೋರ್ ಕಂಪನಿ ಭಾಗವಹಿಸಲು ಸಾಧ್ಯವಾಗಿಲ್ಲ) ಈ ಹಿನ್ನೆಲೆಯಲ್ಲಿ ಚೈನಾ ಮತ್ತು ತೈವಾನ್ ನಡುವಿನ ಆರ್ಥಿಕ ಸಹಕಾರಕ್ಕೆ ಸಂಬಂಧಿಸಿದ ಅಂಶಗಳನ್ನು ವಿಶೇಷವಾಗಿ ಗುರ್ತಿಸಬೇಕಿದೆ.

ಚೈನಾವು ಹಾಂಕಾಂಗ್ ಮತ್ತು ಮಾಕ್ಯೂಗಳ ವಿಚಾರದಲ್ಲಿ ಯಶಸ್ವಿ ಮರು ಹಸ್ತಾಂತರ ನಂತರ ತೈವಾನ್ ವಿಷಯವಾಗಿಯೂ ಅದೇ ದಾರಿಯಲ್ಲಿ ನಡೆದಿದೆ. ಆ ಮೂಲಕ ತೈವಾನ್ ಚೈನಾದ ಅವಿಭಾಜ್ಯ ಅಂಗವೆಂದೇ ಭಾವಿಸಿಕೊಂಡಿದೆ. ಚೈನಾದೊಂದಿಗೆ ಹಲವಾರು ವೈರುಧ್ಯಗಳನ್ನು ಹೊಂದಿದ್ದಾಗ್ಯೂ ತೈವಾನ್ ಚೈನಾದ ಪ್ರಮುಖ ಆರ್ಥಿಕ ವಾಣಿಜ್ಯ ಬಂಡವಾಳ ಹೂಡಿಕೆದಾರನಾಗಿ ಮುಂದುವರಿದಿದೆ.

ಬಹುಧ್ರುವೀಯತೆ ಕಡೆಗೆ

ಈ ಭೇಟಿಯ ಅತಿ ಮಹತ್ವದ ಅಂಶವೆಂದರ ಎರಡೂ ದೇಶಗಳ ನಡುವಿನ ಸಂಬಂಧ ವೃದ್ಧಿಗೆ ವಿಶಾಲವಾದ ಅವಕಾಶವಾಗಿರುವುದು. ಪಾಕಿಸ್ತಾನದಲ್ಲಿನ ಬೆಳವಣಿಗೆಗಳ ಕುರಿತು ಅತೀವ ಆಸಕ್ತಿ ಮತ್ತು ಭಯೋತ್ಪಾದನೆಯ ಬೆದರಿಕೆಯನ್ನು ನಿರ್ಮೂಲನಗೊಳಿಸಲು ಜಂಟಿಯಾದ ಪ್ರಯತ್ನಕ್ಕೆ ಗಮನಹರಿಸಲಾಗಿದೆ ಮತ್ತು ಮುಖ್ಯವಾದ ಸಂಗತಿಯೆಂದರೆ ಭಾರತ ಮತ್ತು ಚೈನಾಗಳೆರಡು ಬಲಿಷ್ಠ ಆರ್ಥಿಕತೆಯನ್ನು ಹೊಂದಿದ ಎರಡೂ ದೇಶಗಳಾಗಿ ರಷ್ಯಾದ ಜೊತೆಗೆ ಜಗತ್ತಿನಲ್ಲಿ ತಮ್ಮದೇ ಛಾಪು ಮೂಡಿಸಲು ಕೆಲಸ ಮಾಡಲು ಮುಂದಾಗಿರುವುದು. ಈ ಗುರ್ತಿಸುವಿಕೆಯೇ ಜಾಗತಿಕವಾಗಿ ಬಹುದ್ರುವೀಯತೆಗೆ ಸಹಾಯಕವಾಗಲಿದೆ. ಎರಡೂ ದೇಶಗಳು ಒಪ್ಪಿಕೊಂಡಿರುವ ಘೋಷಣೆಯ ಕಣ್ಣೋಟವೂ ಹೀಗೆ ಒತ್ತು ನೀಡಿದೆ ಎಂದು ಹೇಳಿದೆ. "ಭಾರತ ಚೈನಾದ ಸಂಬಂಧಗಳು ಯಾವುದೇ ದೇಶವನ್ನು ಗುರಿಯಾಗಿಸಿಕೊಂಡಿಲ್ಲ ಅಥವಾ ಈ ಎರಡೂ ದೇಶಗಳು ಇತರೆ ದೇಶಗಳೊಂದಿಗೆ ಹೊಂದಿರುವ ಸ್ನೇಹತ್ವದ ಮೇಲೆ ಯಾವುದೇ ಪರಿಣಾಮ ಬೀರಲಾರವು" ಎಂದಿದೆ.

ಭಾರತದ ಪ್ರಧಾನಿಯು ಈ ಐತಿಹಾಸಿಕ ಭೇಟಿಯನ್ನು ಚೈನಾದ ಮಾದ್ಯಮಗಳು ಅತಿ ಮಹತ್ವ ನೀಡಿ ಪ್ರಸಾರ ಮಾಡಿವೆ. ಚೈನೀಸ್ ಅಕಾಡೆಮಿ ಆಫ್ ಸೋಷಿಯಲ್ ಸೈನ್ಸ್‌ನಲ್ಲಿ ಪ್ರಧಾನಿ ಮಾಡಿದ ಭಾಷಣವನ್ನು ಎರಡೂ ಸರ್ಕಾರಗಳ ಸರ್ಕಾರಿ ದೂರದರ್ಶನಗಳು ನೇರ ಪ್ರಸಾರ ಕೂಡ ಮಾಡಿವೆ.

ಈ ಭೇಟಿಯಿಂದಾಗಿ ಎರಡೂ ದೇಶಗಳ ನಡುವಿನ ದ್ವಿಪಕ್ಷೀಯ ಸಂಬಂಧಗಳನ್ನು ವೃದ್ಧಿಗೊಳಿಸಲು ಮುನ್ನಡೆದಂತಾಗಿದೆ. ಮಾತ್ರವಲ್ಲ, ಎರಡು ದೇಶಗಳು ಅಂತರಾಷ್ಟ್ರೀಯ ವ್ಯವಹಾರಗಳಲ್ಲಿ ತಮ್ಮ ಪಾತ್ರವನ್ನು ಹೆಚ್ಚಿಸಿಕೊಳ್ಳಲು ಸಹಾಯಕವಾಗಲಿದೆ. ಹಾಗಾಗಿ ಭಾರತ ಮತ್ತು ಚೈನಾ ದೇಶಗಳೆರಡು ಪರಸ್ಪರ ಹಿತಾಸಕ್ತಿಗಳಾಗಿ ಈ ಪ್ರಕ್ರಿಯೆಯಲ್ಲಿ ಮುನ್ನಡೆ ಸಾಧಿಸಬೇಕೆಂಬುದು ಸ್ಪಷ್ಟವಾಗಿದೆ.

ಕೋಮುವಾದಿಗಳ ಸಂಚು....

ಪುಟ 9 ರಿಂದ

ಬಿಜೆಪಿ ಆಳ್ವಿಕೆಯಲ್ಲಿರುವ ರಾಜ್ಯಗಳ ಅನುಭವಗಳು

ಕರ್ನಾಟಕವನ್ನು ಗುಜರಾತ್ ಮಾಡುವುದಾಗಿಯೂ, ಅದೇ ಮಾದರಿ ಎಂದು ಬಿಂಬಿಸಲಾಗುತ್ತಿರುವ ಬಿಜೆಪಿ ಆಡಳಿತದ ಪರಿಣಾಮಗಳನ್ನು ನೆನಪಿಸಿಕೊಳ್ಳಬೇಕಿದೆ. ಗುಜರಾತ್‌ನಲ್ಲಿ ನಡೆದ ಜನಾಂಗೀಯ ಹತ್ಯಾಕಾಂಡದಲ್ಲಿ 3000ಕ್ಕೂ ಅಧಿಕ ಮುಸ್ಲಿಂ ಅಲ್ಪಸಂಖ್ಯಾತರನ್ನು ಕೊಂದ ಫ್ಯಾಶಿಷ್ಟ್ ಕ್ರೌರ್ಯವೇ ಆ ಮಾದರಿಯಾಗಿದೆ. ಈ ನಂತರದಲ್ಲಿ ಮುಸ್ಲಿಂರನ್ನು ನಿರಂತರವಾಗಿ ತುಳಿಯಲಾಗಿದೆ. ಅವರ ವ್ಯಾಪಾರ, ಉದ್ಯೋಗ - ಆರ್ಥಿಕ ಬದುಕಿನ ಮೇಲೆ ಸತತ ಧಾಳಿಗಳು ನಡೆಯುತ್ತಲೇ ಇದ್ದು ನೆಮ್ಮದಿಯಿಂದ ವಾಸಿಸಿದಂತಹ ಸ್ಥಿತಿ ನಿರ್ಮಾಣವಾಗಿದೆ. ಕೋಮು ದ್ವೇಷದ ಹೆಡೆ ಎತ್ತಿದೆ. ರಾಜಸ್ತಾನ, ಮದ್ಯಪ್ರದೇಶ, ಛತೀಸ್ ಘಡ್ ಹಾಗೂ ಪಾಲುದಾರನಾಗಿರುವ ಒರಿಸ್ಸಾ ರಾಜ್ಯಗಳಲ್ಲಿ ಶಿಕ್ಷಣದ ಕೋಮುವಾದೀಕರಣ ತೀವ್ರಗೊಂಡಿದೆ, ಪಠ್ಯ ಪುಸ್ತಕಗಳನ್ನು ಬದಲಾಯಿಸಲಾಗಿದೆ. ಮುಸ್ಲಿಂ, ಕ್ರಿಶ್ಚಿಯನ್, ಅಲ್ಪಸಂಖ್ಯಾತರ ಮೇಲೆ ಧಾಳಿ ನಡೆಸಲಾಗುತ್ತಿದ್ದು ಗುಜರಾತ್‌ನ ಮಾದರಿಯ ಪ್ರಯೋಗಗಳು ಅಲ್ಲೆಲ್ಲಾ ಆರಂಭಗೊಂಡಿವೆ. ಗುಜರಾತ್‌ನಲ್ಲಿ ಬಡವರು, ರೈತರು, ಕಾರ್ಮಿಕರು, ದುರ್ಬಲರ ಜೀವನದ ಮೇಲೆ ಸತತಧಾಳಿ ನಡೆದೇ ಇದೆ. ಆರ್ಥಿಕ-ಸಾಮಾಜಿಕ ತಾರತಮ್ಯ ಅಪಾರವಾಗಿದೆ. ಇಂತಹ ಮಾದರಿಯು ಜನತೆಯಲ್ಲಿ ಭಯಹುಟ್ಟಿಸುತ್ತಿದೆ.

ಹಾಗೆಯೇ ಕೇಂದ್ರದಲ್ಲಿ ಬಿಜೆಪಿ ಅಧಿಕಾರವಿದ್ದಾಗ ವಾಜಪೇಯಿ ಸರ್ಕಾರದ ಜನದ್ರೋಹಿ, ದೇಶವಿರೋಧಿ, ಕೋಮುದ್ವೇಷ ಬಿತ್ತಿದ ನೀತಿಯ ಭ್ರಷ್ಟ ಆಡಳಿತವನ್ನು ನೆನಪಿಸಿಕೊಳ್ಳಬೇಕು

ಬಿಜೆಪಿ ತಾನು ಒಂದು ನೀತಿ ಬದ್ಧ ಪಕ್ಷವೆಂದು ಹೇಳಿಕೊಳ್ಳಲು ಆಗದ ಸ್ಥಿತಿ ತಲುಪಿದೆ. ತೀರಾ ಇತ್ತೀಚಿಗೆ ಗುಜರಾತ್ ಸಂಸತ್ ಸದಸ್ಯ ಕಟಾರಿಯಾ ಮಹಿಳೆಯರನ್ನು ವಿದೇಶಕ್ಕೆ ಮಾರಾಟಕ್ಕಾಗಿ ಕೊಂಡೊಯ್ಯುವಾಗಲೇ ಸಿಕ್ಕಿಬಿದ್ದ. ಸಂಸತ್‌ನಲ್ಲಿ ಪ್ರಶ್ನೆ ಕೇಳಲು ಲಂಚಸ್ವೀಕರಿಸಿದ ಬಿಜೆಪಿ ಸಂಸದರು ಮಾದ್ಯಮಗಳ ಕೈಗೆ ಸಿಕ್ಕಿಬಿದ್ದರು. ಮಾಜಿ ಕೇಂದ್ರ ಸಚಿವ ಅನಂತಕುಮಾರ್ ಸಚಿವನಾಗಿದ್ದಾಗ ಸಾವಿರಾರು ಕೋಟಿ ರೂಪಾಯಿಗಳ ಹುಡ್ಕೋ ಹಗರಣ ಮೇಲ್ನೋಟಕ್ಕೆ ಸಾಬೀತಾಗಿ ವಿಚಾರಣೆ ಎದುರಿಸುತ್ತಿದ್ದಾನೆ. ಇನ್ನು ರಾಜ್ಯದ ಬಿಜೆಪಿ ಸಚಿವರ ಹಗರಣಗಳು ಅಗಾಧವೆಂದು ಅಧಿಕಾರದಲ್ಲಿ ಭಾಗಿಯಾಗಿದ್ದ ಜೆಡಿ(ಎಸ್) ನಾಯಕರು ಬಹಿರಂಗವಾಗಿಯೇ ಆರೋಪಿಸುತ್ತಿದ್ದಾರೆ. ಅನೇಕ ಕ್ರಿಮಿನಲ್‌ಗಳು, ಮಾಫಿಯಾಗಳು ಬಿಜೆಪಿ ಪಕ್ಷದ ಛತ್ರಿಯಡಿ ಆಶ್ರಿತರಾಗಿದ್ದಾರೆ, ಶಾಸಕ ರೇಣುಕಾಚಾರ್ಯ ನರ್ಸ್ ಜಯಲಕ್ಷ್ಮಿ ಲೈಂಗಿಕ ಹಗರಣ ಸಾರ್ವಜನಿಕಗೊಂಡು ಹೇಸಿಗೆ ಹುಟ್ಟಿಸಿತು. ಇದನ್ನು ನಾಚಿಕೆ ಇಲ್ಲದೇ ಯಡಿಯೂರಪ್ಪ ಮುಂದಾದವರು ಬೆಂಬಲಿಸಿದರು. ಇಂತಹ ಬಿಜೆಪಿ ಕರ್ನಾಟಕವನ್ನು ಅಭಿವೃದ್ಧಿಗೊಳಿಸುವುದಾಗಿ, ಸಮೃದ್ಧಗೊಳಿಸುವುದಾಗಿ ಹೇಳುತ್ತಿದೆ. ಆದ್ದರಿಂದ ಬಿಜೆಪಿಯ ಎಲ್ಲಾ ಕುತಂತ್ರ-ದುಷ್ಟಯೋಜನೆಗಳನ್ನು ವಿಫಲಗೊಳಿಸಿ ಸೌಹಾರ್ದ ಕರ್ನಾಟಕ ಉಳಿಸಿಕೊಳ್ಳಬೇಕಿದೆ. ಕೋಮುವಾದಿಗಳು ಅಧಿಕಾರ ಹಿಡಿಯದಂತೆ ಕರ್ನಾಟಕದ ಜನತೆ ಈ ಹಿಂದೆಲ್ಲಾ ತಡೆದಿದ್ದಾರೆ. ದುಡಿಯುವ ವರ್ಗದ, ಜನಸಮೂಹಗಳ ಪ್ರಬಲ ಚಳುವಳಿ ಅಂತಹ ತಡೆಯನ್ನು ಹಾಕಬಲ್ಲದು.

ಚುಚ್ಚುಮದ್ದು

'ಪಿತ್ತ' ತಲೆಗೇರಿತೆ?

● "ಅಭಿವೃದ್ಧಿದ್ವೇಷಿಯಾಗಿರುವ ಕಮ್ಯುನಿಸ್ಟರು ಮೂರ್ಖರೂ ಹೌದು, ಅವರು ಬಹಳ ಅಪಾಯಕಾರಿ"

▶ ಕಬಳಿಸಿರುವ ಸರ್ಕಾರಿ ಭೂಮಿಯನ್ನು ಬಿಟ್ಟುಕೊಡಿ ಅಂದರೆ ಇಷ್ಟೆಲ್ಲಾ ಪಿತ್ತ ಕೆರಳುತ್ತಾ? ಅಬ್ಬಬ್ಬಾ!!

ಕೊನೆ ಅವತಾರ

● "ನನ್ನ ಬದುಕಿನ ಉಳಿದ ಭಾಗವನ್ನು ಹಿಂದೂ ಧರ್ಮದ ಏಳಿಗೆಗೆ ಮೀಸಲಿಡುತ್ತೇನೆ"

ಡಾ: ಎಂ.ಚಿದಾನಂದಮೂರ್ತಿ

▶ ಹಿಂದೆ ಕರ್ನಾಟಕ ಪ್ರತ್ಯೇಕ ರಾಷ್ಟ್ರ ಆಗಬೇಕು ಅಂತ ಬೊಬ್ಬೆ ಹೊಡೆದಿದ್ದು; ಕರ್ನಾಟಕ, ಕನ್ನಡ ರಕ್ಷಣೆ ಅಂತ ಕಿರುಚಿದ್ದು ಆ ಎಲ್ಲಾ ಅವತಾರಗಳೂ ಮುಗಿದುವಾ?

ಲೋಕ ಮಾನ್ಯ ಭಾಷೆ

● "ಸಂಸತ ಲೋಕಮಾನ್ಯ ಭಾಷೆಯಾಗಿದೆ. ದೇಶದಲ್ಲಿ 8 ರಿಂದ 10 ಲಕ್ಷ ಮಂದಿ ಸಂಸತ ಬಲ್ಲವರಿದ್ದಾರೆ. ಡಾ:ಯು.ಆರ್.ಅನಂತಮೂರ್ತಿ ಅವರಿಗೆ ಸಂಸತದ ಬಗ್ಗೆ ಗೊತ್ತಿಲ್ಲ. ಗೊತ್ತಿಲ್ಲದ ವಿಚಾರದ ಬಗ್ಗೆ ಮಾತನಾಡಬಾರದು"

ಶತಾವಧಾನಿ ಆರ್.ಗಣೇಶ್

▶ 8-10 ಲಕ್ಷ ಜನ ಬಲ್ಲ ಭಾಷೆಯೇ ಲೋಕ ಮಾನ್ಯ ಭಾಷೆ ಅಂತೀರಿ. ಆಯ್ತು ಕೋಟಿಗಟ್ಟಲೇ ಜನ ಮಾತನಾಡುವ ಉರ್ದುವನ್ನು ಲೋಕ ಮಾನ್ಯ ಭಾಷೆ ಅಂತ ನಿಮ್ಮ ಬಳಗದವರು ಒಪ್ಪುವುದಿಲ್ವಲ್ಲ ಸ್ವಾಮಿ.

ತುಲಾಭಾರ

● ಕಮಲದ ಹೂಗಳಿಂದ ಮೋದಿ ತುಲಾಭಾರ- ಸುದ್ದಿ.

▶ ಸದ್ಯ. ಜನ ಬಚಾವ್, ತಲೆ ಬುರುಡೆಗಳಿಂದ ತುಲಾಬಾರ ಮಾಡಲಿಲ್ಲವಲ್ಲ.

● "ವೈಜ್ಞಾನಿಕ ಹಾಗೂ ವೈಚಾರಿಕ ನೆಲೆಗಟ್ಟನ್ನು ಒಳಗೊಂಡಿರುವ ಶರಣಧರ್ಮ ಸರ್ವಕಾಲಿಕವಾಗಿದ್ದು ಅದು ಅಜರಾಮರವಾಗಿರುವಂತಹದ್ದು"

▶ ಅದೆಲ್ಲ ಇರಲಿ, ಶರಣ ಧರ್ಮಕ್ಕೂ ನಿಮಗೂ ಏನೂ ಸಂಬಂಧ!?

ಮೆಲ್ಲಗೆ ಹೇಳಿ

● "ಪ್ರತಿ ಬುಡಕಟ್ಟುಗಳಲ್ಲಿರುವ ಮೌಖಿಕ ರಾಮಾಯಣಗಳಲ್ಲಿ ಲಕ್ಷ್ಮಣ ನಾಯಕನೇ ವಿನಃ ರಾಮನಲ್ಲ. ಅಭಿಜಾತ ರಾಮಾಯಣಕ್ಕಿಂತ ಭಿನ್ನವಾದ ನೆಲೆ ಇವುಗಳಲ್ಲಿದೆ"

-ಡಾ: ಸಿ.ಎನ್.ರಾಮಚಂದ್ರನ್

▶ ಸ್ವಲ್ಪ ಮೆಲ್ಲಗೆ ಹೇಳಿ ಸಾರ್, ತೊಗಾಡಿಯಾನೋ ಮುತಾಲಿಕ್ಕೋ ಕೇಳಿಸಿಕೊಂಡರೇ, ಬಡಿದು ಹಾಕಿಯಾರು!!

ಸೆಳೆತ

● ಚಿತ್ರತಾರೆಯರನ್ನು ಪಕ್ಷಕ್ಕೆ ಸೆಳೆಯಲು ಬಿಜೆಪಿ ಯತ್ನ -ಸುದ್ದಿ

▶ ಜನಪರ ಹೋರಾಟ, ಕಾರ್ಯಕ್ರಮ ಇಲ್ಲದವರು ಇನ್ನೇನು ತಾನೇ ಮಾಡಲು ಸಾಧ್ಯ.

ಇದ್ದದ್ದು ಇದ್ದಾಂಗ...

ಒಡೆಯಬೇಕು

"ಇಂದು ಒಂದೊಂದು ಜಾತಿಗಳು ಒಂದೊಂದು ದ್ವೀಪದಂತೆ ಬದುಕುತ್ತಿರುವ ಜೀವನ ಶೈಲಿಯಿಂದ ಹೊರಬರಬೇಕಾದರೆ ಮನುಷ್ಯ-ಮನುಷ್ಯರ ನಡುವೆ ನಿರ್ಮಾಣವಾಗಿರುವ ಜಾತಿ ಗೋಡೆಗಳನ್ನು ಒಡೆದು ಹಾಕಬೇಕಿದೆ"

- ಕುಂ.ವೀರಭದ್ರಪ್ಪ, ಕತೆಗಾರರು

ನಾಶವಾಗದು

"ಪ್ರೇಕ್ಷಕರಿಂದ ಬದಲಾವಣೆಯಾಗುವ ನಾಟಕಕ್ಕೆ ಜೀವಂತ ಪಾತ್ರಧಾರಿಗಳ ಜತೆ ಸಂಬಂಧ ಇರುವುದರಿಂದ ಅದು ಯಾವತ್ತೂ ನಾಶವಾಗುವುದಿಲ್ಲ"

- ಗಿರೀಶ್‌ಕಾರ್ನಾಡ್, ನಾಟಕಕಾರ, ಸಾಹಿತಿ

ಆಸಕ್ತಿ -ಲಾಭ

● "ಐಐಟಿ, ಐಐಎಂಗಳಲ್ಲಿ ಓದಿದ, ಸರಿಯಾಗಿ ಮೀಸೆ ಬಾರದ ಯುವಕರಿಗೆ ವರ್ಷಕ್ಕೆ ಒಂದು ಕೋಟಿ ರೂ ಆದಾಯದ ಉದ್ಯೋಗ ದೊರಕುತ್ತಿದ್ದರೆ ಆದಾಯ ಬಾರದ ಸಾಹಿತ್ಯ ಸಂಸತಿ ಕುರಿತು ಆಸಕ್ತಿ ಕುದುರುವುದಾದರೂ ಹೇಗೆ? ಈ ವಿದ್ಯಮಾನ ಸಮಾಜಕ್ಕೆ ತಪ್ಪು ಸಂದೇಶವನ್ನು ಕೊಡುತ್ತದೆ"

- ಎ.ಈಶ್ವರಯ್ಯ, ಪತ್ರಕರ್ತರು, ಕಲಾ ವಿಮರ್ಶಕರು

ಜೀವಂತಿಕೆ ಬೇಕಾದರೆ....

"ಕನ್ನಡ ಜೀವಂತಿಕೆಯ ಭಾಷೆಯಾಗಬೇಕಾದರೆ ಜನ ಸಾಮಾನ್ಯರ ಸೊತ್ತಾಗಬೇಕಾದರೆ ಅದರಲ್ಲಿರುವ ಹೆಚ್ಚುವರಿ ಅಕ್ಷರಗಳನ್ನು ಮತ್ತು ಉಚ್ಚರಿಸಲು ಹಾಗೂ ಓದಿ ತಿಳಿದುಕೊಳ್ಳಲು ಕಷ್ಟಪಡಬೇಕಾದ ಸಂಸತ ಪದಗಳನ್ನು ಕನ್ನಡ ಬರಹದಲ್ಲಿ ಬಳಸುವುದನ್ನು ನಿಲ್ಲಿಸಬೇಕು"

ಡಾ: ಟಿ.ಆರ್.ಚಂದ್ರಶೇಖರ್
ಅರ್ಥಶಾಸ್ತ್ರಜ್ಞರು, ಬರಹಗಾರರು

"ಪ್ರಜಾಪ್ರಭುತ್ವದ ಮುಖವಾಡ .....

ಪುಟ 2 ರಿಂದ

ವಿಭಾಗಗಳಲ್ಲೂ ಶರಣರು ಪ್ರಯತ್ನಿಸಿದರು. ಮಹಿಳೆಯರಿಗೆ ಅವಕಾಶ, ದಲಿತರಿಗೆ ಸಾಮಾಜಿಕ ನ್ಯಾಯ, ಅಂತರ್ಜಾತಿಯ ವಿವಾಹ ಮುಂತಾಗಿ ನಡೆಸಿ ವೈಚಾರಿಕ ಕ್ರಾಂತಿಗೆ ನಾಂದಿ ಹಾಡಿದರು. ಜಾತೀಯತೆ ಹೊಡೆದೋಡಿಸಲು ಹೆಚ್ಚೆಚ್ಚು ಅಂತರ್‌ಜಾತೀಯ ಮದುವೆಗಳಾಗಬೇಕು ಮತ್ತು ಅದನ್ನು ಪ್ರಚಾರ ಮಾಡಬೇಕು. ಧಾರ್ಮಿಕ ತತ್ವಗಳನ್ನು ಮೀರಿ ಸಮಾನತೆಯ ತತ್ವದಲ್ಲಿ ಮದುವೆಯಾದರೆ ಜಾತೀಯತೆ ಮೀರಬಹುದು. ಆದುದರಿಂದ ಶರಣ ಚಳುವಳಿ ಇಂದಿಗೂ ಪ್ರಸ್ತುತವಿದೆ.

ಜ.ಶ: ಶರಣರು ರಾಜಶಾಹಿಯನ್ನು ಎದುರಿಸಿದ್ದು ಹೇಗೆ?

ಶಾ: ಶರಣರು ರಾಜನಾಗಲಿ, ಪ್ರಧಾನಿಯಾಗಲಿ, ಅಧಿಕಾರಿಯಾಗಲಿ ಅವರನ್ನು ಗಣನೆಗೆ ತೆಗೆದುಕೊಳ್ಳಲಿಲ್ಲ. ತಮ್ಮ ತತ್ವಗಳಿಗೆ ವಿರೋಧಿಗಳಾದವರನ್ನು ಸಮರ್ಥವಾಗಿ ಎದುರಿಸಿದರು. ತಮಗೆ ಬಂದೊದಗುವ ಎಲ್ಲ ಕಷ್ಟ ಕಾರ್ಪಣ್ಯಗಳನ್ನು ಅನುಭವಿಸಿದ ಶರಣರ ಆ ನೀತಿಗಳು ಈ ಕಾಲಕ್ಕೂ ಪ್ರಸ್ತುತ ಎನಿಸುತ್ತವೆಯಲ್ಲದೇ ಲಿಂಗ, ಜಾತಿ, ಧರ್ಮಗಳನ್ನು ಮೀರಿ ಕಾಯಕ ಜೀವಿಗಳು ಒಂದು ಗೂಡಿ ಚಳುವಳಿಯನ್ನು ಅಂದು ಮುನ್ನಡೆಸಿದರು.

ಜ.ಶ: ಶತಮಾನಗಳ ನಂತರ ಶರಣ ಚಳುವಳಿಯು ಒಂದು ಪ್ರಬಲ ಸಾಮಾಜಿಕ ಆಂದೋಲನವಾಗಿ ಮುಂದುವರಿಯಲಿಲ್ಲ ಕಾರಣಗಳೇನು?

ಶಾ: ಶರಣ ಚಳುವಳಿ ಕಾಲದ ನಂತರ ಕಾಕತೀಯ ವಂಶದವರು ಆಂಧ್ರದಲ್ಲಿ ಚಳುವಳಿಯನ್ನು ಮುಂದುವರಿಸಿದರು. ಕಾಕತೀಯರು ಶರಣರಷ್ಟೇ ವೈದಿಕ ಧರ್ಮವನ್ನು ವಿರೋಧಿಸಿದರು. ಶರಣರ ನಂತರ ಹರಿಹರ, ಚಾಮರಸ ಅಷ್ಟೇ ಪ್ರಭಾವಿಗಳಾಗಿದ್ದರು. 12ನೇ ಶತಮಾನದ ನಂತರ ಸು.200 ವರ್ಷಗಳು ಕತ್ತಲೆಯ ಯುಗ. ವೈದಿಕರು ಶರಣರ ಅನೇಕ ಗ್ರಂಥಗಳನ್ನು ಸುಟ್ಟು ಹಾಕಿದರು. ಇದು ಮಹಾರಾಷ್ಟ್ರದಲ್ಲಿ ಹೆಚ್ಚಾಗಿ ನಡೆದದ್ದು ಇತಿಹಾಸ. ನಂತರ ವಿಜಯನಗರ ಅರಸರ ಕಾಲದಲ್ಲಿ ಪುನಃ ಚೇತನ ಗೊಂಡಿದ್ದು ಕಾಣುತ್ತೇವೆ. ತದನಂತರದ ಕಾಲದಲ್ಲಿ ಮಠಗಳ ಅಧಿಪತ್ಯಕ್ಕೆ ಒಳಪಟ್ಟ ವಚನ ಸಾಹಿತ್ಯ ಸಂಕುಚಿತವಾಗತೊಡಗಿತು. ಸಮಕಾಲೀನ ಸಂದರ್ಭದಲ್ಲಿ ಮಠಗಳ ಬೆಳವಣಿಗೆ ಬಗ್ಗೆ ಚಿಂತನೆ ನಡೆದಿದೆಯೇ ವಿನಃ ಸಾಮಾಜಿಕವಾಗಿ ಆರ್ಥಿಕವಾಗಿ ಜನರನ್ನು ಸಮಾನತೆಯ ಬದುಕಿನ ಕಡೆಗೆ ಬಯ್ಯುವ ತಾತ್ವಿಕ ಮಠಗಳ ಕೊರತೆ ಎದ್ದು ಕಾಣುತ್ತಿದೆ. ಜನತೆಗೆ ತಾತ್ವಿಕ ತಿಳುವಳಿಕೆ ಹೇಳುವುದು ಇಂದಿನ ಮಠಾಧೀಶರಿಗೆ ಬೇಕಾಗಿಲ್ಲ. ಶಿಕ್ಷಣ ಸಂಸ್ಥೆಗಳನ್ನು ಅವರು ಸ್ಥಾಪಿಸಿ ವ್ಯಾಪಾರೀಕರಣ ಮಾಡುವಲ್ಲಿ ಮಗ್ನರಾಗಿದ್ದಾರೆ. ಈ ಎಲ್ಲ ಕಾರಣಗಳಿಗಾಗಿ ಪ್ರಬಲ ಸಾಮಾಜಿಕ ಚಳುವಳಿಯಾಗಿ ವಚನ ಚಳುವಳಿ ಮುಂದುವರಿಯಲಿಲ್ಲ.

ಜ.ಶ.: ನಿಮ್ಮ ಕತೆಗಳಲ್ಲಿ ಹೈ.ಕ.ಭಾಗದ ಪಾಳೇಗಾರಿ ಸಂಬಂಧಗಳ ಅನಾವರಣ ಮಾಡಿದ್ದೀರಿ. ಅಂದರೆ ಅಂದಿನ ಸಾಮಾಜಿಕ ಪರಿಸ್ಥಿತಿ ಹೇಗಿತ್ತು?

ಶಾ: ಭೂಮಾಲೀಕತ್ವ, ಜಮೀನ್ದಾರಿ ಪದ್ಧತಿ ಹೆಚ್ಚಾಗಿದ್ದರಿಂದ ಜನಸಾಮಾನ್ಯರ ಗೋಳು ಹೇಳತೀರದಂತಿತ್ತು. ಎರಡೇ ಕುಟುಂಬಗಳಿಗೆ 2 ಸಾವಿರ ಎಕರೆ ಭೂಮಿ ಇದ್ದರೆ ಹಳ್ಳಿಯ ಮಾದಿಗನಿಗೆ, 1 ಅಥವಾ 2 ಎಕರೆ ಭೂಮಿ ಇತ್ತು. ನಿಜಾಮರು ಹಳ್ಳಿಗಳನ್ನು ಧಾರಾಳವಾಗಿ ಭೂ ಮಾಲೀಕರಿಗೆ ಬಳುವಳಿಯಾಗಿ ಕೊಡುತ್ತಿದ್ದರು. ಹಳ್ಳಿಯ ಪ್ರಮುಖನೇ ನ್ಯಾಯಾಧೀಶನಾಗಿದ್ದು ಆಡಳಿತ ನಡೆಸುತ್ತಿದ್ದ. ದಲಿತರ ಮೇಲಿನ ಶೋಷಣೆ ಹೆಚ್ಚಾಗಿತ್ತಲ್ಲದೇ ದಲಿತರ ಪರವಾಗಿ ಮಾತನಾಡುವವರು ಯಾರೂ ಇರಲಿಲ್ಲ. ಒಂದು ವರ್ಷಕ್ಕೆ 3ರೂ. ಕೂಲಿ ಕೊಡುತ್ತಿದ್ದ ಜೀತ ಪದ್ಧತಿಯೂ ಚಲಾವಣೆಯಲ್ಲಿತ್ತು. ಅದಕ್ಕಾಗಿ ಕೆಲವು ಹಳ್ಳಿಗಳಲ್ಲಿ ಮಾದಿಗರನ್ನು ಪಾದ್ರಿಗಳೆಂದು ಕರೆಯುವ ವಾಡಿಕೆ ಇತ್ತು. ಸಾಮಾಜಿಕ ಸ್ಥಾನಮಾನಕ್ಕಾಗಿ ಹೆಚ್ಚು ಮತಾಂತರವಾಗಿದ್ದು ಕಂಡುಬರುವುದಿಲ್ಲವಾದರೂ ಬೀದರ್ ಜಿಲ್ಲೆಯಲ್ಲಿ ಸ್ವಲ್ಪಮಟ್ಟಿಗೆ ಅನ್ಯಧರ್ಮ ಸೇರಿದ್ದು ಕಾಣುತ್ತೇವೆ. ಈ ಹಿನ್ನೆಲೆಯಲ್ಲಿ ಮೇಲ್ವರ್ಗದ ಜನರ ದಬ್ಬಾಳಿಕೆ, ದೌರ್ಜನ್ಯಗಳು ಹಾಗೂ ಅವರ ವರ್ತನೆಗಳೇ ನನ್ನ ಕಥೆಗಳಲ್ಲಿ ಪ್ರಮುಖವಾಗಿ ಕಾಣುತ್ತವೆ.

ಜ.ಶ.: ನಿಮ್ಮ ಸಾಹಿತ್ಯದಲ್ಲಿ ಮಹಿಳೆಯರಿಗೂ ಪ್ರಾಧಾನ್ಯತೆ ಕೊಟ್ಟಿದ್ದೀರಿ. ಆಗಿನ ಮಹಿಳೆಯರ ಪರಿಸ್ಥಿತಿ ಹೇಗಿತ್ತು?

ಶಾ: ಪಾಳೇಗಾರಿ ವ್ಯವಸ್ಥೆ ಇದ್ದುದರಿಂದ ಮಹಿಳೆಯೂ ಸಾಮಾಜಿಕವಾಗಿ, ಆರ್ಥಿಕವಾಗಿ ಶೋಷಣೆಗೆ ಒಳಗಾಗಿದ್ದಳು. ಮಹಿಳೆಯರ ಶೋಷಣೆಯ ಬಗ್ಗೆ ನಡೆದ ಘಟನೆಗಳನ್ನೇ ನಾನು ಕತೆಗಳಲ್ಲಿ ಚಿತ್ರಿಸಿದ್ದೇನೆ. ಪುರುಷ ಪ್ರಧಾನ ಸಮಾಜದ ವರ್ತನೆಗಳು ನನ್ನ ಕತೆಗಳಲ್ಲಿ ಬಿಂಬಿತವಾಗಿವೆ. ಈ ಹೊತ್ತಿಗೆ ಪುರುಷ ಪ್ರಧಾನ ನಂಬಿಕೆಗಳ ಕೋಟೆ ಒಡೆದು ಸ್ತ್ರೀಯರನ್ನು ನೋಡುವ ಒಟ್ಟು ದೃಷ್ಟಿಕೋನದಲ್ಲಿ ಸಮಗ್ರ ಬದಲಾವಣೆ ತರಬೇಕಿದೆ.

ಜ.ಶ.: ಆಂಧ್ರದಲ್ಲಿ ತೆಲಂಗಾಣ ಹೋರಾಟ ತೀವ್ರವಾಗಿದ್ದ ಕಾಲದಲ್ಲಿ ಕಮ್ಯುನಿಸ್ಟರು ರಜಾಕಾರರಿಗೆ ಬೆಂಬಲಿಸಿದರು ಎಂದು ಇಂದಿನ ಕೆಲವು ಇತಿಹಾಸಕಾರರು ಹೇಳುತ್ತಿರುವುದು ಎಷ್ಟು ಸತ್ಯ?

ಶಾ: ಆಂಧ್ರದಲ್ಲಿ ಕಮ್ಯುನಿಸ್ಟರು ಭೂ ಮಾಲೀಕರ ವಿರುದ್ಧ, ನಿಜಾಮನ ಸರ್ವಾಧಿಕಾರಿ ಆಡಳಿತದ ವಿರುದ್ಧ ಹೋರಾಟ ಮಾಡಿದರು. ರಜಾಕಾರರ ಯೋಚನೆ, ಯೋಜನೆಗಳೇ ಬೇರೆ; ಕಮ್ಯುನಿಸ್ಟರ ಯೋಚನೆ, ಗುರಿಗಳೇ ಬೇರೆ ಆಗಿದ್ದವು. ಅನೇಕ ಬ್ರಾಹ್ಮಣರನ್ನೊಳಗೊಂಡು ಹಿಂದೂಗಳೂ ಮತ್ತು ಮುಸ್ಲಿಮರು ರಜಾಕಾರರಾಗಿದ್ದರು. ಆದರೆ ಕಮ್ಯುನಿಸ್ಟರು ರಜಾಕಾರರಿಗೆ ಬೆಂಬಲಿಸಿದ್ದರು ಎಂದು ಹೇಳುವುದು ಶುದ್ಧ ಸುಳ್ಳು.

ಜ.ಶ.: ಜಾಗತೀಕರಣವು ಭಾಷೆ ಮತ್ತು ಸಂಸ□ತಿಯ ಮೇಲೆ ಯಾವ ರೀತಿಯ ದುಷ್ಪರಿಣಾಮ ಬೀರುತ್ತಿದೆ?

ಶಾ: ಒಂದನೇ ತರಗತಿಯಿಂದಲೇ ಇಂಗ್ಲೀಷ್ ಭಾಷೆ ಕಲಿಸಬೇಕೆನ್ನುವುದೇ ಒಂದು ದೊಡ್ಡ ಹೊಡೆತ. ಎಲ್ಲವೂ ಇಂಗ್ಲೀಷ್‌ನಿಂದ ಕಲಿಸಬೇಕೆನ್ನುವುದು, ಕನ್ನಡವೇ ಬೇಡ ಎಂದು ಹೇಳಿದಂತೆ. ಐಟಿ ಬಿಟಿಯಲ್ಲಂತೂ ಕನ್ನಡವೇ ಕಣ್ಮರೆಯಾಗಿದೆ. ಭಾಷೆ ಕ್ಷೀಣಿಸಿದರೆ ಸಂಸತಿಯೂ ಕ್ಷೀಣಿಸಿದಂತೆಯೇ. ಜಾಗತೀಕರಣದ ಪ್ರಭಾವಕ್ಕೊಳಗಾಗಿ ಭಾಷೆ ಮತ್ತು ಸಂಸತಿಗಳು ನಾಶವಾಗುತ್ತಿವೆ. ಈ ಜೀವ ವಿರೋಧಿ ಜಾಗತೀಕರಣವು ನಮ್ಮ ಪರಂಪರಾಗತ ಸಾಂಸತಿಕ ಲೋಕವನ್ನೇ ಕಬಳಿಸುತ್ತಿರುವುದು ಆತಂಕಕಾರಿ ಸಂಗತಿಯಾಗಿದೆ. ಹೀಗಿದ್ದಾಗ ಕಾಶ್ಮೀರದಿಂದ ಕನ್ಯಾಕುಮಾರಿವರೆಗೆ ಒಂದೇ ಸಂಸತಿ ಎಂಬುದೇ ದೊಡ್ಡ ಮೋಸ. ನಿಜವಾದ ಅರ್ಥದಲ್ಲಿ ಒಟ್ಟು ಜನಸಮುದಾಯದ ದಿನನಿತ್ಯದ ಕಷ್ಟ ಕಾರ್ಪಣ್ಯಗಳ ಕುರಿತಾದ ವ್ಯಾಖ್ಯಾನವೇ ಸಂಸತಿ. ಅದು ಇಡೀ ಜನ ಕೋಟಿಯ ಉಸಿರಗಾಥೆ.

ಜ.ಶ.: ಜಾಗತೀಕರಣದ ಈ ಸಂದರ್ಭದಲ್ಲಿ ಸಾಹಿತಿಗಳ ಸ್ಪಂದನ ಹೇಗಿರಬೇಕು?

ಶಾ: ಬಹುರಾಷ್ಟ್ರೀಯ ಕಂಪನಿಗಳ ಕುತಂತ್ರ ಮತ್ತು ಜಾಗತೀಕರಣ ವಿರೋಧಿ ಸಾಹಿತ್ಯ ನಿರೀಕ್ಷಿಸಿದಷ್ಟು ಜಾಸ್ತಿ ಆಗಿಲ್ಲ. ವೈಚಾರಿಕ ಸಾಹಿತಿಗಳು ಒಟ್ಟಿಗೆ ಸೇರಿ ವಿಚಾರ ಮಂಥನ ಮಾಡಬೇಕು. ಸಾಹಿತಿಗಳು . ಸಾಹಿತ್ಯ ರಚಿಸುವುದರೊಂದಿಗೆ ಹಳ್ಳಿ ಹಳ್ಳಿಗಳಿಗೆ ಹೋಗಿ ಜನಸಾಮಾನ್ಯರ ಮನಸ್ಸುಗಳನ್ನು ಪರಿವರ್ತಿಸಬೇಕು. ಸಮಾಜ ಬದಲಾವಣೆಗಾಗಿ ತುಡಿಯುವ ಎಲ್ಲರೊಂದಿಗೆ ಸೇರಿ ಸಾಹಿತಿಗಳು ಒಂದು ಸ್ಪಷ್ಟ ನಿಲುವು ತಾಳಿ ಜನಸಾಮಾನ್ಯರ ಕಾಳಜಿಗಾಗಿ ಸಾಹಿತ್ಯದ ಜೊತೆಗೆ ಚಳುವಳಿಗಿಳಿಯಬೇಕು. ಬೀದಿಗಿಳಿಯಬೇಕು. ಅಂದಾಗ ಮಾತ್ರ ಕ್ರಮೇಣ ಬದಲಾವಣೆ ಸಾಧ್ಯವಾಗುತ್ತದೆ. ○

ಸಂದರ್ಶನದುದ್ದಕ್ಕೂ ಡಾ: ಪ್ರಭುಖಾನಾಪುರೆ ಸಾಥ್ ನೀಡಿದರು. ಹಾಗೆಯೇ ಸಾಹಿತಿಗಳಾದ ಸಿದ್ದರಾಮಹೊಸಕಲ್, ಮಹಂತೇಶ ನವಲ್ಕರ್‌ರವರು ಜೊತೆಗೂಡಿದರು. ಅನಾರೋಗ್ಯದ ನಡುವೆಯೂ ಗುಲಬರ್ಗಾದ ಮನೆಯಲ್ಲಿ ಸಂದರ್ಶನ ನೀಡಿದ ಶಾಂತರಸರ [illegible]



ದಾರಾಶಿಕೊ :ತತ್ವ ಬದ್ಧತೆಯ ದುರಂತ ನಾಯಕ

ಕರ್ನಾಟಕ ನಾಟಕ ಅಕಾಡೆಮಿ, ಕೇಂದ್ರ ಸಂಗೀತ ನಾಟಕ ಅಕಾಡೆಮಿ ನವದೆಹಲಿಯವರ ಸಂಯೋಗದಲ್ಲಿ ಯುವ ರಂಗ ನಿರ್ದೇಶಕರ ನಾಟಕೋತ್ಸವ 2008ರ ಭಾಗವಾಗಿ 'ದಾರಾಶಿಕೊ'ವೆಂಬ ನಾಟಕವು 4, ಜನವರಿ 2008ರಂದು ರವೀಂದ್ರ ಕಲಾಕ್ಷೇತ್ರದಲ್ಲಿ ಪ್ರದರ್ಶನವಾಯಿತು.

ಸುಖದ ಸುಪತ್ತಿಗೆಯಲ್ಲಿ ಅನಾಥ

'ದಾರಾಶಿಕೊ' ಮೊಗಲ್ ಸಾಮ್ರಾಜ್ಯದ ಷಹಜಹಾನ್‌ನ ಹಿರಿಯ ಮಗ, ಔರಂಗಜೇಬನ ಅಣ್ಣ, ಹಿಂದೂ ಹಾಗೂ ಮುಸ್ಲಿಂ ಧರ್ಮಗಳ ಒಳಿತನ್ನು ಸಂಗಮಿಸಿಕೊಂಡ ಅನುಭವಿ, ರಾಮಾಯಣ, ಮಹಾಭಾರತಗಳನ್ನು ಪರ್ಷಿಯನ್ ಭಾಷೆಗೆ ಅನುವಾದಿಸಿದ ಅನುವಾದಕ, ಸೂಫಿ, ಕವಿಯಾಗಿ ಸದಾ ಸಾಹಿತ್ಯ ಚರ್ಚೆ, ಸಂಗೀತಗೋಷ್ಠಿಗಳಲ್ಲಿ ನಿರತನಾಗಿರುವವ. ಸಂಪ್ರದಾಯದಂತೆ ಷಹಜಹಾನ್ ತನ್ನ ಹಿರಿಯ ಮಗನಾದ 'ದಾರಾಶಿಕೊ'ನಿಗೆ ದೆಹಲಿಯ ಪಟ್ಟವನ್ನು ಕಟ್ಟುತ್ತಾನೆ. ಇದು ಔರಂಗಜೇಬ್ ಮತ್ತು ಇತರ ಸೋದರರಿಗೆ ಸರಿಕಾಣುವುದಿಲ್ಲ. ಸದಾ ನೃತ್ಯ, ಪಾನಗೋಷ್ಠಿಗಳು, ಇಸ್ಲಾಂ ಧರ್ಮ ವಿರೋಧಿ ಸೂಫಿ ತತ್ವ ಪ್ರತಿಪಾದನೆ, ಕಾಫೀರತ್ವರನ್ನು ಉತ್ತೇಜಿಸುತ್ತದೆ ಎಂಬ ಇಸ್ಲಾಂ ಧರ್ಮದ ಉಲೇಮಗಳ ಉತ್ತೇಜನೆಯಿಂದ ತನ್ನ ಸಹಪಾಠಿಯಾದ ನಜೆರ್‌ನೆಂಬ ಖೋಜಾನಿಂದ ಶಿರಶ್ಚೇದನಕ್ಕೆ ಒಳಗಾಗುತ್ತಾನೆ ದಾರಾಶಿಕೋ. ಧಾರ್ಮಿಕ ಸಾಮರಸ್ಯ ಸಮನ್ವಯಗಳ ಪ್ರತಿಪಾದನೆಗಾಗಿ ತನ್ನ ತಮ್ಮಂದಿರ ಪಿತೂರಿಯಿಂದ ಹತನಾದ ಒಬ್ಬ ದುರಂತನಾಯಕ 'ದಾರಾಶಿಕೊ'. ಇದು ನಾಟಕದ ಕಥೆ.

ನಾಟಕಕಾರ, ಕೃತಿ, ನಿರ್ದೇಶಕರು

ಖ್ಯಾತ ಬಂಡಾಯ ಸಾಹಿತಿಗಳಲ್ಲಿ ಒಬ್ಬರಾದ ರಾಜಪ್ಪ ದಳವಾಯಿಯವರು ಈ ನಾಟಕ ರಚನೆಕಾರರು. ಇವರು ಈಗ ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ವಿಭಾಗದಲ್ಲಿ ಅಧ್ಯಾಪಕರಾಗಿ, ಅಲ್ಲದೇ ಸಾಹಿತ್ಯ, ರಂಗಭೂಮಿಯಲ್ಲಿ ಕೆಲಸ ನಿರ್ವಹಿಸುತ್ತಿದ್ದಾರೆ. ಡಾ. ಕೆ.ಕೃಷ್ಣಯ್ಯನವರು ಸಹ ಬೆಂಗಳೂರು ವಿಶ್ವವಿದ್ಯಾಲಯದ ಪ್ರದರ್ಶನ ಕಲಾ ವಿಭಾಗದಲ್ಲಿ ನಾಟಕ ವಿಷಯದ ಪ್ರವಾಚಕರಾಗಿ ಸೇವೆ ಸಲ್ಲಿಸುತ್ತಿದ್ದು, ಈ ನಾಟಕದ ಸೃಜನಶೀಲ ನಿರ್ದೇಶಕರಾಗಿದ್ದರೆ. ಬೆಂಗಳೂರು ವಿದ್ಯಾಲಯದ ಕಲಾಮೈತ್ರಿ ಸಾಂಸ್ಕೃತಿಕ ವೇದಿಕೆಯ ವಿದ್ಯಾರ್ಥಿ ತಂಡ ಈ ನಾಟಕವನ್ನು ಪ್ರದರ್ಶಿಸಿತ್ತು.

ಉತ್ತಮ ಆಶಯಗಳು

ನಾಟಕ ಸಮಕಾಲೀನ ಕೋಮುವಾದದ ಬಿಕ್ಕಟ್ಟನ್ನು ಬಿಂಬಿಸುವ ಮೂಲಕ ಧರ್ಮ ಮತ್ತೂ ತತ್ವಗಳ ಚಿಂತನೆಯನ್ನು ನಡೆಸುತ್ತದೆ. ಮಾನವೀಯತೆ, ಪರಧರ್ಮ ಸಹಿಷ್ಣುತೆಯನ್ನು ಪ್ರಧಾನ ಪ್ರಶ್ನೆಯಾಗಿಯೂ ಮಾಡಲಾಗಿದೆ. ದಾರಾಶಿಕೊ ಕೇವಲ ಪಾತ್ರವಾಗಿರದೆ, ವರ್ತಮಾನದ ಭಾವೈಕ್ಯತೆಯನ್ನು ಅರ್ಥೈಸಲು ಮಾಡಿರುವ ಪ್ರಯತ್ನ ಮೆಚ್ಚುವಂತದು. ಆದರ್ಶಗಳಿಂದ ದಾರಾಶಿಕೊ ನಮ್ಮನ್ನು ಗ್ರೀಕ್ ದುರಂತ ನಾಟಕಗಳ ನೆನಪನ್ನು ಕಟ್ಟಿಕೊಡುವುದರ ಜೊತೆಗೆ ಮತ ಧರ್ಮ, ಸಂಪ್ರದಾಯಗಳ ಕಪಟ ವಿಜೃಂಭಣೆಯನ್ನು ಬಯಲು ಮಾಡುವಲ್ಲಿ ಯಶಸ್ವಿಯಾಗಿದೆ. ಇಲ್ಲಿ ಮತಾಂಧತೆಯನ್ನು ಔರಂಗಜೇಬ್‌ನ ಅಧಿಕಾರ ದಾಹದ ಮರೆಯಲ್ಲಿ ಚಿತ್ರಿಸಲಾಗಿದೆ. ಧರ್ಮ ಬೋಧಕರು ಮಗುವಾಗಬೇಕು ಇಲ್ಲವೆ ತಾಯಿಯಾಗಬೇಕು ಎಂಬ ಕವಿಯ ಆಶಯ ಅರ್ಥಪೂರ್ಣವಾಗಿದೆ. ಯುದ್ಧ ಭೂಮಿಯಲ್ಲಿ ಸಹ ಪಶುಪಕ್ಷಿಗಳ ಜೊತೆ ಸಂಗೀತ, ಸಾಹಿತ್ಯದ ವೇದಿಕೆ ಸೃಷ್ಟಿಸಬೇಕೆನ್ನುವ ದಾರಾಶಿಕೊನ ಬಯಕೆಗಳು ನಮ್ಮ ಮನಸ್ಸು ತಟ್ಟದೇ ಇರಲಾರವು. ದಾರಾಶಿಕೊ ಇಲ್ಲಿ ಮತಾಂಧತೆಗೆ ಬಲಿಯಾದರೂ, ನೋಡುವ ಜನರ ಮನಸ್ಸಿನಲ್ಲಿ ನಾಟಕ ಹೊಸ ಉತ್ಸಾಹವನ್ನು ನೀಡುತ್ತದೆ.




ನಾಟಕದ ವೇದಿಕೆ ಒಂದೇ ಆಗಿದ್ದು ಸರಳ ಆಕರ್ಷಕವಾಗಿತ್ತು. ಆದರೆ ಬಂಧಿಖಾನೆ ಮತ್ತು ಅಫ್ಘಾನಿಸ್ತಾನದ ಸನ್ನಿವೇಶದಲ್ಲಿ ದೃಶ್ಯ ಅವಶ್ಯಕವಾಗಿ ಬದಲಾಗಬೇಕಿತ್ತು. ಉತ್ತಮ ವಸ್ತ್ರ ವಿನ್ಯಾಸ, ರಂಗಸಜ್ಜಿಕೆ ಜೊತೆ ಹಿಂದೂ ಮುಸ್ಲಿಂ ಶೈಲಿಯ ನೃತ್ಯ, ಸಂಗೀತ ಸಂಯೋಜನೆ ಚೆನ್ನಾಗಿದೆ. ದಾರಾಶಿಕೊ ಪಾತ್ರದಲ್ಲಿ ಸಂಪತ್ ಕುಮಾರ ಹಾಗೂ ಔರಂಗಜೇಬ್ ಪಾತ್ರದಲ್ಲಿ ರಮೇಶ್ ಪಾಲಸಂದ್ರರವರ ಅಭಿನಯ ಗಮನ ಸೆಳೆಯುತ್ತದೆ. ಔರಂಗಜೇಬ್ ತನ್ನ ಪರ ಧರ್ಮದ್ವೇಷದ ಬಗ್ಗೆ ತಾನೆ ಮರುಗುತ್ತಾನೆ. ತನಗೆ ಪರಧರ್ಮದ ಬಗ್ಗೆ ಅಸಹನೆ ಮೂಡಿಸಲು ಕಾರಣರಾದ ಧರ್ಮಭೋದಕ ಗುರುಗಳನ್ನು ಪ್ರಶ್ನಿಸುತ್ತಾನೆ. ಕೊನೆಗೆ ಅಧಿಕಾರದಾಹದಲ್ಲಿ ಎಲ್ಲ ಮರೆಯುತ್ತಾನೆ.

ವೀರಣ್ಣ ಕಲ್ಲನಿ
ಬಾಚಗೊಂಡನಹಳ್ಳಿ

ಫೋಟೋ

ಉಡುಪಿಯ ಮುಖ್ಯಪ್ರಾಣ
ದೇವರಿಗೆ ಮೂರು ಕೋಟಿ
ರೂಪಾಯಿಗಳ
ವಜ್ರಾಭರಣ ಧಾರಣ
- ಸುದ್ದಿ





ಕಲ್ಲು ದೇವರಿಗೆ ವಜ್ರಾಭರಣ
ಬದುಕುವ ಜೀವಿಯ ಹೊಟ್ಟೆ ಬಣಬಣ

ತೋರುವನೆ ಕೃಷ್ಣ ದರುಶನ....?



ನೇಣು ಕುಣಿಕೆಯಲ್ಲಿ
ನೇತಾಡುವಾಗ ಅನ್ನದಾತ,
ಬೆಳ್ಳಿ-ಬಂಗಾರದ ಜೊತೆ
ತುಲಾಭಾರದ ತೂಗುಯ್ಯಾಲೆ
ಹೆಣ್ಣು ಹಸುಗೂಸುಗಳು
ಬೀದಿಯಲ್ಲಿ ಅಳುವಾಗ
ಮನುಸ್ಮೃತಿಯ ಪುಟ ತಿರುವುತ್ತಿದ್ದೀರಿ,

ಸುನಾಮಿ ಹೊತ್ತೊಯ್ದ
ಅಪ್ಪ-ಅವ್ವನ ನೆನಪಿನಲ್ಲಿ,
ಕಡಲದಂಡೆಯ ತುಂಬಾ
ತಬ್ಬಲಿಗಳು
ಸುರಿಸುವಾಗ ಕಣ್ಣೀರು
ಮೌನವ್ರತದಲ್ಲಿದ್ದಿರಿ

ಜಾತಿ ಕುಂಡಗಳಲಿ
ಬೇಯುವಾಗ ಜನರು
ಯಜ್ಞಕುಂಡದ ತುಂಬಾ ಉರಿ
ಸುರಿದ ತುಪ್ಪಕೆ !

ತೋರುವನೆ ಕೃಷ್ಣ ದರುಶನ
ಕನಕನಿಗೆ ತೋರಿದ ಹಾಗೆ...?

ಅರಿಷಡ್ವರ್ಗಗಳ ಮೀರಿ
ನಿಂತರೂ ಬಿಡದ ಮೋಹ
'ಕೃಷ್ಣನ ಲೆಕ್ಕ'ದ
ಪೂಜೆಯ ದಾಹ !

ಕೃಷ್ಣನ ನಂಬಿದ ಭಕ್ತರು
ನಿಮ್ಮನು ನಂಬರು
ಲೌಕಿಕ ಗುಪ್ತ ಷರತ್ತು
ತರಲಿದೆ ಆಪತ್ತು

ಕುಳಿತಿಹರೇಕೆ ಉಪವಾಸ
ಕೂಗು ಕೇಳಿಬರುತಿಹುದು
ಸಾಕಿನ್ನು ಸಹವಾಸ,
ಹುಡುಕುತಿಹರವರು
ಕೃಷ್ಣನನ್ನು
ಉಡುಪಿಯಲ್ಲಿ !!

ಬಿ.ಶ್ರೀನಿವಾಸ
ಹಾವೇರಿ

JANASHAKTHI KANNADA VARA PATRIKE : Printed by–G.N.NAGARAJ, No 12. 18th Cross, S.R.Nagar, BANGALORE-560027 Published by: G.N.NAGARAJ, No 12. 18th Cross, S.R.Nagar, BANGALORE-560027, Karnataka on behalf of / owned by COMMUNIST PARTY OF INDIA (MARXIST) and Printed at : Kriya Prakashana, 12. 18th Cross, S.R.Nagar, BANGALORE - 560 027 Karnataka (State) and Published at BANGALORE No 12. 18th Cross, S.R.Nagar, BANGALORE-560027 Editor S.Y.GURURSHANTH, No12. 18th Cross, S.R.Nagar, BANGALORE - 560027
Editor : S.Y.GURUSHANTH